ವಿಷಯ :

"ಅಬ್ದುಲ್ ನಜೀರ್ ಸಾಬ್ : ಚಿಂತನೆಗಳು ಹಾಗೂ ಸಾಧನೆ"

(ಚರಿತ್ರೆ ಎಂ.ಫಿಲ್., ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಶೋಧನಾ ನಿಬಂಧ)

ಗಂಗಾಧರ

ಚರಿತ್ರೆ ವಿಭಾಗ

ಕರ್ನಾಟಕ ಸಂಘ ರಿ.,

ಎಂ. ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ,

ಮಂಡ್ಯ.

ಮಾರ್ಗದರ್ಶಕರು

ಡಾ. ಹೆಚ್. ಎ. ಗಂಗಮ್ಮ *ಎಂ.ಎ. ಪಿಎಚ್.ಡಿ.,*

ಸಹಾಯಕ ಪ್ರಾಧ್ಯಾಪಕರು

ಇತಿಹಾಸ ಅಧ್ಯಯನ ವಿಭಾಗ

ಮಾನಸಗಂಗೋತ್ರಿ, ಮೈಸೂರು.

ಕರ್ನಾಟಕ ಸಂಘ ರಿ.,

ಎಂ. ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ

ಮಂಡ್ಯ.

(ಕನ್ನಡ ವಿಶ್ವವಿದ್ಯಾಲಯ, ಹಂಪಿಯಿಂದ ಮಾನ್ಯತೆ ಪಡೆದಿದೆ.)

2011-12

980

ಅಬ್ದುಲ್ ನಜೀರ್ ಸಾಬ್ : ಚಿಂತನೆಗಳು ಹಾಗೂ ಸಾಧನೆ

(ಚರಿತ್ರೆ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಎಂ.ಫಿಲ್ ನಿಬಂಧ)

ಸಂಶೋಧಕರು

ಗಂಗಾಧರ ಕೆ.ಬಿ. *ಎಂ.ಎ., ಬಿ.ಇಡಿ.,*

ಚರಿತ್ರೆ ವಿಭಾಗ,

ಕರ್ನಾಟಕ ಸಂಘ (ರಿ.)

ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ

ಮಂಡ್ಯ

ಮಾರ್ಗದರ್ಶಕರು

ಡಾ. ಹೆಚ್.ಎ. ಗಂಗಮ್ಮ *ಎಂ.ಎ., ಪಿ.ಹೆಚ್.ಡಿ.*

ಸಹಾಯಕ ಪ್ರಾಧ್ಯಾಪಕರು,

ಇತಿಹಾಸ ಅಧ್ಯಯನ ವಿಭಾಗ,

ಮಾನಸ ಗಂಗೋತ್ರಿ, ಮೈಸೂರು - 06

ಕರ್ನಾಟಕ ಸಂಘ (ರಿ.)

ಎಂ.ಎಲ್. ಶ್ರೀಕಂಠೇಗೌಡ

ಸಂಶೋಧನಾ ಕೇಂದ್ರ

ಮಂಡ್ಯ

(ಕನ್ನಡ ವಿಶ್ವವಿದ್ಯಾಲಯ, ಹಂಪಿಯಿಂದ ಮಾನ್ಯತೆ ಪಡೆದಿದೆ)

2011 - 2012

ಸಂಶೋಧಕನ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರದಲ್ಲಿ 2011 - 12 ನೇ ಸಾಲಿಗೆ ಚರಿತ್ರೆ ಎಂ.ಫಿಲ್. ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್. ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು **"ಅಬ್ದುಲ್ ನಜೀರ್ ಸಾಬ್ : ಚಿಂತನೆಗಳು ಹಾಗೂ ಸಾಧನೆ"** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು **ಡಾ. ಹೆಚ್.ಎ. ಗಂಗಮ್ಮ** ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಂಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ, ನಿಬಂಧದಲ್ಲಿರುವ ಅಧ್ಯಾಯಗಳನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತ ಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ ಮತ್ತು ಕನ್ನಡ ವಿಶ್ವ ವಿದ್ಯಾಲಯವು ನೀಡುವ ಎಂ.ಫಿಲ್. ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತೇನೆ.

KRSMH
ನೊಂದಣಿ ಸಂಖ್ಯೆ-00560

KBgangadhar

ಕೆ.ಬಿ. ಗಂಗಾಧರ *ಎಂ.ಎ., ಬಿ.ಇಡಿ.,*
ಸಂಶೋಧಕ, ಚರಿತ್ರೆ ವಿಭಾಗ,
ಕರ್ನಾಟಕ ಸಂಘ (ರಿ.)
ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ, ಮಂಡ್ಯ,
(ಕನ್ನಡ ವಿ.ವಿ. ಹಂಪಿಯಿಂದ ಮಾನ್ಯತೆ ಪಡೆದಿದೆ)

ದಿನಾಂಕ: 29-06-2012.
ಸ್ಥಳ : ಮಂಡ್ಯ

2011-12

ಮಾರ್ಗದರ್ಶಕರ ಪ್ರಮಾಣ ಪತ್ರ

"**ಅಬ್ದುಲ್ ನಜೀರ್ ಸಾಬ್ : ಚಿಂತನೆಗಳು ಹಾಗೂ ಸಾಧನೆ**" ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ಶ್ರೀ ಕೆ.ಬಿ. ಗಂಗಾಧರ ರವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

Dr H Gangamma H A
Asst professor

ಡಾ. ಎಚ್. ಎ. ಗಂಗಮ್ಮ *ಎಂ.ಎ., ಪಿ.ಹೆಚ್.ಡಿ.,*
ಇತಿಹಾಸ ಅಧ್ಯಯನ ವಿಭಾಗ,
ಮಾನಸ ಗಂಗೋತ್ರಿ,
ಮೈಸೂರು -06

ದಿನಾಂಕ: 27-06-2012
ಸ್ಥಳ: ಮಂಡ್ಯ.

DEPARTMENT OF POST-GRADUATE
STUDIES AND RESEARCH IN HISTORY
UNIVERSITY OF MYSORE,
Manasagangotri, MYSORE-570 006.

ಅಬ್ದುಲ್ ನಜೀರ್ ಸಾಬ್ : ಚಿಂತನೆಗಳು ಹಾಗೂ ಸಾಧನೆ

ವಿಷಯ ಕ್ರಮ

ಅಧ್ಯಾಯ - ೧

ಪೀಠಿಕೆ

ಅಧ್ಯಾಯ -1

ಪೀಠಿಕೆ:

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಹಲವಾರು ಮಹಾನ್ ನಾಯಕರು ಕರ್ನಾಟಕದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಕರ್ನಾಟಕದಲ್ಲಿ ಇಪ್ಪತ್ತನೇ ಶತಮಾನದ ಎಂಭತ್ತರ ದಶಕದಲ್ಲಿ ಆಡಳಿತದಲ್ಲಿ ಹಿಂದೆಂದೂ ಕಂಡರಿಯದ ಕ್ರಿಯಾಶೀಲತೆ ಮೂಡಿಸಿ ಅಧಿಕಾರ ವಿಕೇಂದ್ರಿಕರಣ ಹಾಗೂ ಗ್ರಾಮೀಣಾಭಿವೃಧಿಗೆ ಪ್ರಾಮುಖ್ಯತೆ ನೀಡಿ, ಗ್ರಾಮೀಣ ಮಟ್ಟದಲ್ಲಿ ನಾಯಕತ್ವ ಬೆಳವಣಿಗೆಗೆ ಪ್ರೋತ್ಸಾಹ ನೀಡಿದ ಮಹಾನ್ ನಾಯಕರಲ್ಲಿ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಮಾತ್ರವಲ್ಲದೆ ಕರ್ನಾಟಕಾದ್ಯಂತ "ನೀರ್ ಸಾಬ್" ಎಂದೇ ಪ್ರಸಿದ್ಧರಾಗಿರುವ ಶ್ರೀ ಅಬ್ದುಲ್ ನಜೀರ್ ಸಾಬ್ ಅಗ್ರಗಣ್ಯರಾಗಿದ್ದಾರೆ.[1]

ಧೀಮಂತ ರಾಜಕಾರಣಿಯಾಗಿದ್ದ ಅಬ್ದುಲ್ ನಜೀರ್ ಸಾಬ್ ಸರಳ, ಸಜ್ಜನಿಕೆ ಹಾಗೂ ಪ್ರಾಮಾಣಿಕತೆಗೆ ಹೆಸರು ವಾಸಿಯಾಗಿದ್ದರು. ಪುರಸಭಾ ಅಧ್ಯಕ್ಷರಿಂದ ಹಿಡಿದು ಕರ್ನಾಟಕದ ಗ್ರಾಮೀಣಾಭಿವೃದ್ಧಿ ಮಂತ್ರಿ ಪದವಿವರೆಗೆ ಅಬ್ದುಲ್ ನಜೀರ್ ಸಾಬ್ ಬೆಳೆದ ಪರಿ ವಿಸ್ಮಯಕಾರಿಯಾದದ್ದು, " ಹಳ್ಳಿಗಳಲ್ಲಿ ಉದ್ಧಾರವೇ ದೇಶದ ಉದ್ಧಾರ" ಎಂಬ ಗಾಂಧೀಜಿಯವರ ಕಲ್ಪನೆಯನ್ನು ಮೈಗೂಡಿಸಿಕೊಂಡು ರಾಮಾಕೃಷ್ಣ ಹೆಗಡೆಯವರ ಸರ್ಕಾರದಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಾಗಿ ಕರ್ನಾಟಕದ ಎಲ್ಲ ಹಳ್ಳಿಗಳಲ್ಲಿದ್ದು ನೀರಿನ ಸಮಸ್ಯೆಯನ್ನು ಹೋಗಲಾಡಿಸಿ ಜನಮಾನಸದಲ್ಲಿ ಅಚ್ಚಹಳಿಯದೇ ಉಳಿದಿದ್ದಾರೆ.

1.1 ಅಧ್ಯಯನ ವಸ್ತುವಿನ ಮಹತ್ವ :

ಅಬ್ದುಲ್ ನಜೀರ್ ಸಾಬ್‌ರವರು ಕರ್ನಾಟಕ ರಾಜ್ಯಕ್ಕೆ ನೀಡಿರುವ ಕೊಡುಗೆಗಳು ಗಮನಾರ್ಹವಾಗಿವೆ ಹಾಗೂ ಜನರ ಪ್ರಸಂಸೆಗೆ ಪಾತ್ರವಾಗಿವೆ. ಧೀಮಂತ ರಾಜಕಾರಣಿ, ಸರಳ ಸಜ್ಜನ, ಪ್ರಾಮಾಣಿಕತೆಯ ಪ್ರತೀಕವಾಗಿರುವ ಅಬ್ದುಲ್ ನಜೀರ್ ಸಾಬ್ ರವರ ಅಧಿಕಾರ ವಿಕೇಂದ್ರಿಕರಣ, ಗ್ರಾಮೀಣಾಭಿವೃದ್ಧಿ ಹಾಗೂ ಜನರಪರ ಚಿಂತನೆಗಳನ್ನು ದಾಖಲಿಸುವುದು ಅವಶ್ಯಕವಾಗಿದೆ.

ಗ್ರಾಮೀಣಾಭಿವೃದ್ಧಿ ಹರಿಕಾರರಾಗಿದ್ದ ಅಬ್ದುಲ್ ನಜೀರ್ ಸಾಬ್‌ರವರು ವಿಧಾನ ಪರಿಷತ್ ಸದಸ್ಯರಾಗಿದ್ದಾಗ ಮತ್ತು ರಾಮಕೃಷ್ಣ ಹೆಗಡೆ ಸರ್ಕಾರದಲ್ಲಿ 1983 ರಿಂದ 1988ರ ವರೆಗೆ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗ ಅವರು ಜಾರಿಗೆ ತಂದ ಜನಪರ ಸುಧಾರಣೆಗಳು ಅವರಿಗೆ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಮಹತ್ವದ ಸ್ಥಾನ ತಂದು ಕೊಟ್ಟಿವೆ.[2]

"ಹಳ್ಳಿಗಳ ಉದ್ಧಾರವೇ ದೇಶದ ಉದ್ಧಾರ" ಎಂಬ ಗಾಂಧೀಜಿಯವರ ತತ್ವವನ್ನು, ರಾಮ ಮನೋಹರ ಲೋಹಿಯಾ ಮತ್ತು ಜಯ ಪ್ರಕಾಶ ನಾರಾಯಣರ ವಿಚಾರ ಧಾರೆಗಳನ್ನು ಮೈಗೂಡಿಸಿ ಕೊಂಡಿದ್ದ ಅಬ್ದುಲ್ ನಜೀರ್ ಸಾಬ್‌ರವರು ತಮ್ಮ ಜೀವನದ ಕೊನೆಯವರೆಗೂ ಆ ತತ್ವಗಳನ್ನು ತಮ್ಮ ಉಸಿರಾಗಿಸಿಕೊಂಡಿದ್ದರು. ಇವರ ಸರಳತೆ ಸಜ್ಜನಿಕೆ ಹಾಗೂ ಪ್ರಾಮಾಣಿಕತೆ ಇವರನ್ನು ಪುರಸಭಾ ಅಧ್ಯಕ್ಷ

ಗಾದಿಯಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿ ಸ್ಥಾನಕ್ಕೆ ಕೊಂಡೊಯ್ದವು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿದ್ದಾಗ ಇವರು ಕೈಗೊಂಡ ಜನಪರ ಕಾರ್ಯಗಳು ಅದರಲ್ಲಿಯೂ ಪ್ರಮುಖವಾಗಿ ಅಧಿಕಾರ ವಿಕೇಂದ್ರಿಕರಣ (ಗ್ರಾಮ ಸ್ವರಾಜ್ಯ) ದ ಕನಸನ್ನು ನನಸು ಮಾಡಿ ಮತ್ತು ಗ್ರಾಮೀಣಾಭಿವೃದ್ಧಿಗೆ ಪ್ರಾಮುಖ್ಯತೆ ನೀಡಿ ಕರ್ನಾಟಕದ ಎಲ್ಲ ಹಳ್ಳಿಗಳಲ್ಲೂ ಇದ್ದ ನೀರಿನ ಸಮಸ್ಯೆಯನ್ನು ಹೋಗಲಾಡಿಸಿ "ನೀರ್ ಸಾಬ್" ಎಂದೇ ಪ್ರಖ್ಯಾತರಾದರು.[3]

ಇಂತಹ ಸರಳ ಸಜ್ಜನ, ಧೀಮಂತ ರಾಜಕಾರಣಿ ಹಾಗೂ ಪ್ರಾಮಾಣಿಕತೆಯ ಪ್ರತೀಕವಾಗಿರುವ ಶ್ರೀ ಅಬ್ದುಲ್ ನಜೀರ್ ಸಾಬ್‌ರವರ ಚಿಂತನೆಗಳು ಹಾಗೂ ಸಾಧನೆಗಳನ್ನು ದಾಖಲಿಸುವುದು ಅಧ್ಯಯನ ವಸ್ತುವಿನ ಮಹತ್ವವಾಗಿದೆ.

1.2 ಸಂಶೋಧನಾ ವಿಧಾನ :

ಶ್ರೀ ಅಬ್ದುಲ್ ನಜೀರ್ ಸಾಬ್ ರವರ ಚಿಂತನೆ ಹಾಗೂ ಸಾಧನೆಗಳನ್ನು ಖಚಿತವಾದ ಆಧಾರಗಳ ನೆರವಿನಿಂದ ಅಧ್ಯಯನ ನಡೆಸಲಾಗಿದೆ. ಅಬ್ದುಲ್ ನಜೀರ್ ಸಾಬ್‌ರವರ ಚಿಂತನೆಗಳು ಹಾಗೂ ಸಾಧನೆಗಳನ್ನು ಕುರಿತು ಹೊರ ಬಂದಿರುವ ಗ್ರಂಥಗಳು ಹಾಗೂ ವಿವಿಧ ನಿಯತ ಕಾಲಿಕೆಗಳಲ್ಲಿ ಪ್ರಕಟವಾಗಿರುವ ಲೇಖನಗಳನ್ನು ಅಧ್ಯಯನ ಮಾಡಿ ಮಾಹಿತಿ ಸಂಗ್ರಹಿಸಲಾಗಿದೆ. ಅದಲ್ಲದೆ ಅಬ್ದುಲ್ ನಜೀರ್ ಸಾಬ್‌ರವರ ಸಮಕಾಲೀನರು ಒಡನಾಡಿಗಳು ಬಂಧು ಮಿತ್ರರು ಹಾಗೂ ಹಿತೈಷಿಗಳನ್ನು ಸಂದರ್ಶನ ಮಾಡಿ ಈ ಪ್ರಂಬಂಧವನ್ನು ರಚಿಸಲಾಗಿದೆ. ಅಲ್ಲದೇ ಬಾಹ್ಯ ಮತ್ತು ಆಂತರೀಕ ವಿಮರ್ಶಾ ವಿಧಾನವನ್ನು ಅನುಸರಿಸಿ ವೈಜ್ಞಾನಿಕ ವಿಧಾನದಿಂದ ಪ್ರಬಂಧವನ್ನು ರಚಿಸಲಾಗಿದೆ.

1.3. ಅಧ್ಯಯನಕ್ಕೆ ಸಂಬಂಧಿಸಿದ ಆಧಾರಗಳ ಸಮೀಕ್ಷೆ:

ಶ್ರೀ ಅಬ್ದುಲ್ ನಜೀರ್ ಸಾಬ್ ರವರ ಚಿಂತನೆಗಳು ಹಾಗೂ ಸಾಧನೆಯ ಬಗ್ಗೆ ಅನೇಕ ಗ್ರಂಥಗಳು ಹಾಗೂ ಲೇಖನಗಳು ಪ್ರಕಟವಾಗಿವೆ. ಇವುಗಳು ಅಬ್ದುಲ್ ನಜೀರ್ ಸಾಬ್‌ರವರ ಜೀವನ ಚಿಂತನೆಗಳು ಮತ್ತು ಸಾಧನೆಯ ವಿವರ ತಿಳಿಸುವುದರಿಂದ ಅವುಗಳ ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ.

ಮನು ಬಳಿಗಾರ್‌ರವರ "ಅಬ್ದುಲ್ ನಜೀರ್ ಸಾಬ್" ಎಂಬ ಕೃತಿಯಲ್ಲಿ ಅಬ್ದುಲ್ ನಜೀರ್ ಸಾಬ್‌ರವರು ಪ್ರತಿಭಾವಂತ ಸಂಸದೀಯ ಪಟುವಾಗಿ ಮಾಡಿದ ಸಾಧನೆಗಳನ್ನು ಕುರಿತು ಚರ್ಚಿಸಿದ್ದಾರೆ ಹಾಗೂ ವಿಧಾನ ಪರಿಷತ್ ಸದಸ್ಯರಾಗಿ ಅಬ್ದುಲ್ ನಜೀರ್ ಸಾಬ್ ಮಾಡಿದ ಕಾರ್ಯಗಳನ್ನು ಅಲ್ಲದೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್.ರಾಜ್ ಸಚಿವರಾಗಿ ಮಾಡಿದ ಸಾಧನೆಗಳನ್ನು ವಿವರವಾಗಿ ಚರ್ಚಿಸಿದ್ದಾರೆ.

ಡಾ. ಪಳನಿಸ್ವಾಮಿಯವರು "ಗುಂಡ್ಲುಪೇಟೆ ತಾಲ್ಲೂಕು ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಕೃತಿಯಲ್ಲಿ ಅಬ್ದುಲ್ ನಜೀರ್ ಸಾಬ್‌ರವರ ರಾಜಕೀಯ ಮತ್ತು ಶೈಕ್ಷಣಿಕ ಕೊಡೆಗಗಳನ್ನು ಚರ್ಚಿಸಿದ್ದಾರೆ.

ಮಲೆಯೂರು ಗುರುಸ್ವಾಮಿಯವರ "ಹೊನ್ನು ಹೊಳೆ" ಎಂಬ ಸಂಗ್ರಹ ಗ್ರಂಥದಲ್ಲಿ ಜಿ.ಡಿ. ದೊಡ್ಡಯ್ಯರವರು ಬರೆದಿರುವ ಶ್ರೀ ಅಬ್ದುಲ್ ನಜೀರ್‌ಸಾಬ್ ಎಂಬ ಲೇಖನದಲ್ಲಿ ಶ್ರೀ ಅಬ್ದುಲ್ ನಜೀರ್ ಸಾಬ್‌ರವರ ಜೀವನ ಮತ್ತು ಸಾಧನೆಗಳನ್ನು ಚರ್ಚಿಸಿದ್ದಾರೆ.

ನೀ. ಗಿರಿಗೌಡ ಮತ್ತು ಜಿ.ಜಿ. ಮಂಜುನಾಥನ್ ರವರು "ಸ್ಕಂದಗಿರಿ" ಎಂಬ ಗ್ರಂಥದಲ್ಲಿ ಶ್ರೀ ಅಬ್ದುಲ್ ನಜೀರ್ ಸಾಬ್‌ರವರ ಕೊಡುಗೆಗಳ ಬಗ್ಗೆ ಚರ್ಚಿಸಿದ್ದಾರೆ

ಟಿ.ಎಸ್. ಛಾಯಾ ಪತಿಯವರು 'ತತ್ವನಿಷ್ಠ' ಎಂಬ ಗ್ರಂಥದಲ್ಲಿ ಅಬ್ದುಲ್ ನಜೀರ್ ಸಾಬ್‌ರ ತತ್ವನಿಷ್ಠತೆ ಗುರುಭಕ್ತಿ, ಶಿಸ್ತು, ಭಾಷಣ ಕಲೆ, ಪುಸ್ತಕ ಪ್ರೇಮ ಮಾನವೀಯತೆಯ ಬಗ್ಗೆ ಬಹಳ ವಿವರವಾಗಿ ಚರ್ಚಿಸಿದ್ದಾರೆ.

ಈ ಮೇಲಿನ ಗ್ರಂಥಗಳಲ್ಲದೆ A Review of Working Karnataka Legislative assembly, A karnataka State legislative Assembly debets ಗಳನ್ನು ಅಧ್ಯಯನ ಮಾಡಿ ಅವರು ವಿಧಾನ ಪರಿಷತ್ ಸದಸ್ಯರಾಗಿದ್ದಾಗ ಮತ್ತು ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರಾಗಿ ಮಾಡಿದ ಸಾಧನೆಗಳನ್ನು ಚರ್ಚಿಸಲಾಗಿದೆ.

ಅಬ್ದುಲ್ ನಜೀರ್ ಸಾಬ್‌ರವರ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಲೇಖನಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಅಬ್ದುಲ್ ನಜೀರ್ ಸಾಬ್‌ರವರ ಚಿಂತನೆಗಳು ಮತ್ತು ಸಾಧನೆಗಳನ್ನು ಅರಿಯಲು ಸಮಕಾಲೀನರು, ಒಡನಾಡಿಗಳು, ಬಂಧು ಮಿತ್ರರು ಮತ್ತು ಹಿತೈಷಿಗಳನ್ನು ಸಂದರ್ಶನ ಮಾಡಿ ಮಾಹಿತಿಯನ್ನು ಪಡೆಯಲಾಗಿದೆ.

1.4 ಅಧ್ಯಾಯಗಳ ವರ್ಗೀಕರಣ

ಅಬ್ದುಲ್ ನಜೀರ್ ಸಾಬ್: ಚಿಂತನೆಗಳು ಹಾಗೂ ಸಾಧನೆ ಎಂಬ ನಿಬಂಧವನ್ನು ಒಟ್ಟು ಐದು ಅಧ್ಯಾಯಗಳಾಗಿ ವಿಭಾಗಿಸಲಾಗಿದೆ.

ಮೊದಲನೆಯ ಅದ್ಯಾಯದಲ್ಲಿ ಅಧ್ಯಯನ ವಸ್ತುವಿನ ಉದ್ದೇಶ ಮಹತ್ವ, ಸಂಶೋಧನಾ ವಿಧಾನ ಮತ್ತು ಸಂಶೋಧನೆಗೆ ಬಳಸಿದ ಆಧಾರಗಳ ಸಮೀಕ್ಷೆ ಮಾಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಅಬ್ದುಲ್ ನಜೀರ್ ಸಾಬ್ ಅವರ ಬಾಲ್ಯ ಜೀವನ, ವಿದ್ಯಾಭ್ಯಾಸ, ವೈವಾಹಿಕ ಜೀವನ ಅಬ್ದುಲ್ ನಜೀರ್ ಸಾಬ್‌ಗಿದ್ದ ಪುಸ್ತಕ ಪ್ರೇಮ, ಶೈಕ್ಷಣಿಕ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆಗಳನ್ನು ವಿವರಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಅಬ್ದುಲ್ ನಜೀರ್ ಸಾಬ್‌ರವರ ಚಿಂತನೆಗಳಾದ ಸಮಾಜವಾದ, ಅಧಿಕಾರ ವಿಕೇಂದ್ರಿಕರಣ ಹಾಗೂ ಗ್ರಾಮೀಣಾಭಿವೃದ್ಧಿಯ ವಿಚಾರ ಧಾರೆಗಳನ್ನು ವಿವರಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಅಬ್ದುಲ್ ನಜೀರ್‌ಸಾಬ್ ಅವರ ರಾಜಕೀಯ ಪ್ರವೇಶ ಮತ್ತು ಹಿನ್ನೆಲೆ, ನಜೀರ್ ಸಾಬ್ ಅವರು ಗುಂಡ್ಲುಪೇಟೆ ಪುರಸಭಾ ಅಧ್ಯಕ್ಷರಾಗಿ ಮಾಡಿದ ಸಾಧನೆಗಳು, ವಿಧಾನ ಪರಿಷತ್ ಸದಸ್ಯರಾಗಿ ಮತ್ತು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರಾಗಿ ಮಾಡಿದ ಸಾಧನೆಗಳನ್ನು ವಿವರಿಸಲಾಗಿದೆ ಹಾಗೂ ಅಬ್ದುಲ್ ನಜೀರ್ ಸಾಬ್‌ರ ಸಮಕಾಲೀನವರು, ಒಡನಾಡಿಗಳು, ಬಂಧು - ಮಿತ್ರರನ್ನು ಸಂದರ್ಶಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಿ ವಿವರಿಸಲಾಗಿದೆ.

ಐದನೇ ಅದ್ಯಾಯ ಉಪ ಸಂಹಾರದಲ್ಲಿ ನಿಬಂಧದ ಅಧ್ಯಯನದ ಒಟ್ಟಾರೆ ಫಲಿತಾಂಶವನ್ನು ಹಾಗೂ ಅಧ್ಯಯನಕ್ಕೆ ಸಂಬಂಧಿಸಿದ ಇತರೆ ಮಾಹಿತಿಗಳನ್ನು ವಿವರಿಸಲಾಗಿದೆ.

ಅಡಿ ಟಿಪ್ಪಣಿಗಳು

1. ಪ್ರೊ. ಮಲೆಯೂರು ಗುರುಸ್ವಾಮಿ - "ಹೊನ್ನು ಹೊಳೆ" ಪುಟ ಸಂಖ್ಯೆ 460
2. ಮನು ಬಳಿಗಾರ್ "ಪ್ರತಿಭಾವಂತ ಸಂಸದೀಯ ಪಟು "ಅಬ್ದುಲ್ ನಜೀರ್ ಸಾಬ್" ಪುಟ ಸಂಖ್ಯೆ 22
3. ಟಿ.ಎಸ್. ಛಾಯಾಪತಿ 'ತತ್ವ ನಿಷ್ಠ' ಪುಟ ಸಂಖ್ಯೆ 29

ಅಧ್ಯಾಯ - ೨

ಅಬ್ದುಲ್ ನಜೀರ್ ಸಾಬ್‌ರವರ

ಆರಂಭಿಕ ಜೀವನ

ಅಧ್ಯಾಯ -2

ಅಬ್ದುಲ್ ನಜೀರ್ ಸಾಬ್ ರವರ ಆರಂಭಿಕ ಜೀವನ

2.1 ಬಾಲ್ಯ ಜೀವನ:

ಶ್ರೀಯುತ ಅಬ್ದುಲ್ ನಜೀರ್ ಸಾಬ್‌ರವರು ಶ್ರೀ ಪೀರ್ ಸಾಹೇಬ್ ಹಾಗೂ ಅಯುಷಾಭಿ ಎಂಬ ದಂಪತಿಗಳ ಜೇಷ್ಠ ಪುತ್ರರಾಗಿ ದಿನಾಂಕ: 25-12-1934 ರಲ್ಲಿ ತಮಿಳುನಾಡಿನ ಸತ್ಯಮಂಗಲ ತಾಲ್ಲೂಕು, ತಾಳವಾಡಿ ಪಿರ್ಕಾಕ್ಕೆ ಸೇರಿದ ಬೈಯಣಪುರ ಗ್ರಾಮದಲ್ಲಿ ಕೃಷಿ ಪ್ರಧಾನ ಕುಟುಂಬದಲ್ಲಿ ಜನಿಸಿದರು.[1]

ಶ್ರೀ ಅಬ್ದುಲ್ ನಜೀರ್‌ಸಾಬ್‌ರವರ ಜನ್ಮಸ್ಥಳವಾದ ಬೈಯಣಪುರ ಗ್ರಾಮವು ಕರ್ನಾಟಕದ ಗಡಿಯಿಂದ ಕೇವಲ ಮೂರು ಕಿ.ಮೀ. ಮಾತ್ರ ದೂರದಲ್ಲಿದ್ದು, ಗುಂಡ್ಲುಪೇಟೆಯಿಂದ ಪ್ರಸಿದ್ಧ ಯಾತ್ರಾಸ್ಥಳವಾದ ಕೊಂಗಹಳ್ಳಿ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಹೋಗುವ ದಾರಿಯಲ್ಲಿದೆ. ಕರ್ನಾಟಕದ ಗಡಿಯಿಂದ ತಮಿಳುನಾಡಿಗೆ ಪ್ರವೇಶಿಸುತ್ತಿರುವಂತೆಯೇ ಮಾರ್ಗದಲ್ಲಿ ಸಿಗುವ ಮೊದಲ ಗ್ರಾಮವು ಇದಾಗಿದೆ.[2] ಈ ಗ್ರಾಮದ ಪೂರ್ವ ಹಾಗೂ ಉತ್ತರಕ್ಕೆ ಕುರುಚಲು ಗಿಡಗಳು ದಕ್ಷಿಣ ಮತ್ತು ಪಶ್ಚಿಮಕ್ಕೆ ದಟ್ಟವಾದ ಕಾಡು ಇರುವುದೊಂದು ವಿಶೇಷ ಆ ಸಂದರ್ಭದಲ್ಲಿ ಕೇವಲ ಎತ್ತಿನಗಾಡಿಯಿಂದ ಮಾತ್ರ ಇಲ್ಲಿಂದ ಬೇರೆ ಬೇರೆ ಊರುಗಳಿಗೆ ಹೋಗಬೇಕಾಗಿತ್ತು[3]

2.2 ಅಬ್ದುಲ್ ನಜೀರ್ ಸಾಬ್‌ರವರ ವಿದ್ಯಾಭ್ಯಾಸ :

ಶ್ರೀ ಅಬ್ದುಲ್ ನಜೀರ್ ಸಾಬ್‌ರವರ ಜನ್ಮ ಸ್ಥಳವಾದ ಬೈಯಣಪುರ ಗ್ರಾಮವು ತಮಿಳುನಾಡಿನಲ್ಲಿದ್ದರೂ ಗಡಿ ಗ್ರಾಮವಾಗಿದ್ದರಿಂದ ಅಲ್ಲಿ ಒಂದು ಕನ್ನಡ ಪ್ರಾಥಮಿಕ ಶಾಲೆ ಇತ್ತು ಅಲ್ಲಿಯೇ ಅಬ್ದುಲ್ ನಜೀರ್ ಸಾಬ್‌ರವರ ಪ್ರಾಥಮಿಕ ಶಿಕ್ಷಣ ಮುಗಿಯಿತು. ತಂದೆ ಪೀರ್ ಸಾಹೇಬರು ಶಿಕ್ಷಣದಿಂದ ವಂಚಿತರಾಗಿದ್ದರೂ ಸಹ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕೆಂಬ ಹಂಬಲವುಳ್ಳವರಾಗಿದ್ದರು. ಅದಕ್ಕಾಗಿಯೇ ಪೀರ್ ಸಾಹೇಬ್‌ರವರು ಕಿ.ಶ. 1946 ರಲ್ಲಿ ತಮ್ಮ ಇಡೀ ಸಂಸಾರವನ್ನು ಗುಂಡ್ಲುಪೇಟೆಗೆ ಸ್ಥಳಾಂತರಿಸಿದರು. ಮಕ್ಕಳ ಶಿಕ್ಷಣಕ್ಕಾಗಿ ಇಡೀ ಸಂಸಾರವನ್ನೇ ಸ್ಥಳಾಂತರಿಸಿದ ಇವರ ನಿರ್ಧಾರ ಶ್ಲಾಘಿಸುವಂತದ್ದು, ಇದರಿಂದಾಗಿ ಕರ್ನಾಟಕ ರಾಜ್ಯಕ್ಕೆ ಒಬ್ಬ ಮೇಧಾವಿ ರಾಜಕಾರಣಿ ದೊರೆಯುವಂತಾಯಿತು. ಇದು ನಮ್ಮ ನಾಡಿನ ಸುಯೋಗವೆಂದೇ ಹೇಳಬಹುದು. ಅಬ್ದುಲ್ ನಜೀರ್ ಸಾಬ್‌ರವರ ಕುಟುಂಬ ಗುಂಡ್ಲುಪೇಟೆಗೆ ಸ್ಥಳಾಂತರವಾದ ಮೇಲೆ ಅಬ್ದುಲ್ ನಜೀರ್ ಸಾಬ್‌ರವರ ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣ ಗುಂಡ್ಲುಪೇಟೆಯಲ್ಲಿ ನಡೆಯಿತು.

ಗುಂಡ್ಲುಪೇಟೆಯಲ್ಲಿ ಪ್ರೌಢ ಶಿಕ್ಷಣವನ್ನು ಮುಗಿಸಿದ ನಂತರ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ನಂತರ ಸೀನಿಯರ್ ಇಂಟರ್ ಮೀಡಿಯಟ್‌ನ ವ್ಯಾಸಂಗ ಮಾಡುತ್ತಿದ್ದ ಸಮಯದಲ್ಲಿ ಅತಿ ಹೆಚ್ಚಿನ ಪಠ್ಯ ಮತ್ತು ಪಠ್ಯೇತರ ಓದಿನಿಂದ ಆರೋಗ್ಯ ಹದಗೆಟ್ಟಿತು.

ಶ್ರೀ ಅಬ್ದುಲ್ ನಜೀರ್ ಸಾಬ್‌ರವರ ಹೆಚ್ಚಿನ ವ್ಯಾಸಂಗಕ್ಕೆ ಪ್ರೇರಕ ಶಕ್ತಿಯಾಗಿದ್ದಂತಹ ಇವರ ತಂದೆ ಪೀರ್ ಸಾಹೇಬರು ತಮ್ಮ ಮಗನ ವ್ಯಾಸಂಗವನ್ನು ಮೊಟಕುಗೊಳಿಸುವಂತಹ ಅನಿವಾರ್ಯತೆ ಉಂಟಾಯಿತು. ಇವರ ಅನಾರೋಗ್ಯದಿಂದ ಕುಟುಂಬ ವರ್ಗದಲ್ಲಿ ಆತಂಕ ಹೆಚ್ಚಾಯಿತು. ಅಂದಿನ ದಿನಗಳಲ್ಲಿ ಉತ್ತಮ ಸೌಲಭ್ಯ ದೊರೆಯದ ಕಾರಣ ವೈದ್ಯಕೀಯ ಶುಶ್ರೂಷೆಯ ಜೊತೆಗೆ ಹರಕೆ, ಪೂಜೆ, ಪುನಸ್ಕಾರಗಳನ್ನು ಮಾಡುವಂತಹ ಸನ್ನಿವೇಶ ಉಂಟಾಗಿತ್ತು. ಅದೃಷ್ಟವಶಾತ್ ಮುಂದಿನ ಎರಡು ವರ್ಷಗಳಲ್ಲಿ ಕ್ರಮೇಣ ಗುಣಮುಖರಾದರು.[4]

2.3 ವೈವಾಹಿಕ ಜೀವನ:

ಶ್ರೀ ಅಬ್ದುಲ್ ನಜೀರ್ ಸಾಬ್‌ರವರಿಗೆ ಮೂವರು ಸಹೋದರರು ಇದ್ದರು ಅವರುಗಳೆಂದರೆ ಶ್ರೀ ಅನ್ವರ್‌ಪಾಷ, ಶ್ರೀ ಮಹಮ್ಮದ್ ಯುಸುಫ್, ಹಾಗೂ ಶ್ರೀ ಮಹಮ್ಮದ್ ಇಸಾಕ್, ಇವರಲ್ಲದೆ, ಅಬ್ದುಲ್ ನಜೀರ್ ಸಾಬ್‌ರವರಿಗೆ ಇಬ್ಬರು ಅಕ್ಕಂದಿರು ಶ್ರೀಮತಿ ಖಮರುನ್ನೀಸಾ, ಶ್ರೀಮತಿ ಹಮೀದಾ ಹಾಗೂ ಮೂವರು ತಂಗಿಯರು ಶ್ರೀಮತಿ ಫಾತಿಮಮಾಬಿ ಶ್ರೀಮತಿ ಸಬೀನಾ ಹಾಗೂ ಶ್ರೀಮತಿ ಜಮಿಲಾ.

ಅಬ್ದುಲ್ ನಜೀರ್ ಸಾಬ್‌ರವರು ಅಕ್ಕಂದಿರಿಗೆ ಪ್ರೀತಿಯ ತಮ್ಮನಾಗಿ ಸಹೋದರಿಯರಿಗೆ ಪ್ರೀತಿಯ ಅಣ್ಣನಾಗಿ ತಮ್ಮಂದಿರಿಗೆ ಹಿರಿಯಣ್ಣನಾಗಿ ನಜೀರ್ ಸಾಬ್ ಬೆಳೆದರು.

ಶ್ರೀ ಅಬ್ದುಲ್ ನಜೀರ್ ಸಾಬ್‌ರವರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಸೀನಿಯರ್ ಇಂಟರ್ ಮೀಡಿಯಟ್ ಶಿಕ್ಷಣ ಪಡೆಯುತ್ತಿದ್ದಾಗ ಅನಾರೋಗ್ಯಕ್ಕೆ ತುತ್ತಾದರು. ಎರಡು ವರ್ಷಗಳ ನಂತರ ಅನಾರೋಗ್ಯದಿಂದ ಮುಕ್ತರಾದ ಮೇಲೆ ತಮ್ಮ 21ನೇ ವಯಸ್ಸಿನಲ್ಲಿ ಚಾಮರಾಜನಗರದಲ್ಲಿ ಶ್ರೀ ಖದಿರ್‌ಬೇಗ್‌ರವರ ಮಗಳು ಚಿ.ಸೌ. ಅಶ್ರಫ್ ಜಹ ಬೇಗಂ ರವರ ಜೊತೆ ವಿವಾಹವಾದರು.

ಶ್ರೀ ಅಬ್ದುಲ್ ನಜೀರ್ ಸಾಬ್‌ರವರಿಗೆ ವಿವಾಹವಾದ ನಂತರ ಅವರ ಕುಟುಂಬ ಗುಂಡ್ಲುಪೇಟೆಯಲ್ಲಿ ಸಾಗುತ್ತಿರಲು ಅವರಿಗೆ ಶ್ರೀ ಮುನೀರ್ ಅಹಮ್ಮದ್ ಎಂಬ ಗಂಡು ಮಗ ಹಾಗೂ ಶಕೀಲ ಬೇಗಂ, ಶಬಿನಾ ಬೇಗಂ, ಮುಬಿನಾ ಬೇಗಂ, ಸಮೀನಾ ಬೇಗಂ, ಎಂಬ ನಾಲ್ವರು ಹೆಣ್ಣು ಮಕ್ಕಳು ಜನಿಸಿದರು. ಆದರೆ ಅಬ್ದುಲ್ ನಜೀರ್ ಸಾಬ್‌ರವರು ತಮ್ಮ ಸ್ವಂತ ಮಕ್ಕಳ ಮೇಲೆ ಹೆಚ್ಚಿನ ಲಕ್ಷ್ಯ ನೀಡಲಾಗಲಿಲ್ಲ. ಏಕೆಂದರೆ ಅವರ ಜನಪರ ಕಾಳಜಿ ಬಡವರ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸಬೇಕೆನ್ನುವುದಾಗಿತ್ತು. ಹಾಗಾಗಿ ತಮ್ಮ ಮುಂದಿನ ಜೀವನವನ್ನು ಜನ ಸೇವೆಗಾಗಿ ಮುಡಿಪಾಗಿಟ್ಟರು.[5]

2.4. ಪುಸ್ತಕ ಪ್ರೇಮಿಯಗಿ ನಜೀರ್ ಸಾಬ್ :

ಶ್ರೀ ಅಬ್ದುಲ್ ನಜೀರ್ ಸಾಬ್ ರವರು ಒಬ್ಬ ಮೇರು ವ್ಯಕ್ತಿಯಾಗಿ ರೂಪುಗೊಳ್ಳುವುದಕ್ಕೆ ಹಲವಾರು ಕಾರಣಗಳಿವೆ.

ಅವುಗಳಲ್ಲಿ ತಂದೆ - ತಾಯಿ, ಕುಟುಂಬ, ಸಮಾಜ, ಇತ್ಯಾದಿಗಳು ಒಂದೆಡೆಯಾದರೆ, ಮತ್ತೊಂದೆಡೆ ಸಮಾಜವಾದಿ ಶಾಂತವೇರಿ ಗೋಪಾಲೇಗೌಡರು, ಮಹಾತ್ಮಗಾಂಧೀಜಿ, ರಾಮ ಮನೋಹರ ಲೋಹಿಯಾ, ಜಯಪ್ರಕಾಶ ನಾರಾಯಣ, ಕಾರ್ಲ್‌ಮಾರ್ಕ್ಸ್ ಲೆನಿನ್ ಮುಂತಾದವರಿಂದ ಪ್ರಬಾವಿತರಾಗಿದ್ದರು.

ಶ್ರೀ ಅಬ್ದುಲ್ ನಜೀರ್ ಸಾಬ್‌ರವರ ವೈಚಾರಿಕತೆಯ ಬೆಳವಣಿಗೆಗೆ ಅವರಿಗಿದ್ದ ಅಪಾರವಾದ ಪುಸ್ತಕ ಪ್ರೇಮವೇ ಕಾರಣವೆನ್ನಬಹುದು.

ಶ್ರೀ ಅಬ್ದುಲ್ ನಜೀರ್ ಸಾಬ್‌ರವರು ತಮ್ಮ ಬಾಲ್ಯದ ವಿದ್ಯಾಭ್ಯಾಸದ ಅವಧಿಯಲ್ಲಿ ಹೆಚ್ಚಿನ ಓದುವ ಹವ್ಯಾಸವನ್ನು ತಮ್ಮ ಆಸ್ತಿಯನ್ನಾಗಿಸಿಕೊಂಡರು ಎಲ್ಲ ತರಹದ ಜ್ಞಾನ ಸಂಪಾದನೆಯ ಸಲುವಾಗಿ ಪ್ರತಿನಿತ್ಯ ರಾತ್ರಿ 2 ಗಂಟೆಯವರೆಗೆ ಓದುತ್ತಿದ್ದರು. ಇವರ ಅತಿಯಾದ ಓದಿನಿಂದ ಆರೋಗ್ಯ ಹದಗೆಟ್ಟು ವಿದ್ಯಾಭ್ಯಾಸ ಮೊಟಕುಗೊಂಡಿತು. ಆದರೂ ಕದ್ದು ಮುಚ್ಚಿ ಓದುವ ಹವ್ಯಾಸ ಮುಂದುವರೆಯಿತು. ಅಪಾರವಾದ ಜ್ಞಾಪಕಶಕ್ತಿ ಹೊಂದಿದ್ದ ಇವರು ತಾವೇ ಒಂದು ಪುಸ್ತಕ ಭಂಡಾರವಾಗಿದ್ದರು.

ಶ್ರೀ ಅಬ್ದುಲ್ ನಜೀರ್ ಸಾಬ್‌ರವರು ಪುಸ್ತಕ ಪ್ರೇಮಿಯಾಗಿದ್ದರೆಂಬುದಕ್ಕೆ ಅವರ ಆತ್ಮೀಯ ಮಿತ್ರರಾದ ಶ್ರೀ ರಮೇಶ್‌ಕುಮಾರ್ ಹಾಗೂ ಶ್ರೀ ಎಂ. ರಘುಪತಿಯವರು ಹೇಳಿದ ಎರಡು ಪ್ರಸಂಗಗಳು ಸಾಕ್ಷಿಯಾಗಿವೆ.

ಒಮ್ಮೆ ಶ್ರೀ ರಮೇಶ್‌ಕುಮಾರ್, ರಘುಪತಿ ಎಂ. ಹಾಗೂ ಅಬ್ದುಲ್ ನಜೀರ್ ಸಾಬ್‌ರವರು ದೆಹಲಿಗೆ ಹೋಗಿದ್ದರು. ಅದೇ ಸಮಯದಲ್ಲಿ ಅಬ್ದುಲ್ ನಜೀರ್ ಸಾಬ್‌ರವರ ಕುಟುಂಬ ಸದಸ್ಯರೊಬ್ಬರ ಆರೋಗ್ಯ ತೀವ್ರವಾಗಿ ಹದಗೆಟ್ಟು ಅವರು ಬೆಂಗಳೂರಿಗೆ ಧಾವಿಸಬೇಕಾಗಿ ಬಂತು. ಆದರೆ ನಜೀರ್ ಸಾಬ್‌ರವರ ಹತ್ತಿರ ಬೆಂಗಳೂರಿಗೆ ವಿಮಾನ ಏರಿ ಬರುವಷ್ಟು ಹಣವಿರಲಿಲ್ಲ. ಆಗ ತಮ್ಮ ಮಿತ್ರರಾದ ರಮೇಶ್‌ಕುಮಾರ್ ಮತ್ತು ರಘುಪತಿಯವರಿಂದ ಸಾಲ ಪಡೆದುಕೊಂಡು ವಿಮಾನ ಏರಿ ಬೆಂಗಳೂರಿಗೆ ಬರದೆ ಸೀದಾ ಪುಸ್ತಕ ಮಳಿಗೆಗೆ ಹೋಗಿ ತಮಗೆ ಇಷ್ಟವಾದ ಪುಸ್ತಕಗಳನ್ನು ಕೊಂಡರು. ನಂತರ ಉಳಿದ ಹಣದಲ್ಲಿ ರೈಲಿನಲ್ಲಿ ಬೆಂಗಳೂರಿಗೆ ಪ್ರಯಾಣಿಸಿದರು. ಈ ಮೇಲಿನ ಘಟನೆ ಅಬ್ದುಲ್ ನಜೀರ್ ಸಾಬ್ ಅವರಿಗಿದ್ದ ಪುಸ್ತಕ ಪ್ರೇಮದ ಬಗ್ಗೆ ತಿಳಿಸುತ್ತದೆ.

ಈ ಮೇಲಿನ ಪ್ರಸಂಗದಂತೆಯೇ ಒಮ್ಮೆ ಅಬ್ದುಲ್ ನಜೀರ್ ಸಾಬ್ ರವರು ವಿಧಾನ ಪರಿಷತ್ ಸದಸ್ಯರಾಗಿದ್ದಾಗ ಬೆಂಗಳೂರಿನಿಂದ ಗುಂಡ್ಲುಪೇಟೆಗೆ ಬಸ್ಸಿನಲ್ಲಿ ಪ್ರಯಾಣ ಬೆಳೆಸಿದ್ದರು. ಮಾಮೂಲಿನಂತೆ ಕೈಯಲ್ಲಿ ಒಂದು ಪುಸ್ತಕ ಹಿಡಿದು ಆಸೀನರಾಗಿದ್ದರು.

ನಜೀರ್ ಸಾಬ್‌ರವರು ಓದಲು ಪ್ರಾರಂಭಿಸಿದರು ನಾಲ್ಕೈದು ಗಂಟೆ ಕಳೆದರೂ ಅವರ ಏಕಾಗ್ರತೆಗೆ ಧಕ್ಕೆ ಬರಲಿಲ್ಲ. ಬಸ್ಸು ಮೈಸೂರು ದಾಟಿ ಗುಂಡ್ಲುಪೇಟೆಗೆ ಬಂದಿತು ಆದರೆ ಓದಿಗೆ ಭಂಗವಾಗಲಿಲ್ಲ ಬಸ್ಸು ಗುಂಡ್ಲುಪೇಟೆ ಬಿಟ್ಟು ಊಟಿ ತಲುಪಿತು. ಆಗ ನಜೀರ್ ಕಂಡಕ್ಟರ್‌ನ್ನು "ಏನಯ್ಯಾ ಗುಂಡ್ಲುಪೇಟೆ ಬಂದಾಗ ಹೇಳಬಾರದಿತ್ತೆ" ಎಂದು ಪ್ರಶ್ನಿಸಿದ್ದಾರೆ ಆಗ ಕಂಡಕ್ಟರ್ ಎಂ.ಎಲ್.ಸಿ. ಸಾಹೇಬರು ಊಟಿಗೆ

ಹೊರಟಿರಬಹುದೆಂದು ಸುಮ್ಮನಾದೆ ಮತ್ತು ನೀವು ಗಾಢವಾಗಿ ಓದುತ್ತಿದ್ದರಿಂದ ಎಬ್ಬಿಸಲಿಲ್ಲ ಎಂದರಂತೆ ಆಗ ನಜೀರ್ ಸಾಬ್ ಆ ರಾತ್ರಿ ಬಸ್ಸಿನಲ್ಲಿ ಕಳೆದು ಮಾರನೆ ದಿನ ಗುಂಡ್ಲುಪೇಟೆ ತಲುಪಿದರು. ಈ ಘಟನೆ ಓದಿನ ಮೇಲೆ ಅವರಿದ್ದ ಅಭಿರುಚಿಯನ್ನು ತಿಳಿಸುತ್ತದೆ.[6]

ಅಬ್ದುಲ್ ನಜೀರ್ ಸಾಬ್‌ರವರಿಗೆ ಓದುವುದೆಂದರೆ ಪಂಚಪ್ರಾಣ, ಓದಿದ ಗ್ರಂಥವನ್ನು ಮನನ ಮಾಡಿ ಅನುಭವಿಸುವ ರೀತಿ ಅನನ್ಯವಾದುದು ಅಬ್ದುಲ್ ನಜೀರ್ ಸಾಬ್‌ರವರ ಪುಸ್ತಕ ಕೊಂಡು ಓದುವ ಹವ್ಯಾಸ ಎಲ್ಲರಿಗೂ ಮಾದರಿ ಹಾಗೂ ಅನುಕರಣೀಯವಾಗಿದೆ.

ನಜೀರ್ ಸಾಬ್‌ರ ಗುರುಭಕ್ತಿ

ನಜೀರರ ಗುರುಭಕ್ತಿ ಇಂದಿನ ವಿದ್ಯಾರ್ಥಿಗಳು ಅನುಕರಿಸುವಂಥದ್ದು, ನಜೀರರು ಸಂಸ್ಕೃತವನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದರು. ಎಂದರೆ ಬಹು ಮಂದಿ ಹುಬ್ಬೇರಿಸಬಹುದು. ವಾಸ್ತವವಾಗಿ ನಜೀರರು ಹಿಂದಿನ ಗುರುಕುಲದಲ್ಲಿ ವಿದ್ಯಾರ್ಥಿಗಳು ಪಾಠ ಕಲಿಯುತ್ತಿದ್ದ ರೀತಿಯಲ್ಲಿ ಗುರುಗಳಾದ ಹುಲ್ಲಹಳ್ಳಿ ನರಸಿಂಹಶಾಸ್ತ್ರಿಗಳಿಂದ ಸಂಸ್ಕೃತವನ್ನು ಅಭ್ಯಸಿಸಿದ್ದರು ಸಂಸ್ಕೃತದ ಕೃತಿಗಳಾದ ಶಾಕುಂತಲ, ಕಾಳಿದಾಸ ಮುಂತಾದುವುಗಳನ್ನು ಶಾಸ್ತ್ರಿಗಳಿಂದ ಕಲಿತು ಸಂಸ್ಕೃತ ಸಾಹಿತ್ಯದ ರಸಾಸ್ವಾದನೆಯನ್ನು ಮಾಡಿದ್ದರು ಇದರಿಂದ ಮುಂದೆ ಅವರು ಗುಂಡ್ಲುಪೇಟೆಯಲ್ಲಿ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಕೊಳ್ಳುವಾಗ, ರಾಮಾಯಣ, ಭಾರತ, ಭಾಗವತ ಗ್ರಂಥಗಳನ್ನು ತರಿಸಿ ಅವುಗಳನ್ನು ಓದಲು ಸಹಕಾರಿಯಾಯಿತು.

ನಜೀರರು ಕಾಲೇಜು ಮೆಟ್ಟಲು ಹತ್ತುತ್ತಿದ್ದಂತೆ ಕನ್ನಡ ಅಧ್ಯಾಪಕರಾದ ತ.ಸು. ಶಾಮರಾಯರಲ್ಲಿ ಶಿಷ್ಯತ್ವ ದೊರೆಯಿತು. ಹುಟ್ಟಿನಿಂದಲೇ ಕನ್ನಡ ಭಾಷೆಯಲ್ಲಿ ಒಲವನ್ನು ಬೆಳಸಿಕೊಂಡಿದ್ದ ನಜೀರರಿಗೆ ಶಾಮರಾಯರ ಸಂಪರ್ಕ ದೊರೆತದ್ದು ಮರಳುಗಾಡಿನಲ್ಲಿ ಓಯಸಿಸ್ ಸಿಕ್ಕಿದಂತಾಯಿತು. ಗುರುಗಳ ನಡೆ, ನುಡಿ, ಪಾಠ ಪ್ರವಚನಗಳಿಂದ ಬಹುಬೇಗ ನಜೀರ್ ಸಾಬ್‌ರಲ್ಲಿ ಪ್ರಭಾವಿತರಾಗಿ ಅವರ ಪ್ರಿಯ ಶಿಷ್ಯರಲ್ಲೊಬ್ಬರಾದರು.

ಶಾಮರಾಯರ ಮೆಚ್ಚಿನ ಶಿಷ್ಯರು

ಒಮ್ಮೆ ಶಾಮರಾಯರು ತಮ್ಮ ಪ್ರಿಯ ಶಿಷ್ಯರಾಗಿದ್ದ ನಜೀರ್ ಮತ್ತು ಶಿವಲಿಂಗಯ್ಯನವರನ್ನು ತಮ್ಮ ಮನೆಗೆ ಊಟಕ್ಕೆ ಆಹ್ವಾನಿಸಿದರು. ಜಾತಿಯಿಂದ ಮುಸ್ಲಿಂ ಮತ್ತು ಕುರುಬರ ಕೋಮಿಗೆ ಸೇರಿದ ಶಿಷ್ಯರಿಗೆ ಮಾತ್ರ ಊಟಕ್ಕೆ ಹೋಗಲು ಒಳಗೊಳಗೇ ಸಂಕೋಚ. ಆದರೂ ಗುರುಗಳ ಮನೆಗೆ ಬಂದಿದ್ದಾರೆ ಆದರೆ ಶಿಷ್ಯರು ಬಂದದ್ದರಿಂದ ಗುರುಗಳಿಗೆ ಮಾತ್ರ ಹೇಳಲಸದಳವಾದ ಸಂತೋಷ. ತಮ್ಮ ಎಲೆಯ ಪಕ್ಕದಲ್ಲೇ ಶಿಷ್ಯರಿಗೆ ಎಲೆಗಳನ್ನು ಹಾಕಿಸಿ ಊಟಕ್ಕೆ ಕೂರಲು ಎಬ್ಬಿಸುತ್ತಿದ್ದಾರೆ. ಶಿಷ್ಯರ ಸಂಕೋಚ ಕಂಡು ಗದರಿಸಿ ಊಟ ಮಾಡಿಸಿದ್ದಾರೆ. ನಜೀರರು ಮಂತ್ರಿಗಳಾದ ಮೇಲೆ ಈ ಲೇಖಕ ಒಮ್ಮೆ ಭೇಟಿಯಾಗಿದ್ದಾಗ ಗುರುಗಳ ಈ ಜಾತ್ಯಾತೀತ ಮನೋಭಾವವನ್ನು ಮುಕ್ತ ಕಂಠದಿಂದ ಪ್ರಶಂಸಿಸಿದ್ದರು. ಇಷ್ಟೇ ಅಲ್ಲ, ಗುರುಗಳ ಈ ಗುಣವನ್ನು ತಾವೂ ಸಹ ಮೈಗೂಡಿಸಿಕೊಂಡಿದ್ದರು.

ನಜೀರ್ ಸಾಬರ ಸಾಹಸ ಪ್ರಿಯತೆ

ನಜೀರ್ ಒಳ್ಳೆಯ ಕುದುರೆ ಸವಾರರಾಗಿದ್ದರು. ಈಗ ಇಪ್ಪತ್ತೈದು ವರ್ಷಗಳ ಹಿಂದಿನ ಮಾತು. ನಜೀರರು ಹೈಸ್ಕೂಲ್ ಮುಗಿಸಿ ಕಾಲೇಜು ಮೆಟ್ಟಿಲು ಹತ್ತಬೇಕಾದ ದಿವಸಗಳು ಈ ನಡುವಿನಲ್ಲಿ ನಜೀರ್ ಪ್ರತಿ ನಿತ್ಯ ಕುದುರೆಯನ್ನು ಏರಿ ಗುಂಡ್ಲುಪೇಟೆಯಿಂದ ಊಟಿ ಗೇಟಿನ (ನೀಲಗಿರಿಯ ಪ್ರವೇಶದ್ವಾರ) ಬಳಿ ಇರುವ ಆಲದ ಮರದ ವರೆಗೆ ಸವಾರಿ ಮಾಡುತ್ತಿದ್ದರು. ನಂತರ ಕುದುರೆಯನ್ನು ಆಲದ ಮರಕ್ಕೆ ಕಟ್ಟಿ ಅದರ ಕೆಳಗೆ ಕುಳಿತು ಓದಿದ್ದೇ ಓದಿದ್ದು.

ಒಮ್ಮೆ ನಜೀರರ ಸಾಹಸಪ್ರಿಯತೆಗೆ ಸವಾಲು ಒಡ್ಡುವಂಥ ಪ್ರಸಂಗ, ಒಂದು ದಿನ ಯಥಾ ರೀತಿ ನಜೀರ್ ಕುದುರೆ ಏರಿ ಆಲದ ಮರದ ಬಳಿಗೆ ಬಂದು ಓದಿನಲ್ಲಿ ಮಗ್ನರಾಗಿದ್ದಾರೆ. ಆಗ ಇವರ ಮುಂದೆ ಪರಂಗಿಯವರು ಕುಳಿತಿದ್ದ ಮೋಟಾರು ಕಾರೊಂದು ಭರ್‍ರನೆ ಸಾಗಿ ಹೋಯಿತು. ಅನುಭವಿ ಕುದುರೆ ಸವಾರರಾಗಿದ್ದ ನಜೀರರಿಗೆ ಆ ಕಾರನ್ನು ಹಿಡಿಯುವ ಛಲ ಒಮ್ಮೆಗೆ ಮೂಡಿ ಬಂತು. ಆಲೋಚನೆ ಬಂದದ್ದೆ ತಡ ಪಕ್ಕದಲ್ಲಿದ್ದ ಕುದುರೆಯ ಮೇಲೆ ಛಂಗನೆ ಹಾರಿ ಕಾರನ್ನು ಬೆನ್ನಟ್ಟಿ ಬಹಳ ಬೇಗ ಅದನ್ನು ಸಮೀಪಿಸಿ, ದಾಟಿ ಮುಂದೆ ಮುಂದೆ ನಡೆದರು. ಬಂಡೀಪುರದವರೆಗೂ ಈ ರೀತಿ ಮುನ್ನಡೆದ ನಜೀರರ ಸಾಹಸಪ್ರಿಯತೆಯನ್ನು ಕಂಡ ಪರಂಗಿಯವರಿಗೆ ಬಹಳ ಖುಷಿಯಾಯಿತು. ನಜೀರರ ಸಾಹಸ ಪ್ರಿಯತೆಯನ್ನು ಮೆಚ್ಚಿದ ಪರಂಗಿಯರು ನಜೀರರ ಬೆನ್ನು ತಟ್ಟಿ ಚಿನ್ನದ ಮೊಹರೊಂದನ್ನು ಕಾಣಿಕೆಯಾಗಿತ್ತರು.

ಕನ್ನಡ ಮತ್ತು ಸಂಸ್ಕೃತಿ ಬಗ್ಗೆ ಕಳಕಳಿ

ಕನ್ನಡ ಮತ್ತು ಸಂಸ್ಕೃತಿಗಳ ವಿಷಯದಲ್ಲಿ ವಿದ್ಯಾರ್ಥಿ ದೆಸೆಯಿಂದಲೂ ನಜೀರರಿಗೆ ಬಹಳ ಕಳಕಳಿ. ಕಾಲೇಜಿನಲ್ಲಿ ನಡೆಯುವ ಯಾವುದೇ ಸಾಂಸ್ಕೃತಿಕ ಸಮಾರಂಭಕ್ಕೆ ತಪ್ಪದೇ ಹಾಜರಾಗುತ್ತಿದ್ದರು. ಚಿಕ್ಕ ವಯಸ್ಸಿನಿಂದಲೇ ಮಹಾತ್ಮಗಾಂಧಿಯವರ ಬಗ್ಗೆ ಗೌರವ ಹಾಗೂ ಕಾಂಗ್ರೆಸ್ಸಿನ ಬಗ್ಗೆ ನಂಬಿಕೆ ಮೂಡಿಸಿಕೊಂಡಿದ್ದಂಥ ವ್ಯಕ್ತಿ. ಖಾದಿಯ ಬಗ್ಗೆ ಒಲವು, ಅಂದಿನಿಂದ ಇಂದಿನವರೆಗೂ ಖಾದಿಯೇ ಅವರ ದಿರಿಸು. ಸಾರ್ವಜನಿಕ ಜೀವನಕ್ಕೆ ಕಾಲಿಟ್ಟಾಗಿನಿಂದ ಬಡವರ ಬಗ್ಗೆ ಕರುಣೆ ಹಾಗೂ ಕನಿಕರವಿರಿಸಿಕೊಂಡಿದ್ದ ವ್ಯಕ್ತಿ.

ಈ ಹಿಂದೆ ತಿಳಿದ ಹಾಗೆ ವಿದ್ಯಾರ್ಥಿದೆಸೆಯಿಂದಲೇ ನಜೀರರಿಗೆ ಕನ್ನಡ ಸಾಹಿತ್ಯದಲ್ಲಿ ಅಪಾರವಾದ ಆಸಕ್ತಿಯಿತ್ತು. 1952 ರಲ್ಲೇ ಮೈಸೂರಿನಲ್ಲಿ 'ಕಲಾಕ್ಷೇತ್ರ' ಎಂಬ ಸಂಸ್ಥೆಯನ್ನು ಪಿ.ಆರಂ. ತಿಪ್ಪೇಸ್ವಾಮಿ, ಹೇಮದಳ ರಾಮದಾಸ್ ಮತ್ತು ಜೀ. ಶಂ ಪರಮಶಿವಯ್ಯ ಮುಂತಾದ ಯುವ ಸಾಹಿತಿಗಳೊಂದಿಗೆ ಆರಂಭಿಸಿ ಅದರಲ್ಲಿ ಸ್ಕ್ರಿಯ ಸದಸ್ಯರಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಈ ಸಂಸ್ಥೆಯಿಂದ ಅನೇಕ ಸಾಹಿತಿಗಳ ಪುಸ್ತಕಗಳನ್ನು ಪ್ರಕಟಿಸಿ ಅವರು ಕನ್ನಡ ಸಾಹಿತ್ಯದಲ್ಲಿ ಮುಂದುವರಿಯಲು ಸಹಾಯ ಮಾಡಿದರು. ಕನ್ನಡ ಲೇಖಕ ಹಾಗೂ ಕಲಾವಿದರ ಬಗ್ಗೆ ಅಪಾರವಾದ ಕಳಕಳಿ ಇರಿಸಿಕೊಂಡಿದ್ದ ನಜೀರರು ಸ್ವತಃ ಲೇಖಕರಾಗಿದ್ದರೆಂದು ಅನೇಕರಿಗೆ ತಿಳಿದಿರಲಿಲ್ಲ. ಅವರು ಬರೆದಿರುವ ಅನೇಕ ಸಣ್ಣ ಕಥೆಗಳು ತುಷಾರ,

ಕಥಾಲೋಕ ಮುಂತಾದ ಮಾಸ ಪತ್ರಿಕೆಗಳಲ್ಲಿ ಈಗಾಗಲೇ ಪ್ರಕಟವಾಗಿದ್ದವು. ಉರ್ದು ಭಾಷೆಯಿಂದಲೂ ಮಂಟೋವಿನ ಸಣ್ಣ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದರು. ಅನೇಕ ನಾಟಕಗಳನ್ನು ರಚಿಸಿದ್ದರು. ಆದರೆ ಅವಿನ್ನೂ ಅಪ್ರಕಟಿತ. ಆದರೆ ಈ ಲೇಖಕ ಅವರ ಕೃತಿಗಳನ್ನು ಪ್ರಕಟಿಸುವ ಇಚ್ಛೆ ವ್ಯಕ್ತಪಡಿಸಿದ್ದುಂಟು ವಿದ್ಯಾರ್ಥಿದೆಸೆಯಲ್ಲೇ ಶ್ರೀ ಜೀ.ಶಂ. ಪರಮಶಿವಯ್ಯನವರು ಸಂಪಾದಿಸುತ್ತಿದ್ದ 'ತಾವರೆ' ಎಂಬ ಕೈಬರಹದ ಮಾಸಪತ್ರಿಕೆಯಲ್ಲಿ ಸಣ್ಣ ಕಥೆಗಳನ್ನು ಬರೆದಿದ್ದರು.

ನಜೀರ್ - ಒಬ್ಬ ಶಿಸ್ತಿನ ಸಿಪಾಯಿ

ಮನುಷ್ಯನಿಗೆ ಎಲ್ಲ ಬಲಗಳಿಗಿಂತ ಆತನ ನಡತೆಯ ಬಲವೇ ನಿಜವಾದ ಬಲ. ನಜೀರ್ ಸಾಹೇಬರಲ್ಲಿ ಈ ಗುಣವನ್ನು ಮುಖ್ಯವಾಗಿ ಕಾಣಬಹುದಾಗಿತ್ತು. ಈಗ ಸುಮಾರು 18 ವರ್ಷಗಳ ಹಿಂದಿನ ಮಾತು. ಆಗ ನಜೀರರು ಗುಂಡ್ಲುಪೇಟೆಯ ಪುರಸಭೆಯ ಅಧ್ಯಕ್ಷರಾಗಿದ್ದರು. ಆಗ ಒಮ್ಮೆ ನಾನು ಅಲ್ಲಿಯ ಮುನಿಸಿಪಲ್ ಹೈಯರ್ ಸೆಕೆಂಡರಿ ಶಾಲೆಗೆ ಪುಸ್ತಕ ಸರಬರಾಜು ಮಾಡಲು ಹೋಗಿದ್ದೆ. ಆಗ ಅಲ್ಲಿದ್ದ ಮುಖ್ಯೋಪಾಧ್ಯಾಯರು ನಾಡಿನಲ್ಲೇ ದಕ್ಷರೆಂದು ಹೆಸರು ಪಡೆದಿದ್ದ ವ್ಯಕ್ತಿ ಅವರೊಂದಿಗೆ ನಾನು ಸಂಭಾಷಿಸುತ್ತಿದ್ದಾಗ ಯಾರೋ ಬಂದು ಅಧ್ಯಕ್ಷರು ಬರುತ್ತಿದ್ದಾರೆ ಎಂದರು. ಒಡನೆಯೇ ಮುಖ್ಯೋಪಾಧ್ಯಾಯರು ಗಡಿಬಿಡಿಯಿಂದ ಮೇಲೆದ್ದು ಅವರನ್ನು ಎದುರುಗೊಳ್ಳಲು ಹೋದರು. ಕಾರಣವಿಷ್ಟೆ, ನಜೀರರು ಶಿಸ್ತಿನ ಸಿಪಾಯಿ. ಅವರೆಂದೂ ಅವರ ಕೈ ಕೆಳಗಿನ ಅಧಿಕಾರಿಗಳನ್ನು ಅಧಿಕಾರಯುತವಾಗಿ ಕಾಣುತ್ತಲೇ ಇರಲಿಲ್ಲ. ಆದರೆ ಅವರು ಕೈ ಕೊಳ್ಳುವ ಕಾರ್ಯದಲ್ಲಿ ಅವರಿಗಿದ್ದ ಕಾರ್ಯನಿಷ್ಠೆ ಹಾಗೂ ಕಾರ್ಯತತ್ಪರತೆಯಿಂದ ಜನತೆ ಅವರೊಂದಿಗೆ ಆ ರೀತಿ ಸ್ಪಂದಿಸುತ್ತಿದ್ದರು.

2.5 ಶಿಕ್ಷಣ ಸಂಸ್ಥೆಯ ಸಂಸ್ಥಾಪಕರಾಗಿ ಅಬ್ದುಲ್ ನಜೀರ್‌ಸಾಬ್ :

ಶ್ರೀಯುತ ನಜೀರ್ ಸಾಹೇಬರವರು ವಿದ್ಯೆಗೆ ಬಹಳ ಮಹತ್ವ ಕೊಡುವ ವ್ಯಕ್ತಿಯಾಗಿದ್ದು, ಸ್ವತಃ ತಾವೇ ವಿದ್ಯೆಯ ಆರಾಧಕರಾಗಿದ್ದರು. ಸ್ತ್ರೀ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ ನಜೀರ್ ಸಾಬ್ ಒಬ್ಬ ಮಹಿಳೆ ವಿದ್ಯಾವಂತೆಯಾದರೆ ಇಡೀ ಕುಟುಂಬವೇ ವಿದ್ಯಾವಂತವಾಗುವುದೆಂಬ ನಂಬಿಕೆ ಮತ್ತು ಆಶಯದೊಡನೆ ಒಂದು ವಿದ್ಯಾ ಸಂಸ್ಥೆಯ ಹುಟ್ಟಿಗೆ ಕಾರಣರಾದರು.

ಅಂದಿನ ದಿನಗಳಲ್ಲಿ ಗುಂಡ್ಲುಪೇಟೆ ಪಟ್ಟಣ ಹಾಗೂ ಗ್ರಾಮದಲ್ಲಿ ವಿದ್ಯೆಯ ಲಭ್ಯತೆ ಪ್ರಮಾಣ ತೃಪ್ತಿದಾಯಕವಾಗಿರಲಿಲ್ಲ. ಅದರಲ್ಲೂ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ಕೈಗೆ ಎಟುಕಲಾರದ ವಸ್ತುವಾಗಿತ್ತು. ಈ ದಿಸೆಯಲ್ಲಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕಾಗಿ 1972ರಲ್ಲಿ ಶ್ರೀ ಜವಾಹರ್ ಎಜುಕೇಷನ್ ಸೊಸೈಟಿ ಎನ್ನುವ ಲಾಂಛನದಡಿ ಶ್ರೀಮತಿ ಕೆ.ಎಸ್. ನಾಗರತ್ನಮ್ಮ ಬಾಲಿಕ ಪ್ರೌಢಶಾಲೆಯನ್ನು ಪ್ರಾರಂಭಿಸಿ ಇದರ ಸಂಸ್ಥಾಪಕ ಅಧ್ಯಕ್ಷರಾಗಿ ಸಂಸ್ಥೆಯ ಬೆಳವಣಿಗೆಗಾಗಿ ಶ್ರಮಿಸಿದರು. ಈ ಸಂಸ್ಥೆ ಗುಂಡ್ಲುಪೇಟೆ ತಾಲ್ಲೂಕಿನ ಜನತೆಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಾ ಬಂದಿದೆ ಅಲ್ಲದೆ ನಜೀರ್ ಸಾಬ್‌ರಂತೆ ಈ ಸಂಸ್ಥೆಯ ಪ್ರೀತಿ ಪೂರ್ವಕ ಸಂಸ್ಥೆಯಾಗಿ ಬೆಳೆಯಿತು.

ನಜೀರ್ ಸಾಬ್ ಆಶಯದಂತೆ ಪ್ರಾರಂಭದಿಂದ ಈ ದಿನದವರೆಗೂ ಉತ್ತಮ ವಿದ್ಯೆಯನ್ನು ನೀಡುವ ಸಂಸ್ಥೆಯಾಗಿದೆ ಈ ದಿನ ಈ ಸಂಸ್ಥೆಯಲ್ಲಿ ಸುಮಾರು 2000 ವಿದ್ಯಾರ್ಥಿಗಳು ಎಲ್.ಕೆ.ಜಿ. ಯಂದ ಪ್ರಾಥಮಿಕ ಶಿಕ್ಷಕರ ತರಬೇತಿ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಈ ಸಂಸ್ಥೆಯು ಚಾಮರಾಜನಗರ ಜಿಲ್ಲೆಯಲ್ಲಿ ಒಂದು ಮಾದರಿ ಸಂಸ್ಥೆಯಾಗಿದೆ.[7]

ಅಡಿ ಟಿಪ್ಪಣಿಗಳು

1. ಮಾಹಿತಿ ಸಂಗ್ರಹಣೆ : ಶ್ರೀ ಅನ್ವರ್ ಪಾಷ - ಖಜಾಂಚಿಗಳು
   ಶ್ರೀ ಜವಾಹರ್ ಶಿಕ್ಷಣ ಸಂಸ್ಥೆ, ಗುಂಡ್ಲುಪೇಟೆ
2. ಡಾ. ಮಲೆಯೂರು ಗುರುಸ್ವಾಮಿ "ಹೊನ್ನು ಹೊಳೆ" ಪುಟ ಸಂಖ್ಯೆ 460
3. ಮನ ಬಳಿಗಾರ್ - ಸಂಸದೀಯ ಪಟು ನಜೀರ್‌ಸಾಬ್ - ಪುಟಸಂಖ್ಯೆ 2
4. ಮನು ಬಳಿಗಾರ್ - ಸಂಸದೀಯ ಪಟು - ನಜೀರ್ ಸಾಬ್ - ಪುಟಸಂಖ್ಯೆ 3
5. ಮಾಹಿತಿ ಸಂಗ್ರಹಣೆ - ಶ್ರೀ ಅನ್ವರ್ ಪಾಷ - ಖಜಾಂಚಿಗಳು
   ಶ್ರೀ ಜವಹರ್ ಶಿಕ್ಷಣ ಸಂಸ್ಥೆ ಗುಂಡ್ಲುಪೇಟೆ.
6. ಮನು ಬಳಿಗಾರ್ ಸಂಸದೀಯ ಪಟು ನಜೀರ್ ಸಾಬ್ - ಪುಟಸಂಖ್ಯೆ 12, 13
7. ಮಾಹಿತಿ ಸಂಗ್ರಹಣೆ - ಶ್ರೀ ಅನ್ವರ್ ಪಾಷ ಖಜಾಂಚಿಗಳು
   ಶ್ರೀ ಜವಹರ್ ಶಿಕ್ಷಣ ಸಂಸ್ಥೆ, ಗುಂಡ್ಲುಪೇಟೆ.

ಅಧ್ಯಾಯ - ೩

ಅಬ್ದುಲ್ ನಜೀರ್ ಸಾಬ್‌ರವರ

ಚಿಂತನೆಗಳು

ಅಧ್ಯಾಯ -3
ಅಬ್ದುಲ್ ನಜೀರ್ ಸಾಬ್ ರವರ ಚಿಂತನೆಗಳು

3.1 ಅಬ್ದುಲ್ ನಜೀರ್ ಸಾಬ್ ರವರ ಸಮಾಜವಾದಿ ಚಿಂತನೆಗಳು:

ಶ್ರೀ ಅಬ್ದುಲ್ ನಜೀರ್ ಸಾಬ್‌ರವರು ಬಾಲ್ಯದಿಂದಲೇ ಪ್ರಗತಿಪರ ಚಿಂತನೆಗಳ ಪ್ರಬಾವಕ್ಕೆ ಒಳಗಾಗಿದ್ದರು. ಇವರ ತಂದೆ ಪೀರ್ ಸಾಹೇಬರು ಆಗಿನ ತಮಿಳುನಾಡಿನ ಮುಖ್ಯ ಮಂತ್ರಿ ಕಾಮರಾಜರ ಪ್ರಭಾವಕ್ಕೆ ಒಳಗಾಗಿದ್ದರು. ಕಾಮರಾಜರ ಜನಪರ ಕಾರ್ಯಕ್ರಮಗಳು ಪೀರ್ ಸಾಹೇಬರನ್ನು ಸ್ವಭಾವಿಕವಾಗಿಯೇ ಆಕರ್ಷಿಸಿದುವು ಇವರ ಜನಪರ ಕಾಳಜಿಯ ಪ್ರಭಾವ ನಜೀರ್ ಸಾಬ್‌ರ ಮೇಲೆ ಉಂಟಾಯಿತು.[1]

ಅಬ್ದುಲ್ ನಜೀರ್ ಸಾಬ್‌ರವರಿಗೆ ಬಾಲ್ಯದಿಂದಲೂ ಅಪಾರವಾದ ಪುಸ್ತಕ ಪ್ರೇಮವಿತ್ತು. ಓದುವುದೆಂದರೆ ಇವರಿಗೆ ಪಂಚ ಪ್ರಾಣ ಇವರು ಬಾಲ್ಯದಲ್ಲಿಯೇ ಕಾರ್ಲ್‌ಮಾರ್ಕ್ಸ್, ರಾಮ ಮನೋಹರ ಲೋಹಿಯಾ, ಜಯ ಪ್ರಕಾಶ ನಾರಾಯಣರ ವಿಚಾರ ಧಾರೆಗಳಿಂದ ಪ್ರಭಾವಿತರಾಗಿದ್ದರು. ಕಾರ್ಲ್ ಮಾರ್ಕ್ಸ್‌ರವರ "ಸಮಬಾಳು, ಸಮಪಾಲು" ಎಂಬ ತತ್ವನ್ನು ಜೀವನದಲ್ಲಿ ಅಳವಡಿಸಿಕೊಂಡು ಜನ ಸೇವೆ ಮಾಡಲು ಮುಂದಾದರು ಅಬ್ದುಲ್ ನಜೀರ್‌ಸಾಬ್‌ರವರು ಪ್ರಮಾಣಿಕತೆಯಿಂದ ದುಡಿದಾಗ ಮಾತ್ರ ತಕ್ಕ ಪ್ರತಿಫಲ ಸಿಗುತ್ತದೆ ಎಂದು ನಂಬಿದ್ದರು. ಅದಕ್ಕೆ ಅವರೇ ಪ್ರಾಮಾಣಿಕತೆ ಮತ್ತು ನಿಸ್ವಾರ್ಥದಿಂದ ಜನ ಸೇವೆ ಮಾಡುವ ಮೂಲಕ ಎಲ್ಲರಿಗೂ ಸ್ಫೂರ್ತಿಯಾಗಿದ್ದರು. ಅಬ್ದುಲ್ ನಜೀರ್ ಸಾಬ್‌ರವರ ಸಮಾಜವಾದಿ ಚಿಂತೆಗಳು ಮುಂದಿನ ದಿನಗಳಲ್ಲಿ ಅವರು ಸಚಿವರಾಗಿದ್ದಾಗ ಗ್ರಾಮೀಣಾಭಿವೃದ್ಧಿ ಮತ್ತು ಅಧಿಕಾರ ವಿಕೇಂದ್ರಿಕರಣಕ್ಕೆ ಆದ್ಯತೆ ನೀಡಲು ಪ್ರೇರಣೆಯಾದವು.[2]

3.2 ಅಧಿಕಾರ ವಿಕೇಂದ್ರಿಕರಣದ ಬಗೆಗಿನ ಚಿಂತನೆಗಳು:

ಮಹಾತ್ಮಗಾಂಧೀಜಿ, ರಾಮ ಮನೋಹರ ಲೋಹಿಯಾ, ಲೆನಿನ್ ಕಾರ್ಲ್ ಮಾರ್ಕ್ಸ್, ಜಯ ಪ್ರಕಾಶ್ ನಾರಾಯಣರ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡಿದ್ದ ಅಬ್ದುಲ್ ನಜೀರ್‌ಸಾಬ್ ಗ್ರಾಮ ಸ್ವರಾಜ್ಯವನ್ನು ಜಾರಗೆ ತರಬೇಕೆಂದು ಅಭಿಲಾಷೆ ಇಟ್ಟುಕೊಂಡಿದ್ದರು. ಇವರು ಗುಂಡ್ಲುಪೇಟೆಯ ಪುರಸಭಾ ಅಧ್ಯಕ್ಷರಾಗಿದ್ದಾಗಲೇ ಅಧಿಕಾರ ವಿಕೇಂದ್ರಿಕರಣದ ಕನಸು ಕಂಡಿದ್ದರು. ಅಬ್ದುಲ್ ನಜೀರ್ ಸಾಬ್‌ರವರು 1983 ರಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಾಗಿ ಅಧಿಕಾರ ವಹಿಸಿಕೊಂಡ ತಕ್ಷಣವೇ ಕುಡಿಯುವ ನೀರಿನ ಪೂರೈಕೆಯ ಕಾರ್ಯಕ್ರಮವನ್ನು ಭರ್ಜರಿಯಾಗಿ ಅನುಷ್ಠಾನಗೊಳಿಸಿದರು. ನಂತರ 1984ರಲ್ಲಿ ತಮ್ಮ ಬಹುದಿನಗಳ ಕನಸಾದ ಅಧಿಕಾರ ವಿಕೇಂದ್ರಿಕರಣಕ್ಕೆ ಸ್ಪಷ್ಟವಾದ ರೂಪುರೇಷೆಗಳನ್ನು ಸಿದ್ಧಪಡಿಸಿದರು. ಇದರ ಪರಿಣಾಮವಾಗಿ ಕರ್ನಾಟಕದಲ್ಲಿ "ಮಂಡಲ ಪಂಚಾಯತ್ ರಾಜ್" ಕಾಯ್ದೆ ಪ್ರಾರಂಭವಾಯಿತು.

ಗ್ರಾಮೀಣಾಭಿವೃದ್ಧಿಯ ಹರಿಕಾರರಾಗಿದ್ದ ನಜೀರ್ ಸಾಬ್‌ರವರು ಗ್ರಾಮೀಣ ಪ್ರದೇಶದಲ್ಲಿರುವ ರಸ್ತೆಗಳು ಹೇಗಿರಬೇಕು? ಗ್ರಾಮದಲ್ಲಿ ಶುಚಿತ್ವವಾಗಿ ಇಡಲು ಚರಂಡಿಗಳು ಹೇಗೆ ಮತ್ತು ಎಲ್ಲಿ ನಿರ್ಮಾಣವಾಗಬೇಕು? ಗ್ರಾಮೀಣ ಪ್ರದೇಶದ ಜನರಿಗೆ ಶುದ್ಧ ಕುಡಿಯುವ ನೀರಿನ ಸೌಲಭ್ಯವನ್ನು ಯಾವ ಯಾವ ಮೂಲಗಳಿಂದ ಕಲ್ಪಿಸಬೇಕು ಮತ್ತು ಸೂರಿಲ್ಲದ ನಿರ್ಗತಿಕರಿಗೆ ಮನೆಗಳನ್ನು ಹೇಗೆ ನಿರ್ಮಿಸಿ ಕೊಡಬೇಕೆಂಬುದನ್ನು ಹಳ್ಳಿಯವರೇ ನಿರ್ಧರಿಸಬೇಕೇ ಹೊರತು ಬೆಂಗಳೂರು, ದೆಹಲಿಗಳಲ್ಲಿ ಕುಳಿತ ಅಧಿಕಾರಿಗಳಲ್ಲ ಎಂಬುದು ನಜೀರ್ ಸಾಬ್ ರವರ ಸ್ಪಷ್ಟ ನಿಲುವಾಗಿತ್ತು.

ನಜೀರ್ ಸಾಬ್‌ರವರು ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯತ್‌ಗಳು ಪ್ರಬಲವಾಗಬೇಕು. ನಮ್ಮ ಯೋಜನೆಗಳನ್ನೆಲ್ಲ ನಾವೇ ರೂಪಿಸಿಕೊಳ್ಳಬೇಕು. ಆಗಲೇ "ರಾಮರಾಜ್ಯ" ನಿರ್ಮಾಣವಾಗಲು ಸಾಧ್ಯ ಎಂದು ಪ್ರತಿಪಾದಿಸಿದರು. ಈಗಾಗಲೇ ಭಾರತದ ಇತರೆ ರಾಜ್ಯಗಳಾದ ರಾಜಸ್ಥಾನ, ಮಹಾರಾಷ್ಟ್ರ, ಕೇರಳ, ಆಂಧ್ರ ಪ್ರದೇಶ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಜಾರಿಗೊಂಡಿದ್ದ ಪ್ರಗತಿಪರವಾದ ಜಿಲ್ಲಾ ಪಂಚಾಯಿತಿ ಮತ್ತು ಮಂಡಲ ಪಂಚಾಯಿತಿಗಳ ಕಾನೂನುಗಳನ್ನು ವಿಶ್ಲೇಷಿಸಲಾಯಿತು. ಅದರಂತೆ ಅಧಿಕಾರ ವಿಕೇಂದ್ರಕರಣಕ್ಕೆ ಸಂಬಂಧಿಸಿದಂತೆ ಅಬ್ದುಲ್ ನಜೀರ್ ಸಾಬ್‌ರವರು ಕೆಲವು ತಜ್ಞರೊಡನೆ ಚರ್ಚಿಸಿ ಒಂದು ಹೊಸ ಕರಡು ಅಧಿನಿಯಮವನ್ನು ಸಿದ್ಧಪಡಿಸಿದರು.

ಅಬ್ದುಲ್ ನಜೀರ್ ಸಾಬ್‌ರವರು ಸಿದ್ಧಪಡಿಸಿದ ಕರಡು ಅಧಿನಿಯಮದಲ್ಲಿ ಜಿಲ್ಲೆ ಮತ್ತು ಗ್ರಾಮ ಮಟ್ಟದಲ್ಲಿ ಜಿಲ್ಲೆಯ ಪರಿಷತ್ ಅಧ್ಯಕ್ಷನನ್ನು "ಜಿಲ್ಲೆಯ ಮುಖ್ಯ ಮಂತ್ರಿ" ಎಂಬಂತೆ ಪರಿಭಾವಿಸಲಾಗಿತ್ತು. ಗ್ರಾಮ ಪಂಚಾಯಿತಿ ಮುಖ್ಯಸ್ಥನನ್ನು "ಪ್ರಧಾನರು" ಎಂದು ಕರೆಯಲಾಗುತ್ತಿತ್ತು. ಆದರೆ ಈ ಎರಡು ಪಂಚಾಯ್ತಿಗಳಿಗೆ ನೀಡಲಾದ ಸ್ವಯಂ ಅಧಿಕಾರದ ವಿರುದ್ಧ ಆ ಸಮಯದಲ್ಲಿ ಆಯ್ಕೆಯಾದ ಶಾಸಕರಿಂದ ವಿರೋಧ ಉಂಟಾಯಿತು. ಏಕೆಂದರೆ ಜಿಲ್ಲಾ ಪರಿಷತ್ ಮತ್ತು ಗ್ರಾಮ ಪಂಚಾಯ್ತಿಗೆ ಅಧಿಕಾರ ನೀಡಿದರೆ ತಮ್ಮ ಅಧಿಕಾರ ಮೊಟಕಾಗಬಹುದು ಎಂಬ ಭಯ ಉಂಟಾಯಿತು. ಅಬ್ದುಲ್ ನಜೀರ್ ಸಾಬ್ ಮಂಡಿಸಿದ ಈ ಕರಡು ಅಧಿನಿಯಮವನ್ನು ಕುರಿತು. ನಮ್ಮ ಸಂಕಟ ನಜೀರ್ ಸಾಬ್‌ಗೆ ಹೇಗೆ ಅರ್ಥವಾಗಬೇಕು. ಅವರೇನು ನಮ್ಮ ಹಾಗೆ ಜನರಿಂದ ನೇರವಾಗಿ ಆಯ್ಕೆಯಾಗಿದ್ದಾರೆಯೇ ? ಬದಲಾಗಿ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ಸೆರಗು ಹಿಡಿದು ಕೊಂಡು ಹಿಂಬಾಗಿಲಿನಿಂದ (ಎಂ.ಎಲ್.ಸಿ.) ಪ್ರವೇಶಿಸಿದರೆಂದು ಹೀಯಾಳಿಸಿದರು.

ಶಾಸಕರು ತಮ್ಮ ಮೇಲೆ ಮಾಡಿದ ಆರೋಪಗಳನ್ನು ನೋವಿನಿಂದಲೇ ಸ್ವೀಕರಿಸಿದ ಅಬ್ದುಲ್ ನಜೀರ್‌ಸಾಬ್ ಧೃಡ ನಿರ್ಧಾರ ಮಾಡಿ ಈ ಕಾನೂನು ಜಾರಿಗೆ ಬರದೆ ಹೋದರೆ ನಾನು ಮಂತ್ರಿ ಪದವಿಗೆ ರಾಜಿನಾಮೆ ಕೊಡುವುದಾಗಿ ಸ್ಪಷ್ಟವಾಗಿ ತಿಳಿಸಿದರು. ಅಬ್ದುಲ್ ನಜೀರ್ ಸಾಬ್‌ರವರ ಈ ನಿರ್ಧಾರ ರಾಮಕೃಷ್ಣ ಹೆಗಡೆಯವರ ಉಭಯ ಸಂಕಟಕ್ಕೆ ಕಾರಣವಾಯಿತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ರಾಮಕೃಷ್ಣ ಹೆಗಡೆಯವರು ಶಾಸಕರ ವಿಶ್ವಾಸವನ್ನು ಕಳೆದುಕೊಳ್ಳಲಾಗದೇ ಮತ್ತೊಂದೆಡೆ ಒಬ್ಬ ನಿಷ್ಠುರ, ಪ್ರಾಮಾಣಿಕ ಮತ್ತು ಧೀಮಂತ ವ್ಯಕ್ತಿಯನ್ನು ಕಳೆದುಕೊಳ್ಳಲಾಗದೆ ಮಾನಸಿಕ ಹಿಂಸೆ ಅನುಭವಿಸಿದರು. ಇದೇ ಸಮಯದಲ್ಲಿ

1984ನೇ ಇಸವಿಯ ಕೊನೆಯ ದಿನಗಳಲ್ಲಿ ಲೋಕಸಭಾ ಚುನಾವಣೆಗಳು ನಡೆದವು ಇದರಲ್ಲಿ ಕಾಂಗ್ರೆಸ್ ಪಕ್ಷ ಪ್ರಚಂಡ ಜಯಭೇರಿ ಭಾರಿಸಿತು. ಜನತಾ ಪಕ್ಷದ ಹಲವಾರು ಮಂತ್ರಿಗಳು ಸೋಲು ಅನುಭವಿಸಿದರು. ಅವರುಗಳಲ್ಲಿ ಧಾರವಾಡ ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಿದ ಅಬ್ದುಲ್ ನಜೀರ್‌ಸಾಬ್ ಪ್ರಮುಖರಾಗಿದ್ದರು. ಇದಕ್ಕಾಗಿ ಸೋಲಿನ ನೈತಿಕ ಹೊಣೆಯನ್ನು ತಾವೇ ಹೊತ್ತು ರಾಜಿನಾಮೆ ನೀಡಲು ಮುಂದಾದರು.

ಕರ್ನಾಟಕ ರಾಜ್ಯದಲ್ಲಿ 1983 ರ ಮಾರ್ಚ್‌ನಲ್ಲಿ ಮತ್ತೆ ಚುನಾವಣೆಗಳು ನಡೆದು ಜನತಾ ಪಕ್ಷ ಪ್ರಚಂಡ ಜಯಭೇರಿ ಭಾರಿಸಿತು. ಆಗ ಅಬ್ದುಲ್ ನಜೀರ್ ಸಾಬ್‌ರವರೇ ಮತ್ತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿ ಆಯ್ಕೆಯಾದರು ಆಗ ಅಬ್ದುಲ್ ನಜೀರ್ ಸಾಬ್ ತಮ್ಮ ಕನಸಿನ ಕೂಸಾದ "ಗ್ರಾಮ ಸ್ವರಾಜ್ಯ" ಅಧಿನಿಯಮ ಜಾರಿಗೆ ತರಲು ಮುಂದಾದರು. ಇವರ ಪ್ರಯತ್ನದ ಫಲವಾಗಿ 1986 ರಲ್ಲಿ ಪಂಚಾಯತ್ ಅಧಿನಿಯಮ ಜಾರಿಗೆ ಬಂದಿತು ನಂತರ 1987 ರಲ್ಲಿ ಚುನಾವಣೆಗಳು ನಡೆದು ಜಿಲ್ಲಾ ಪರಿಷತ್ತು ಮತ್ತು ಮಂಡಲ (ಗ್ರಾಮ) ಪಂಚಾಯತ್‌ಗಳು ರಚನೆಯಾದವು ಹೀಗೆ ಕರ್ನಾಟಕದಲ್ಲಿ ಅಧಿಕಾರ ವಿಕೇಂದ್ರಿಕರಣದ ಹೊಸ ಶಕೆ ಪ್ರಾರಂಭವಾಯಿತು.

ಅಬ್ದುಲ್ ನಜೀರ್ ಸಾಬ್ ಜಾರಿಗೆ ತಂದ ಪಂಚಾಯತ್ ರಾಜ್ ಅಧಿ ನಿಯಮದಲ್ಲಿ ಅಧಿಕಾರ ವಿಕೇಂದ್ರಿಕರಣದ ಹಲವು ಮಜಲುಗಳನ್ನು ಕಾಣಬಹುದಾಗಿದೆ.

ಮಂಡಲ ಪಂಚಾಯಿತಿಯ ವೈಶಿಷ್ಟ್ಯಗಳು:

1. ಮಂಡಲ ಪಂಚಾಯ್ತಿ ಅಧ್ಯಕ್ಷನನ್ನು ಪ್ರಧಾನನೆಂದು ಕರೆಯುತ್ತಿದ್ದರು. ಗ್ರಾಮದ ಪ್ರಧಾನಿಯಾಗಿ ಎಲ್ಲ ಅಧಿಕಾರವನ್ನು ಹೊಂದಿದ್ದನು.
2. ಮಂಡಲ ಪಂಚಾಯಿತಿ ಅಧ್ಯಕ್ಷನು ಸಿಬ್ಬಂದಿಯ ಮೇಲೆ ಹಿಡಿತ ಸಾಧಿಸಿದ್ದಲ್ಲದೆ ಅವರಿಗೆ ರಜೆ ಮಂಜೂರು ಮಾಡುವ ಅಧಿಕಾರ ಹೊಂದಿದ್ದನು.
3. ಮಂಡಲ ಪಂಚಾಯ್ತಿ ಅಧ್ಯಕ್ಷನು ಗ್ರಾಮಗಳಲ್ಲಿ ನಡೆಯುವ ಕಾಮಗಾರಿಗಳಿಗೆಲ್ಲ ಇಂಜಿನಿಯರ್ ನೀಡುವ ಅಳತೆಗಳನ್ನು ಪರಿಶೀಲಿಸುವ ಅಧಿಕಾರ ಹೊಂದಿದ್ದನು. ಇದು ನೌಕರರಲ್ಲಿ ಭ್ರಷ್ಟಾಚಾರವನ್ನು ಕಡಿಮೆ ಮಾಡುವ ಪ್ರಯತ್ನವಾಗಿತ್ತು.
4. ಮಂಡಲ ಪಂಚಾಯ್ತಿ ಕೈಗೊಳ್ಳುವ ಎಲ್ಲ ಯೋಜನೆಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆಯನ್ನು ಜಿಲ್ಲಾ ಪರಿಷತ್ತು ನೀಡುತ್ತಿತ್ತು.
5. ಅಬ್ದುಲ್ ನಜೀರ್ ಸಾಬ್ ರವರು ಜಾರಿಗೆ ತಂದ ಅಧಿಕಾರ ವಿಕೇಂದ್ರಿಕರಣದ ಅಂಶಗಳಲ್ಲಿ ಗ್ರಾಮ ಸಭೆಯು ಪ್ರಮುಖವಾಗಿದೆ ಈ ಗ್ರಾಮ ಸಭೆಯಲ್ಲಿ 18 ವರ್ಷ ತುಂಬಿದ ಎಲ್ಲ ವಯಸ್ಕರು ಇದರ ಸದಸ್ಯರಾದರು. ಗ್ರಾಮ ಸಭೆಯಲ್ಲಿ ಗ್ರಾಮಕ್ಕಾಗಿ ನಡೆಯುವ ಎಲ್ಲ ಯೋಜನೆ ಮತ್ತು ಫಲಾನುಭಾವಿಗಳನ್ನು ಆಯ್ಕೆ ಮಾಡುತ್ತಿದ್ದರು. ಗ್ರಾಮ ಸಭೆಯಲ್ಲಿ ಜನರಿಂದ ಒಪ್ಪುವ ಎಲ್ಲ ಯೋಜನೆಗಳು ಜಿಲ್ಲಾ ಮಟ್ಟದಲ್ಲಿ ಬಹಳ ಸುಲಭವಾಗಿ ಅನುಮೋದನೆಗೊಳ್ಳುತ್ತಿದ್ದವು.

ಜಿಲ್ಲಾ ಪರಿಷತ್‌ನ ವೈಶಿಷ್ಟ್ಯಗಳು

ಕರ್ನಾಟಕದಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ಜಾರಿಗೆ ಬರುವ ಹಲವು ದಶಕಗಳ ಹಿಂದೆಯೇ ಜಿಲ್ಲಾ ಸ್ಥಳೀಯ ಮಂಡಳಿಗಳು ತಮ್ಮ ಅಸ್ತಿತ್ವವನ್ನು ಕಳೆದು ಕೊಂಡಿದ್ದವು ಅಂತಹ ಸಂದರ್ಭದಲ್ಲಿ ಜಿಲ್ಲಾ ಮಟ್ಟದಲ್ಲಿ ಒಂದು ಆಡಳಿತ ಸಂಸ್ಥೆಯ ಅವಶ್ಯಕತೆ ಇತ್ತು. ಆಗ ಅಸ್ತಿತ್ವಕ್ಕೆ ಬಂದ ಸಂಸ್ಥೆಯೇ ಜಿಲ್ಲಾ ಪರಿಷತ್ತು.

1. ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದ ನಂತರ ಜಿಲ್ಲಾ ಮಟ್ಟದಲ್ಲಿ ಸಾರಿಗೆ, ಪೋಲಿಸ್, ಕಂದಾಯ, ನೊಂದಣಿ ನೀರಾವರಿ ಲೋಕೋಪಯೋಗಿ ಇಲಾಖೆಗಳನ್ನು ಹೊರತು ಪಡಿಸಿ ಉಳಿದೆಲ್ಲ ಇಲಾಖೆಗಳು ಪರಿಷತ್‌ಗೆ ಸೇರ್ಪಡೆಗೊಂಡವು ಗ್ರಾಮೀಣ ಕುಡಿಯುವ ನೀರು ಮತ್ತು ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯಿಂದ ಬೇರ್ಪಡಿಸಲಾಯಿತು. ಅಲ್ಲದೆ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನಗೊಳಿಸಲಾಯಿತು.

2. ಜಿಲ್ಲಾ ಪರಿಷತ್ ಅಧ್ಯಕ್ಷರನ್ನು ಜಿಲ್ಲೆಯ "ಮುಖ್ಯಮಂತ್ರಿ"ಯೆಂದೇ ಭಾವಿಸಲಾಯಿತು. ಅಲ್ಲದೆ ಅವರಿಗೆ ರಾಜ್ಯದ ಸಚಿವರ ಸ್ಥಾನಮಾನವನ್ನು ನೀಡಲಾಯಿತು. ಹಾಗೂ ಎಲ್ಲಾ ಸವಲತ್ತುಗಳನ್ನು ಒದಗಿಸಿಲಾಯಿತು. ಅಲ್ಲದೆ ಜಿಲ್ಲಾ ಪರಿಷತ್ ಅಧ್ಯಕ್ಷನನ್ನು "ಮುಖ್ಯ ಕಾರ್ಯ ನಿರ್ವಾಹಕ" ಎಂದು ಪರಿಗಣಿಸಲಾಯಿತು.

3. ಜಿಲ್ಲಾ ಪಂಚಾಯ್ತಿ ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ ಕಾರ್ಯದರ್ಶಿಗೆ 56 ದಿನಗಳವರೆಗೆ ರಜೆ ನೀಡುವ ಅಧಿಕಾರ ಹೊಂದಿದ್ದರು. ಅಲ್ಲದೆ ಸಿಬ್ಬಂದಿಯ ಮೇಲೆ ನೇರ ನಿಯಂತ್ರಣ ಹೊಂದಿದ್ದರು.

4. ಗ್ರಾಮ ಮತ್ತು ಜಿಲ್ಲಾ ಮಟ್ಟದಲ್ಲಿ ಜನರು ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಜಿಲ್ಲೆಯ ಜಿಲ್ಲಾಧಿಕಾರಿಗಿಂತಲೂ ಜೇಷ್ಠತೆಯಲ್ಲಿ ಹಿರಿಯರಾದ ಐ.ಎ.ಎಸ್. ಅಧಿಕಾರಿಯನ್ನು ನೇಮಿಸಲಾಯಿತು.

ಅಬ್ದುಲ್ ನಜೀರ್‌ಸಾಬ್ ಜಾರಿಗೆ ತಂದ ಈ ಪಂಚಾಯತ್ ಅಧಿನಿಯಮದಿಂದ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರರು ತಮ್ಮ ಕೆಲಸದ ಪ್ರಮಾಣವನ್ನು ಕಳೆದುಕೊಂಡರು. ಗ್ರಾಮೀಣ ಮಟ್ಟದಲ್ಲಿ ಜನರ ಕೈಗೆ ಅಧಿಕಾರ ಸಿಕ್ಕಿತು. ಇದು ಅಬ್ದುಲ್ ನಜೀರ್‌ಸಾಬ್‌ರವರ ಕನಸು ಕೂಡ ಆಗಿತ್ತು.

ಆಗಿನ ದಿನಗಳಲ್ಲಿ ಗ್ರಾಮೀಣ ಅಭಿವೃದ್ಧಿಯ ಬಗೆಗಿನ ನಿರ್ಲಕ್ಷ್ಯದ ಬಗ್ಗೆ ಅಬ್ದುಲ್ ನಜೀರ್ ಸಾಬ್ ಬಹಳ ನೋವು ತುಂಬಿಕೊಂಡಿದ್ದರು. ದಿನಾಂಕ 08-03-1984 ರಲ್ಲಿ ವಿಧಾನ ಸಭೆಯಲ್ಲಿ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ಎಂ. ಮಲ್ಲಿಕಾರ್ಜುನ ಖರ್ಗೆಯವರು ಗ್ರಾಮೀಣಾಭಿವೃದ್ಧಿಗಾಗಿ ಏನೇನು ಮಾಡಬೇಕು ಎಂದು ಕೇಳಿದರು. ಈ ಚರ್ಚೆಯಲ್ಲಿ ಶ್ರೀ ಚೌಡಯ್ಯ, ಶ್ರೀ ಎಂ. ವೀರಪ್ಪ ಮೊಯಿಲಿ, ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ, ಶ್ರೀ ಕೆ. ಶಿವಮೂರ್ತಿ, ಶ್ರೀ ಸಂಗಮೇಶ್ವರ ಸರದಾರ ಮುಂತಾದವರು ಭಾಗವಹಿಸಿದ್ದರು. ಆಗ ಅಬ್ದುಲ್ ನಜೀರ್ ಸಾಬ್‌ರವರು ದೇಶದ ಅಭಿವೃದ್ಧಿಯ ವಿಚಾರದಲ್ಲಿ ರಾಜಕಾರಣ

ಮಾಡಬಾರದು. ಹಾಗೂ ಗ್ರಾಮೀಣ ಅಭಿವೃದ್ಧಿಯ ಬಗ್ಗೆ ರಾಷ್ಟ್ರ ಮಟ್ಟದಲ್ಲಿ ಚಿಂತನೆ ಮಾಡಬೇಕಾಗಿದೆ ನಾವು ಎರಡು ನಗರ ಸಭೆಗಳಿಗೆ ಮಾಡಿರುವ ವೆಚ್ಚವನ್ನು 26000 ಹಳ್ಳಿಗಳಿಗೆ ಮಾಡಲಾಗಲಿಲ್ಲ. ನಮ್ಮ ಚಿಂತಿಸುವ ದೃಷ್ಟಿಕೋನ ಬದಲಾಗಿ ಸಂಪನ್ಮೂಲಗಳು ಗ್ರಾಮೀಣ ಪ್ರದೇಶಕ್ಕೆ ತಲುಪಬೇಕು ಎಂದರು.

ಈಗ ನಾವು ರಾಜ್ಯದಲ್ಲಿನ ಬಹುತೇಕ ಸಂಪನ್ಮೂಲಗಳನ್ನು ನಗರ ಪ್ರದೇಶಗಳ ಅವಶ್ಯಕತೆಗಳನ್ನು ಪೂರೈಸಲು ಬಳಸುತ್ತಿದ್ದು ದೇಶದಲ್ಲಿನ ಹಳ್ಳಿಗಳ ಜನರ ಕಲ್ಯಾಣಕ್ಕಾಗಿ ಹಣವನ್ನು ಮೀಸಲಿಡಬೇಕೆಂಬುದು ಇವರ ವಾದವಾಗಿತ್ತು.

ಅಬ್ದುಲ್ ನಜೀರ್ ಸಾಬ್‌ರವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿ ನೇಮಕಗೊಂಡ ಮೇಲೆ ಜಾರಿಗೆ ತಂದ ಮಂಡಲ ಪಂಚಾಯತ್, ಜಿಲ್ಲಾ ಪರಿಷತ್‌ಗಳು ಗ್ರಾಮೀಣ ಮಟ್ಟದಲ್ಲಿ ಗ್ರಾಮೀಣ ಮಂದಾಳುಗಳ ಬೆಳವಣಿಗೆಗೆ ಕಾರಣವಾದವು, ಯುವಕರು, ಮಹಿಳೆಯರು ರಾಜಕೀಯ ಪ್ರವೇಶಿಸಲು ವೇದಿಕೆ ಸಿದ್ಧವಾಯಿತು. ಹೀಗೆ ತಮ್ಮ ಸಿದ್ಧಾಂತಗಳನ್ನು ಜಾರಿಗೆ ತಂದು ಎಲ್ಲರಿಗೂ ಮಾದರಿಯಾಗಿರುವುದು ಅಬ್ದುಲ್ ನಜೀರ್ ಸಾಬ್‌ರವರ ದೊಡ್ಡ ಸಾಧನೆಯಾಗಿದೆ.[3]

3.3. ಗ್ರಾಮೀಣಾಭಿವೃದ್ಧಿ ಬಗೆಗಿನ ಚಿಂತನೆಗಳು:

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಇಪ್ಪತ್ತನೇ ಶತಮಾನದ ಎಂಭತ್ತರ ದಶಕದಲ್ಲಿ ಆಡಳಿತದಲ್ಲಿ ಹಿಂದೆಂದೂ ಕಂಡರಿಯದ ಕ್ರಿಯಾಶೀಲತೆ ಮೂಡಿಸಿ ಅಧಿಕಾರ ವಿಕೇಂದ್ರಿಕರಣ ಹಾಗೂ ಗ್ರಾಮೀಣಾಭಿವೃದ್ಧಿಗೆ ಪ್ರಾಮುಖ್ಯತೆ ನೀಡಿ ಗ್ರಾಮೀಣ ಮಟ್ಟದಲ್ಲಿ ನಾಯಕತ್ವ ಬೆಳವಣಿಗೆಗೆ ಪ್ರೋತ್ಸಾಹ ನೀಡಿದ ಮಹಾನ್ ನಾಯಕರಲ್ಲಿ ಶ್ರೀ ಅಬ್ದುಲ್ ನಜೀರ್‌ಸಾಬ್‌ರವರು ಪ್ರಮುಖರಾಗಿದ್ದಾರೆ. "ಹಳ್ಳಿಗಳ ಉದ್ಧಾರವೇ ದೇಶದ ಉದ್ಧಾರ" ಎಂಬ ಗಾಂಧೀಜಿಯವರ ಕಲ್ಪನೆಯನ್ನು ಮೈಗೂಡಿಸಿಕೊಂಡು ಗ್ರಾಮೀಣಾಭಿವೃದ್ಧಿ, ಅಧಿಕಾರ ವಿಕೇಂದ್ರಿಕರಣ ಹಾಗೂ ಗ್ರಾಮೀಣ ನಾಯಕತ್ವಕ್ಕೆ ಇವರು ನೀಡಿದ ಕೊಡುಗೆ ಅನನ್ಯವಾದುದು.[4]

ಕ್ರಿ.ಶ. 1980 ರ ದಶಕದಲ್ಲಿ ಕರ್ನಾಟಕದ ರಾಜಕೀಯದಲ್ಲಿ ತಲ್ಲಣ ಉಂಟಾಯಿತು. ಕನ್ನಡದ ಉಳಿವಿಗಾಗಿ ಗೋಕಾಕ್ ಚಳುವಳಿ ತೀವ್ರವಾಗಿತ್ತು. ಕಾಂಗ್ರೆಸ್ ಪಕ್ಷದ ರೂಢಿಗತ ಆಡಳಿತದಿಂದ ಕಂಗಲಾದ ರೈತರು ಚಳುವಳಿ ಮಾರ್ಗ ಹಿಡಿದಿದ್ದರು. ರಾಜಕೀಯ ಪಕ್ಷಗಳು ಅಧಿಕಾರಕ್ಕಾಗಿ ಪರಸ್ಪರ ಕಚ್ಚಾಡುತ್ತಿದ್ದವು. ಕಾಂಗ್ರೆಸ್ ಪಕ್ಷ, ಒಂದೆಡೆ ಅರಸು ಪಕ್ಷ, ಮತ್ತೊಂದೆಡೆ ಜನತಾಪಕ್ಷ ಮತ್ತು ಕ್ರಾಂತಿರಂಗ ಪಕ್ಷಗಳು ಚುನಾವಣೆಗೆ ಸಿದ್ಧಗೊಂಡವು. ಕ್ರಾಂತಿರಂಗ ಮತ್ತು ಜನತಾ ಪಕ್ಷಗಳು ತಮ್ಮದೇ ಆದ "ಜನತಾ ರಂಗ" ಒಕ್ಕೂಟ ರಚಿಸಿಕಂಡು ಒಂದು ಸಿದ್ಧಾಂತದ ಮೇಲೆ ಚುನಾವಣೆ ಎದುರಿಸಲು ಮುಂದಾದವು. ಇದೇ ಸಂದರ್ಭದಲ್ಲಿ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ಬಲಗೈ ಬಂಟರಾಗಿದ್ದ ಶ್ರೀಯುತ ಅಬ್ದುಲ್ ನಜೀರ್ ಸಾಬ್‌ರವರು 1976 ರಿಂದ 1982 ರ ವರೆಗೆ ಕಾಂಗ್ರೆಸ್ ಪಕ್ಷದ ವಿಧಾನ ಪರಿಷತ್ ಸದಸ್ಯರಾಗಿ ಕ್ರಿಯಾಶೀಲ ರಾಜಕೀಯ ಶಕ್ತಿಯಾಗಿ ಬೆಳೆದರು ಹಾಗೂ ಸರಳ, ಸಜ್ಜನಿಕೆ ಮತ್ತು ಪ್ರಾಮಾಣಿಕತೆಯ ಪ್ರತೀಕವಾಗಿದ್ದರು.[5]

ಶ್ರೀಯುತ ಅಬ್ದುಲ್ ನಜೀರ್ ಸಾಬ್‌ರವರು 1983ರಲ್ಲಿ ಕಾಂಗ್ರೆಸ್ ಪಕ್ಷ ತ್ಯಜಿಸಿ ಬಂಗಾರಪ್ಪ ರಚಿಸಿದ್ದ ಕ್ರಾಂತಿರಂಗ ಪಕ್ಷ ಸೇರಿ ಅದರ ಅಧ್ಯಕ್ಷರಾದರು ಇದೇ ಸಂದರ್ಭದಲ್ಲಿ ಇವರಿಗೆ ಮುಖ್ಯ ಮಂತ್ರಿಯಾಗುವ ಅವಕಾಶವು ಒದಗಿ ಬಂದಿತು. ಆದರೆ ಅದನ್ನು ನಯವಾಗಿಯೇ ತಿರಸ್ಕರಿಸಿದ ನಜೀರ್ ಸಾಬ್‌ರವರು ಮುಖ್ಯ ಮಂತ್ರಿ ಪದವಿ ಬಿಟ್ಟು ಅಲ್ಲಿಯವರೆವಿಗೂ ಅಷ್ಟೇನು ಪ್ರಮುಖವಾಗಿಲ್ಲದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಇದು ಅವರ ನಿಸ್ವಾರ್ಥತೆ, ಪ್ರಾಮಾಣಿಕತೆ, ಸಮಚಿತ್ತತೆ ಮತ್ತು ನಂಬಿಕೆಯ ಪ್ರತೀಕವೆಂದು ಹೇಳಬಹುದು.[6]

ಗ್ರಾಮೀಣ ಭಾಗದ ಜನರಿಗೆ ಒಳ್ಳೆಯ ಕೆಲಸ ಮಾಡಬೇಕು ಹಳ್ಳಿಜನಗಳ ಜೀವನ ಹಸನಾಗಭೇಕೆಂಬುದು ನಜೀರ್ ಸಾಬ್‌ರ ಕನಸಾಗಿತ್ತು. ಗಾಂಧೀಜಿಯವರ ರಾಮರಾಜ್ಯ ನಿರ್ಮಾಣವಾಗಬೇಕಾದರೆ "ಗ್ರಾಮರಾಜ್ಯ" ಅದಕ್ಕೆ ಭದ್ರ ಬುನಾದಿ ಎಂಬುದನ್ನು ಅರಿತಿದ್ದರು. ಅಲ್ಲದೇ ಭಾರತವು ತನ್ನ ಹಳ್ಳಿಗಳಲ್ಲಿ ಜೀವಿಸುತ್ತಿದೆ ಎಂದು ತಿಳಿಸಿದರು. ಮತ್ತು ಎಲ್ಲರು ಹಳ್ಳಿಗಳತ್ತ ನಡೆಯಿರಿ ಎಂದು ಕರೆ ನೀಡಿದರು.

ಅಬ್ದುಲ್ ನಜೀರ್ ಸಾಬ್‌ರವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿ ಅಧಿಕಾರ ವಹಿಸಿಕೊಂಡ ಕೂಡಲೇ ಇಲಾಖೆಯ ಹಿರಿಯ ಅಧಿಕಾರಿಗಳು ಮತ್ತು ಇಂಜಿನಿಯರ್‌ಗಳ ಸಭೆ ನಡೆಸಿ ಗ್ರಾಮೀಣಾಭಿವೃದ್ಧಿ ಇಲಾಖೆ ಯಾವ ದಿಕ್ಕಿನಲ್ಲಿ ಸಾಗಬೇಕು ಎಂಬುದನ್ನು ಅದರ ಗುರಿ ಮತ್ತು ಉದ್ದೇಶಗಳನ್ನು ತಿಳಿಸಿಕೊಟ್ಟರು. ಅಲ್ಲದೆ ಇಲಾಖೆಯ ಯಶಸ್ಸಿಗೆ ದಕ್ಷತೆ, ಪ್ರಾಮಾಣಿಕತೆ, ಕ್ರಿಯಾಶೀಲತೆ ಮತ್ತು ತತ್ವ ನಿಷ್ಠತೆಯ ಅವಶ್ಯಕತೆಯನ್ನು ಮನವರಿಕೆ ಮಾಡಿಕೊಟ್ಟರು. ಅಬ್ದುಲ್‌ನಜೀರ್‌ಸಾಬರು ಅಧಿಕಾರ ವಹಿಸಿಕೊಂಡ ತಕ್ಷಣ ತಮ್ಮ ಗಮನವನ್ನು ಶುದ್ಧ ಕುಡಿಯುವ ನೀರಿನ ಪೂರೈಕೆ ಮತ್ತು ಗ್ರಾಮಸ್ವರಾಜ್ಯ (ಅಧಿಕಾರ ವಿಕೇಂದ್ರಿಕರಣ) ವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಕೇಂದ್ರಿಕರಿಸಿದರು.

ಶುದ್ಧ ಕುಡಿಯುವ ನೀರಿನ ಪೂರೈಕೆಯು ಅವರ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತಿತ್ತು.

ಆದ್ದರಿಂದ ಪ್ರತಿಯೊಂದು ಗ್ರಾಮಕ್ಕೆ ಅಂದರೆ ಜನ ... ಜನಸಂಖ್ಯೆಗೆ ಅನುಗುಣವಾಗಿ ಬೋರ್‌ವೆಲ್ ಕೊರೆಯಿಸಲಾಯಿತು ಅಂದರೆ 500 ರಿಂದ 600 ಜನಸಂಖ್ಯೆ ಇರುವ ಗ್ರಾಮಗಳಿಗೆ ಎರಡು ಬೋರ್‌ವೆಲ್ ಕೊರೆಯಿಸುವಂತೆ ಆದೇಶ ಹೊರಡಿಸಲಾಯಿತು. ಇದರಿಂದ ಕರ್ನಾಟಕದ ಹಳ್ಳಿ ಹಳ್ಳಿಗೂ ಕುಡಿಯುವ ನೀರಿನ ಪೂರೈಕೆಯಾಯಿತು. ಅಬ್ದುಲ್ ನಜೀರ್ ಸಾಬ್‌ರವರ ಜನಪರ ಕಾಳಜಿಯಿಂದ ಜನರ ಸಂತೋಷಕ್ಕೆ ಪಾರವೇ ಇಲ್ಲದಂತೆ ಆಯಿತು. ನಜೀರ್‌ಸಾಬ್ ಕರ್ನಾಟಕದ ಎಲ್ಲ ಜನರ ಕಣ್ಮಣಿಯಾದರು. ದಲಿತ ಕೇರಿಗಳು, ಲಂಬಾಣಿ ತಾಂಡಾಗಳಿಗೂ ನೀರು ಪೂರೈಸುವ ಮೂಲಕ ಅವರ ಮೆಚ್ಚುಗೆಗೂ ಪಾತ್ರರಾದರು.

ಅಬ್ದುಲ್ ನಜೀರ್ ಸಾಬ್ ರವರು ತಮ್ಮ ಅಧಿಕಾರಾವಧಿಯ 2ನೇ ವರ್ಷದಲ್ಲೇ ಗ್ರಾಮೀಣ ಜನತೆಗೆ ನೀರು ಪೂರೈಸಿ 'ನೀರ್ ಸಾಬ್' ಎಂದು ಹೆಸರುಗಳಿಸಿದರು. ಸುರಕ್ಷಿತ ಶುದ್ಧ ನೀರನ್ನು ಬಳಸಿದ್ದರಿಂದ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ಬೇಸಿಗೆಯಲ್ಲಿ ಕಾಣಿಸಿಕೊಳ್ಳುತ್ತಿದ್ದ ಸಾಂಕ್ರಾಮಿಕ ರೋಗಗಳು ಕಡಿಮೆಯಾದವು. ಇದರಿಂದ ಕರ್ನಾಟಕಕ್ಕೆ ರಾಷ್ಟ್ರ ಮಟ್ಟದ ಮಾನ್ಯತೆ ದೊರಕಿತು. ಇದಕ್ಕೆ ನಜೀರ್ ಸಾಬ್‌ರವರ ತತ್ವ ನಿಷ್ಠತೆ, ಪ್ರಾಮಾಣಿಕ ದುಡಿಮೆಯೇ ಕಾರಣವಾಗಿದೆ.

ಅಬ್ದುಲ್ ನಜೀರ್ ಸಾಬ್‌ರವರು ಕ್ರಿಯಾಶೀಲರಾಗಿದ್ದು, ರಾಜ್ಯದ ಮೂಲೆ ಮೂಲೆಗಳಲ್ಲಿಯೂ ಪ್ರವಾಸ ಮಾಡಿ ತಾವೇ ಕಾರ್ಯಕ್ರಮಗಳ ಉಸ್ತುವಾರಿಯನ್ನು ಪರಿಶೀಲಿಸುತ್ತಿದ್ದರು. ಅಬ್ದುಲ್ ನಜೀರ್ ಸಾಬ್‌ರವರ ಕಾರ್ಯ ದಕ್ಷತೆಯನ್ನು ಪರಿಕ್ಷೀಸುವ ಸಲುವಾಗಿ ಎಂಬಂತೆ 1984 - 85ರಲ್ಲಿ ಭೀಕರ ಬರಗಾಲ ಸಂಭವಿಸಿತು.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಅವರು ತೋರಿದ ಉತ್ಸಾಹ ಕವಿ ರವೀಂದ್ರ ನಾಥ ಠಾಕೂರ್‌ರವರ "ಊದುವವನು ಒಳ್ಳೆಯ ಕೊಳಲಿಗಾಗಿ ಹುಡುಕುತ್ತಿರುವಂತೆ ಆ ಕೊಳಲು ಕೂಡ ಒಬ್ಬ ಒಳ್ಳೆಯ ಸಂಗೀತಗಾರನಿಗಾಗಿ ಹುಡುಕುತ್ತಿರುತ್ತದೆ" ಎಂಬ ಮಾತಿನಂತಿತ್ತು. ನಜೀರ್ ಸಾಬರು ತಮಗೆ ಊಟ, ನಿದ್ರೆಯ ಅರಿವಿಲ್ಲದೆ ಸಭೆ, ಸಮಾರಂಭ, ಕಾರ್ಯಗಾರ, ತಪಾಸಣೆ, ಪರಿಶೀಲನೆ, ಮಾಡುವ ಮೂಲಕ ಇಡೀ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯ ವೈಖರಿಯನ್ನು ಚುರುಕುಗೊಳಿಸಿದರು.

1984-85 ರಲ್ಲಿ ಬಿಜಾಪುರದಲ್ಲಿ ಉಂಟಾದ ಭೀಕರ ಬರಗಾಲದಿಂದ ಅಲ್ಲಿನ ಜನ ಬಹಳ ಸಂಕಷ್ಟಕ್ಕೆ ಸಿಲುಕಿದ್ದರು ಆಗ ಅಲ್ಲಿಗೆ ಭೇಟಿ ನೀಡಿದ್ದ ನಜೀರ್‌ಸಾಬ್, ನಂತರ ಗುಲ್ಬರ್ಗಕ್ಕೆ ಪ್ರಯಾಣ ಬೆಳೆಸಿದರು. ಒಂದೇ ದಿನದಲ್ಲಿ ಸುಮಾರು 300 ಕಿ.ಮೀ. ವ್ಯಾಪ್ತಿಯಲ್ಲಿ ಪರಿಶೀಲನೆ ನಡೆಸಿದ್ದು ಇವರ ಕಾರ್ಯ ದಕ್ಷತೆಗೆ ಸಾಕ್ಷಿಯಾಗಿದೆ.

ವಸತಿಗಳ ನಿರ್ಮಾಣ:

ಹಳ್ಳಿಗಳ ಉದ್ಧಾರವೇ ದೇಶದ ಉದ್ಧಾರ ಎಂದು ನಂಬಿದ್ದ ನಜೀರ್‌ಸಾಬರು ಕೇವಲ ಶುದ್ಧ ಕುಡಿಯುವ ನೀರಿನ ಪೂರೈಕೆ ಮಾಡಿದ್ದು, ಮಾತ್ರವಲ್ಲದೆ ಜನರು ವಾಸಿಸಲು ಯೋಗ್ಯವಾದ ಸೂರು (ವಸತಿ) ಗಳನ್ನು ನಿರ್ಮಿಸಿಕೊಡಲು ಪಣ ತೊಟ್ಟರು. ಅದರ ಪೂರಕವೆಂಬಂತೆ ಜನತಾ ಮನೆಗಳ ನಿರ್ಮಾಣಕ್ಕೆ ಕೈ ಹಾಕಿ ಪ್ರತಿ ವರ್ಷ ಪ್ರತಿ ತಾಲ್ಲೂಕಿನಲ್ಲಿ ಒಂದು ಸಾವಿರ ಮನೆಗಳ ನಿರ್ಮಾಣಕ್ಕೆ ಚಾಲನೆ ದೊರೆಯಿತು.

ಶ್ರೀಯುತ ಅಬ್ದುಲ್ ನಜೀರ್ ಸಾಬ್‌ರವರ ಜನಪರ ಕಾಳಜಿ ಯಾವ ಮಟ್ಟದಲ್ಲಿತ್ತೆಂದರೆ ಮುಂದಿನ ದಿನಗಳಲ್ಲಿ ಇವರು ಕ್ಯಾನ್ಸರ್ ರೋಗ ಪೀಡಿತರಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ತಮ್ಮನ್ನು ಭೇಟಿ ಮಾಡಲು ಬಂದ ಬಂಧು ಮಿತ್ರರ ಬಳಿ ತಮ್ಮ ಕಾಯಿಲೆಯ ಬಗ್ಗೆಯಾಗಲಿ, ಅಥವಾ ವೈಯಕ್ತಿಕ ವಿಷಯದ ಬಗ್ಗೆಯಾಗಲೀ ಕೇಳುತ್ತಿರಲಿಲ್ಲ. ಅದಕ್ಕೆ ಬದಲಾಗಿ ಬಡ ಜನರ ವಾಸಕ್ಕೆ ಯೋಗ್ಯವಾದ ಮನೆಗಳ ನಿರ್ಮಾಣವಾಗುತ್ತಿದೆಯೇ? ಎಂದು ವಿಚಾರಿಸುತ್ತಿದ್ದರು.[7] ಹೀಗೆ ಗ್ರಾಮೀಣಾಭಿವೃದ್ಧಿ ಚಿಂತನೆಗಳನ್ನು ಮೈಗೂಡಿಸಿ ಕೊಂಡಿದ್ದ ನಜೀರ್ ಸಾಬ್ ಇಂದಿನ ರಾಜಕೀಯ ವ್ಯಕ್ತಿಗಳಿಗೆ ಮಾದರಿಯಾಗಿದ್ದಾರೆ.

ಅಡಿ ಟಿಪ್ಪಣಿಗಳು:

1. ಮಾಹಿತಿ ಸಂಗ್ರಹಣೆ: ಶ್ರೀ ಅನವರ್ ಪಾಷ ಖಜಾಂಚಿಗಳು
ಶ್ರೀ ಜವಹರ ಶಿಕ್ಷಣ ಸಂಸ್ಥೆ, ಗುಂಡ್ಲುಪೇಟೆ.
2. ಪ್ರೊ. ಮಲೆಯೂರು ಗುರುಸ್ವಾಮಿ - ಹೊನ್ನು ಹೊಳೆ - ಪುಟಸಂಖ್ಯೆ 461
3. ಮನುಬಳಿಗಾರ್ "ಸಂಸದೀಯ ಪಟು ನಜೀರ್ ಸಾಬ್"
ಪುಟಸಂಖ್ಯೆ 22, 23, 24, 25, 26, 27, 28
4. ಪ್ರೊ. ಮಲೆಯೂರು ಗುರುಸ್ವಾಮಿ 'ಹೊನ್ನು ಹೊಳೆ' ಪುಟಸಂಖ್ಯೆ 460
5. ಸಂಸದೀಯ ಪಟು ನಜೀರ್‌ಸಾಬ್ -ಪುಟಸಂಖ್ಯೆ 18, 19
6. ಟಿ.ಎಸ್. ಛಾಯಾಪತಿ -ತತ್ವ ನಿಷ್ಠೆ -ಪುಟಸಂಖ್ಯೆ 18, 19
7. ಮನು ಬಳಿಗಾರ್ "ಸಂಸದೀಯ ಪಟು ನಜೀರ್‌ಸಾಬ್" ಪುಟಸಂಖ್ಯೆ 19, 20, 21.

ಅಧ್ಯಾಯ - ೪

ಅಬ್ದುಲ್ ನಜೀರ್ ಸಾಬ್‌ರವರ ರಾಜಕೀಯ ಸಾಧನೆಗಳು

ಅಧ್ಯಾಯ - 4
ಅಬ್ದುಲ್ ನಜೀರ್ ಸಾಬ್‌ರವರ ರಾಜಕೀಯ ಸಾಧನೆಗಳು

4.1 ರಾಜಕೀಯ ಪ್ರವೇಶ : ಹಿನ್ನೆಲೆ

ಅಬ್ದುಲ್ ನಜೀರ್ ಸಾಬ್‌ರವರ ರಾಜಕೀಯ ಪ್ರವೇಶ ಆಕಸ್ಮಿಕವಾದುದಲ್ಲ. ಏನೆಂದರೆ ನಜೀರ್ ಸಾಬ್ ಅವರಿಗೆ ಬಾಲ್ಯದಿಂದಲೇ ರಾಜಕಾರಣದತ್ತ ಒಲವಿತ್ತು. ಕಾರ್ಲ್ ಮಾರ್ಕ್ಸ್ ಸಿದ್ಧಾಂತದ ಪ್ರಭಾವಕ್ಕೆ ಒಳಗಾಗಿದ್ದರು. ಇವರ ಬಾಲ್ಯದ ಮೆಚ್ಚಿನ ನಾಯಕ ಬಾಲದಂಡಾಯುಧನ್. ಇವರ ನಾಯಕತ್ವ ಕೂಡ ನಜೀರ್ ಸಾಬ್‌ರ ರಾಜಕೀಯ ಏಳಿಗೆಗೆ ಪ್ರೇರಣೆಯಾಯಿತು. ನಜೀರ್ ಸಾಬ್ ತಂದೆ ಪೀರ್ ಸಾಹೇಬರು ತಾವು ಶಿಕ್ಷಣದಿಂದ ವಂಚಿತರಾಗಿದ್ದರೂ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಏಕೈಕ ಉದ್ದೇಶದಿಂದ ತಮ್ಮ ವಾಸಸ್ಥಾನವನ್ನು ತಾಳವಾಡಿ ಫಿರ್ಕಾಕ್ಕೆ ಸೇರಿದ ಬೈಯಣಾಪುರ ಗ್ರಾಮದಿಂದ ಗುಂಡ್ಲುಪೇಟೆ ಪಟ್ಟಣಕ್ಕೆ 1946ರಲ್ಲಿ ಸ್ಥಳಾಂತರವಾದರು[1].

ಅಬ್ದುಲ್ ನಜೀರ್‌ಸಾಬ್‌ರವರು ಗುಂಡ್ಲುಪೇಟೆಯಲ್ಲಿ ಮಾಧ್ಯಮಿಕ ಮತ್ತು ಪ್ರೌಢಶಿಕ್ಷಣ ಮುಗಿಸಿದರು. ನಂತರ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ತೆರಳಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ಶಿಕ್ಷಣ ಪಡೆದರು. ಆಮೇಲೆ ಸೀನಿಯರ್ ಇಂಟರ್‌ಮೀಡಿಯಟ್ ಶಿಕ್ಷಣ ಪಡೆಯುತ್ತಿದ್ದಾಗ ಅನಾರೋಗ್ಯ ಪೀಡಿತರಾದರು. ಇದರಿಂದಾಗಿ ವಿದ್ಯಾಭ್ಯಾಸ ಮೊಟಕುಗೊಂಡಿತು. ಈ ಸಂದರ್ಭದಲ್ಲಿ ಗುಂಡ್ಲುಪೇಟೆಗೆ ಮರಳಿದ ನಜೀರ್‌ಸಾಬ್ ಗುಣಮುಖರಾದ ಮೇಲೆ ಸಮಾಜಸೇವೆಯಲ್ಲಿ ತೊಡಗಿದರು[2].

ನಜೀರ್‌ಸಾಬ್‌ರು ಮೈಸೂರಿನಲ್ಲಿದ್ದಾಗಲೇ ರಮಾವಿಲಾಸ ರಸ್ತೆಯಲ್ಲಿದ್ದ ಕಲಾಕ್ಷೇತ್ರದಲ್ಲಿ ಪಿ.ಆರ್.ತಿಪ್ಪೇಸ್ವಾಮಿ, ಜೀ.ಶಂ.ಪರಮಶಿವಯ್ಯ, ಹೇಮದಳ ರಾಮದಾಸ್ ಅವರ ಒಡನಾಟದಲ್ಲಿ ಕ್ರಿಯಾಶೀಲರಾಗಿದ್ದರು[3].

ಪುಸ್ತಕಪ್ರಿಯರಾಗಿದ್ದ ನಜೀರ್‌ಸಾಬ್ ಮಿತ್ರಮಂಡಳಿ ಎಂಬ ವಾಚನಾಲಯವನ್ನು ಪ್ರಾರಂಭಿಸಿದರು. ಇದು ಮುಂದೆ ಇವರು ರಾಜಕೀಯ ಪ್ರವೇಶಿಸಲು ಪ್ರೇರಣೆಯಾಯಿತು.

ಅಬ್ದುಲ್ ನಜೀರ್‌ಸಾಬ್ ಅವರಲ್ಲಿದ್ದ ಅಪಾರವಾದ ಜ್ಞಾನಸಂಪತ್ತು, ಪಾಂಡಿತ್ಯ, ವಿನಯತೆ, ಪ್ರಾಮಾಣಿಕತೆ, ಜನಪರ ಕಾಳಜಿ ಇವುಗಳನ್ನು ಗಮನಿಸಿದ ತಂದೆ ಪೀರ್ ಸಾಹೇಬರು ನೀನು ಸಮಾಜಸೇವೆಗೆ ತಕ್ಕವನು ಎಂದು ಮಗನನ್ನು ಉತ್ತೇಜಿಸಿ ರಾಜಕೀಯ ಕ್ಷೇತ್ರ ಪ್ರವೇಶಿಸುವಂತೆ ಉತ್ತೇಜಿಸಿದರು. ಇದೇ ಸಂದರ್ಭದಲ್ಲಿ ಗುಂಡ್ಲುಪೇಟೆಯಲ್ಲಿ ಕೆ.ಎಸ್.ನಾಗರತ್ನಮ್ಮನವರ ಯುಗ ಪ್ರಾರಂಭವಾಗಿತ್ತು. ನಾಗರತ್ನಮ್ಮ ಅವರು ಜನರ ಪ್ರೀತಿಯ ಕಣ್ಮಣಿಗಳಾಗಿದ್ದರು. ಸಾಮಾಜಿಕವಾಗಿ, ಆರ್ಥಿಕವಾಗಿ ಅವರ ವರ್ಚಸ್ಸು ಹೆಚ್ಚಾಗಿತ್ತು. ಜನರು ನಾಗರತ್ನಮ್ಮ ಅವರನ್ನು "ಅಮ್ಮ" ಎಂದೇ ಸಂಭೋದಿಸುತ್ತಿದ್ದರು[4].

ಕೆ.ಎಸ್.ನಾಗರತ್ನಮ್ಮನವರು ಬೆಂಗಳೂರಿನಲ್ಲಿದ್ದಾಗ ಅವರ ಗುಂಡ್ಲುಪೇಟೆಯಲ್ಲಿನ ಕೆಲಸಗಳನ್ನು ನೋಡಿಕೊಳ್ಳಲು ಒಬ್ಬ ನಾಯಕನ ಅವಶ್ಯಕತೆ ಇತ್ತು. ಇದನ್ನರಿತ ನಾಗರತ್ನಮ್ಮ ಅವರು ನಜೀರ್ ಸಾಬ್ ಅವರೇ ಈ ಜಾಗಕ್ಕೆ ಸೂಕ್ತವಾದ ವ್ಯಕ್ತಿ ಎಂದು ತೀರ್ಮಾನಿಸಿ ನಜೀರ್ ಸಾಬ್‌ರ ರಾಜಕೀಯ ಏಳಿಗೆಗೆ ಕಾರಣಕರ್ತರಾದರು. ಇಂತಹ ಸಂದರ್ಭದಲ್ಲಿ ತಂದೆ ಪೀರ್ ಸಾಹೇಬರು "ಇಂದಿನಿಂದ ನೀನು ಕೇವಲ ಜನ ಕಲ್ಯಾಣ ಕೆಲಸಗಳಿಗೆ ಮಾತ್ರ ಸೀಮಿತವಾದ ವ್ಯಕ್ತಿಯಾಗಬೇಕು. ಇಂತಹ ಕಾರ್ಯಗಳಿಂದ ನನ್ನ ಗಳಿಕೆಯ ಸರ್ವಸ್ವವನ್ನು ವ್ಯಯಿಸಿದರೂ ಚಿಂತಿಸುವುದಿಲ್ಲ" ಎನ್ನುವ ಮಾತುಗಳ ಮೂಲಕ ಮಗನ ರಾಜಕೀಯ ಪ್ರವೇಶಕ್ಕೆ ವೇದಿಕೆ ಸಿದ್ಧಪಡಿಸಿದರು.[5]

4.2 ಪುರಸಭಾ ಅಧ್ಯಕ್ಷರಾಗಿ ನಜೀರ್ ಸಾಬ್‌ರವರ ಸಾಧನೆಗಳು

ಗುಂಡ್ಲುಪೇಟೆ ಪುರಸಭೆಯು ಸ್ಥಾಪನೆಯಾದ ಪ್ರಾರಂಭದಿಂದಲೂ ಹಣವಂತರ ವಶದಲ್ಲಿತ್ತು. ಆ ಸಂದರ್ಭದಲ್ಲಿ ಒಬ್ಬ ಸಾಮಾನ್ಯ ಮನುಷ್ಯ ಪುರಸಭೆಗೆ ಪ್ರವೇಶ ಪಡೆಯುವುದು ತುಂಬಾ ಕಷ್ಟದ ಕೆಲಸವಾಗಿತ್ತು. ಇಂತಹ ಸನ್ನಿವೇಶದಲ್ಲೂ ಯುವಕ ನಜೀರ್ ಸಾಬ್ ಸಾಮಾನ್ಯ ಜನರನ್ನು ಕಲೆಹಾಕಿ ಪುರಸಭೆಗೆ ಸ್ಪರ್ಧಿಸಿ ಜಯಶಾಲಿಗಳಾದರು. ತದನಂತರ ಮಾತೃಶ್ರೀ ಕೆ.ಎಸ್.ನಾಗರತ್ನಮ್ಮನವರ ಅನುಯಾಯಿಯಾಗಿ, ಕಾರ್ಯಕರ್ತನಾಗಿ ದುಡಿಯುತ್ತಾ ಬಂದರು. ಹಲವು ವರ್ಷಗಳಲ್ಲಿ ಇವರಲ್ಲಿ ಅಡಗಿದ್ದ ಜ್ಞಾನ, ಪ್ರಾಮಾಣಿಕತೆ, ಛಲ, ನಿಸ್ವಾರ್ಥತೆ ಇವರ ವ್ಯಕ್ತಿತ್ವ ವಿಕಸನದ ಸಾಧನಗಳಾದವು. ದಿನದಿಂದ ದಿನಕ್ಕೆ ಸಾಮಾನ್ಯ ಮನುಷ್ಯರಲ್ಲಿಬೆರೆತು ಅವರ ಕಷ್ಟ ಕಾರ್ಪಣ್ಯಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಜನರ ಮನಸ್ಸಿನಲ್ಲಿ ಅತಿ ಪ್ರೀತಿಪೂರ್ವಕ ವ್ಯಕ್ತಿಯಾದರು. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸತತವಾಗಿ ಚುನಾಯಿತರಾಗುತ್ತಿದ್ದಂತಹ ಮಾತೃಶ್ರೀ ಕೆ.ಎಸ್.ನಾಗರತ್ನಮ್ಮನವರ ನೆಚ್ಚಿನ ಹಿಂಬಾಲಕರಾಗಿದ್ದರು. ಕೆ.ಎಸ್.ನಾಗರತ್ನಮ್ಮನವರು ಸಾರ್ವಜನಿಕ ವೇದಿಕೆಗಳಲ್ಲಿ 'ನಜೀರ್ ನನ್ನ ಮಗ' ಎಂದು ಸಂಭೋದಿಸುತ್ತಿದ್ದರು. ನಜೀರ್ ಸಾಬ್ ಕೂಡ ಕೆ.ಎಸ್.ನಾಗರತ್ನಮ್ಮ ಅವರನ್ನು 'ಅಮ್ಮ' ಎಂದು ಸಂಭೋದಿಸುತ್ತಿದ್ದರು. ಇದು ತಾಯಿ-ಮಗನ ಬೆಸುಗೆಯಾಗಿತ್ತು. ನಾಗರತ್ನಮ್ಮನವರ ಅನುಪಸ್ಥಿತಿಯಲ್ಲಿ ಸಾರ್ವಜನಿಕ ಕೆಲಸವನ್ನು ಅಬ್ದುಲ್ ನಜೀರ್‌ಸಾಬ್‌ರವರೇ ಪ್ರಾಮಾಣಿಕವಾಗಿ ನಿರ್ವಹಿಸುತ್ತಿದ್ದರು. ಹೀಗಾಗಿ ಜನರಿಗೆ ಅತಿಪ್ರಿಯವಾದ ವ್ಯಕ್ತಿಯಾದರು. ಶ್ರೀಮತಿ ಕೆ.ಎಸ್.ನಾಗರತ್ನಮ್ಮನವರ ಅನುಪಸ್ಥಿತಿಯಲ್ಲಿ ಮಾಡಿದ ಜನೋಪಕಾರಿ ಕೆಲಸಗಳು, ಜನರ ಕಷ್ಟಗಳಿಗೆ ಸ್ಪಂದಿಸುವ ಗುಣ, ವಾಕ್‌ಚತುರತೆ, ಸಮಾಜದಲ್ಲಿ ಎಲ್ಲರೊಂದಿಗೆ ಬೆರೆಯುವ ಗುಣ ಮುಂದಿನ ದಿನಗಳಲ್ಲಿ ಗುಂಡ್ಲುಪೇಟೆಯ ಪುರಸಭಾ ಅಧ್ಯಕ್ಷನಾಗಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಿದವು.

ಅಬ್ದುಲ್ ನಜೀರ್ ಸಾಬ್‌ರವರು ಗುಂಡ್ಲುಪೇಟೆಯ ಪುರಸಭೆಯಲ್ಲಿ 01.04.1969ರಿಂದ 21.01.1970ರವರೆಗೂ , 01.01.1970ರಿಂದ 21.12.2971ರವರೆಗೂ ಎರಡು ಬಾರಿ ಅಧ್ಯಕ್ಷರಾಗಿ ಅಧಿಕಾರ ನಡೆಸಿದರು8. ಈ ಸಂದರ್ಭದಲ್ಲಿ ಅವರು ಹಲವಾರು ಸುಧಾರಣೆಗಳನ್ನು ಕೈಗೊಂಡಿದ್ದಾರೆ. ಅವುಗಳೆಂದರೆ,

ಅಬ್ದುಲ್ ನಜೀರ್ ಸಾಬ್‌ರವರು ಪುರಸಭಾ ಅಧ್ಯಕ್ಷರಾಗಿದ್ದಾಗ ಗುಂಡ್ಲುಪೇಟೆ ಪಟ್ಟಣದಲ್ಲಿ ಮರಿತಿಮ್ಮಯ್ಯ (ಮರಿಯಪ್ಪ) ಅವರಿಂದ ಖಾಲಿ ಜಾಗವನ್ನು ಪಡೆದುಕೊಂಡು ಮಾರುಕಟ್ಟೆಯನ್ನು ಪ್ರಾರಂಭಿಸಿದರು. ಅಲ್ಲದೆ ಗುಂಡ್ಲುಪೇಟೆಯ ವಿವಿಧ ವಿಭಾಗಗಳಲ್ಲಿ ಜನರಿಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಟ್ಟರು. ಸದಾ ಜನರ ಕಷ್ಟಸುಖಗಳಿಗೆ ಸ್ಪಂದಿಸುತ್ತಿದ್ದ ಅಬ್ದುಲ್ ನಜೀರ್ ಸಾಬ್ ಅತಿ ಕಡಿಮೆ ಅವಧಿಯಲ್ಲಿಯೇ ಶ್ರೀಮತಿ ಕೆ.ಎಸ್.ನಾಗರತ್ನಮ್ಮ ಮತ್ತು ಕೆ.ಎಚ್.ಪಾಟೀಲರ ಇಚ್ಛೆಯಾನುಸಾರ ಕಾಂಗ್ರೆಸ್ ಪಕ್ಷದಿಂದ ವಿಧಾನ ಪರಿಷತ್ ಸದಸ್ಯರಾಗಿ 1976ರಲ್ಲಿ ಆಯ್ಕೆಯಾದರು[6].

4.3 ವಿಧಾನ ಪರಿಷತ್ ಸದಸ್ಯರಾಗಿ ನಜೀರ್ ಸಾಬ್‌ರವರ ಸಾಧನೆಗಳು

ಅಬ್ದುಲ್ ನಜೀರ್ ಸಾಬ್‌ರವರು ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಲು ಅವರಲ್ಲಿದ್ದ ಸರಳತೆ, ವಿನಯತೆ, ಪ್ರಾಮಾಣಿಕತೆ, ಅಪಾರವಾದ ಜ್ಞಾನ ಸಂಪತ್ತು ಕಾರಣವಾದವು. ಶ್ರೀಮತಿ ಕೆ.ಎಸ್.ನಾಗರತ್ನಮ್ಮನವರ ಬಲಗೈ ಬಂಟರಾಗಿದ್ದ ನಜೀರ್‌ಸಾಬ್ ಅವರ ಎಲ್ಲ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದ್ದರು. ಇವರ ಪ್ರಾಮಾಣಿಕತೆ ಇವರಿಗೆ ಗುಂಡ್ಲುಪೇಟೆಯ ಪುರಸಭಾ ಅಧ್ಯಕ್ಷರಾಗಲು ನೆರವಾಯಿತು.

ಗುಂಡ್ಲುಪೇಟೆಯ ಕೆ.ಪಿ.ಸಿ.ಸಿ. (ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ) ಪ್ರತಿನಿಧಿಯಾಗಿದ್ದಾಗ ನಜೀರ್ ಸಾಬ್‌ರವರು ನಿರಂತರವಾಗಿ ಕೆಳಮಟ್ಟದ ಕಾರ್ಯಕರ್ತನಿಂದ ಮೇಲ್ಮಟ್ಟದ ನಾಯಕರವರೆಗೂ ಸತತ ಸಂಪರ್ಕ ಹೊಂದಿರುತ್ತಿದ್ದರು. ಇವರ ಹೊಂದಿಕೊಳ್ಳುವ ಗುಣ, ಕಾರ್ಯಕ್ಷಮತೆ, ಜ್ಞಾನ ಮುಂತಾದುವುಗಳನ್ನು ಗುರುತಿಸಿದ ಆಗಿನ ಕಾಲದಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ದಿವಂಗತ ಶ್ರೀ ಕೆ.ಹೆಚ್.ಪಾಟೀಲರು ತಮ್ಮ ಶಿಷ್ಯಸರಣಿಯಲ್ಲಿ ಒಬ್ಬರನ್ನಾಗಿ ಮಾಡಿಕೊಂಡರು. ನಂತರದ ದಿನಗಳಲ್ಲಿ ಶ್ರೀ ಕೆ.ಹೆಚ್.ಪಾಟೀಲ್ ಎಲ್ಲ ಗುಣಗಳನ್ನೂ ಮೈಗೂಡಿಸಿಕೊಂಡ ನಜೀರ್‌ಸಾಬ್, ಶ್ರೀ ಕೆ.ಹೆಚ್.ಪಾಟೀಲ್ ಮತ್ತು ಶ್ರೀಮತಿ ಕೆ.ಎಸ್.ನಾಗರತ್ನಮ್ಮನವರ ಇಚ್ಛೆಯ ಅನುಸಾರ 1976ರಲ್ಲಿ ಮೇಲ್ಮನೆ (ವಿಧಾನ ಪರಿಷತ್ತು) ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಿ ಆಯ್ಕೆಯಾದರು. ನಜೀರ್‌ಸಾಬ್ ವಿಧಾನ ಪರಿಷತ್‌ಗೆ ಆಯ್ಕೆಯಾಗಿದ್ದಕ್ಕೆ ಶುಭವನ್ನು ಕೋರಲು ಕಾಂಗ್ರೆಸ್ ಕಛೇರಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯನ್ನು ಕರೆಯಲಾಗಿತ್ತು. ಆ ಸಭೆಯಲ್ಲಿ ಕೆ.ಹೆಚ್.ಪಾಟೀಲರು ಹೀಗೆ ಹೇಳಿದರು. "ನೋಡಿ ಒಬ್ಬ ಸಾಮಾನ್ಯ ಕಾರ್ಯಕರ್ತ ಪ್ರಾಮಾಣಿಕ ಸೇವೆಯನ್ನು ಮಾಡುವಂತಹ ಉದಾಹರಣೆಗಳಿದ್ದರೆ, ಆತ ಮುಂದೆ ಬರಲು ಸಾಧ್ಯ ಎಂದು ನಿರೂಪಿಸುವುದಕ್ಕೆ ಶ್ರೀ ಅಬ್ದುಲ್ ನಜೀರ್ ಸಾಬ್‌ರವರು ಮೇಲ್ಮನೆಗೆ ಆಯ್ಕೆಯಾಗಿರುವುದೇ ಸಾಕ್ಷಿ" . ಮೇಲ್ಮನೆ ಸದಸ್ಯತ್ವಕ್ಕೆ ಅರ್ಜಿಯನ್ನು ನಮ್ಮಗಳ ಬಲವಂತಕ್ಕೆ ಒಪ್ಪಿಸಿ ಸಹಿ ಮಾಡಿಸಿಕೊಂಡಿದ್ದೆವು. ಆಗಲೂ ನಜೀರ್‌ಸಾಬ್‌ರವರು ನನಗೆ ಮೇಲ್ಮನೆ ಸದಸ್ಯತ್ವ ಬೇಡ, ನಾನು ಸಾಮಾನ್ಯ ಕಾರ್ಯಕರ್ತನಾಗಿ ದುಡಿಯುತ್ತೇನೆ ಎಂದು ಉತ್ತರಿಸಿದ್ದರು. ನೀವೂ ಸಹ ಪ್ರಾಮಾಣಿಕವಾಗಿ ಜನರ ಸೇವೆ ಮಾಡುವ ಆಶಯವನ್ನು ತೋರಿಸಿದರೆ ನೀವು ಮುಂದೆ ಬರಲು ಸಾಧ್ಯ" ಎಂದು ಹೇಳುವ ಮೂಲಕ ಸದನದಲ್ಲಿ ನಜೀರ್ ಸಾಬ್ ಅವರ ಇರುವಿಕೆಯನ್ನು ತೋರಿಸಿಕೊಟ್ಟರು[7].

ಅಬ್ದುಲ್ ನಜೀರ್ ಸಾಬ್‌ರವರು ವಿಧಾನಸಭೆಯ ಸದಸ್ಯರಾಗಿ ಆಯ್ಕೆಯಾದ ಮೇಲೆ ವಿಧಾನ ಪರಿಷತ್‌ನಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ತಮ್ಮ ವಾಕ್ ಚಾತುರ್ಯದ ಮೂಲಕ ಸದನದಲ್ಲಿ ಎಲ್ಲರನ್ನೂ ತಬ್ಬಿಬ್ಬುಗೊಳಿಸುತ್ತಿದ್ದರು. ಅಪಾರ ಪಾಂಡಿತ್ಯ ಪಡೆದಿದ್ದ ನಜೀರ್ ಸಾಬ್‌ರವರು ಎಲ್ಲ ವಿಚಾರಗಳ ಬಗ್ಗೆ ಸದನದಲ್ಲಿ ಚರ್ಚೆ ನಡೆಸುತ್ತಿದ್ದರು. ಇವರು ವಿಧಾನ ಪರಿಷತ್, ಸದನದಲ್ಲಿ ಚರ್ಚಿಸಿರುವ ಪ್ರಮುಖ ಅಂಶಗಳೆಂದರೆ,

ಶೈಕ್ಷಣಿಕ ವಿಚಾರಗಳು:-

ನಜೀರ್‌ಸಾಬ್‌ರವರು ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಅಂದಿನ ಶಿಕ್ಷಣ ಸಚಿವರು ನೀಡಿದ ಅಂಕಿಅಂಶಗಳನ್ನು ವಿಶ್ಲೇಷಿಸಿ ಸಭಾಪತಿಯವರಿಗೆ 1976ನೇ ಜುಲೈ 18ನೇ ತಾರೀಖಿನಂದು ತಮ್ಮ ವಾದವನ್ನು ಈ ರೀತಿ ಮಂಡಿಸುತ್ತಾರೆ.

ನಮ್ಮ ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ನಾವು ಒಂದು ಕ್ಷೇತ್ರದಲ್ಲಿ ಬಹಳ ಮುಗ್ಗರಿಸಿದ್ದೇವೆ. ಆ ಕ್ಷೇತ್ರವೆಂದರೆ ಶೈಕ್ಷಣಿಕ ಕ್ಷೇತ್ರ "ಪ್ರಪಂಚವನ್ನು ಬದಲಿಸುವ ಏಕೈಕ ಅಸ್ತ್ರ ಶಿಕ್ಷಣ" ಎಂಬ ನೆಲ್ಸನ್ ಮಂಡೇಲಾರ ತತ್ವವನ್ನು ಅಳವಡಿಸಿಕೊಂಡಿರುವ ನಜೀರ್‌ಸಾಬ್ ನಾವು ಶಿಕ್ಷಣದ ಅಭಿವೃದ್ಧಿಗಾಗಿ ಹಲವು ಕೋಟಿ ರೂ.ಗಳನ್ನು ವೆಚ್ಚ ಮಾಡುತ್ತಿದ್ದೇವೆ. ಅಷ್ಟು ಹಣ ಖರ್ಚು ಮಾಡಿದರೂ ಸಹ ದೇಶದಲ್ಲಿ ಶೇ. 30ರಷ್ಟು ಮಂದಿ ಮಾತ್ರ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಶೇ. 70 ರಷ್ಟು ಮಂದಿ ಅನಕ್ಷರಸ್ಥರಾಗಿದ್ದಾರೆ. ಇದಕ್ಕೆ ಕಾರಣಗಳನ್ನು ಹುಡುಕಬೇಕಾಗಿದೆ. ನಮ್ಮಲ್ಲಿ ಸಂಪನ್ಮೂಲಗಳಿಲ್ಲವೇ? ನಮ್ಮ ಶಿಕ್ಷಣ ಪದ್ಧತಿಯಲ್ಲಿ ಏನಾದರೂ ದೋಷಗಳಿವೆಯೇ? ಎಂಬುದನ್ನು ಚಿಂತಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಎಲ್ಲರೂ ಒಗ್ಗಟ್ಟಾಗಿ ತೀರ್ಮಾನ ತೆಗೆದುಕೊಳ್ಳಬೇಕು. ಒಳ್ಳೆಯ ಶಿಕ್ಷಣ ಪದ್ಧತಿಯನ್ನು ತರಲು ಸಾಕಷ್ಟು ಪ್ರಯತ್ನಗಳಾಗಬೇಕು. ನಾವು ನಮ್ಮ ರಾಷ್ಟ್ರೀಯ ಉತ್ಪನ್ನದ ಶೇ. 3ರಷ್ಟನ್ನು ಮಾತ್ರ ಶಿಕ್ಷಣಕ್ಕಾಗಿ ಖರ್ಚು ಮಾಡುತ್ತಿದ್ದೇವೆ. ಪಾಕಿಸ್ತಾನದಲ್ಲಿ ಶೇ. 7 ರಿಂದ 9ರಷ್ಟನ್ನು ಶಿಕ್ಷಣಕ್ಕಾಗಿ ವೆಚ್ಚ ಮಾಡುತ್ತಿದ್ದಾರೆ. ಆದರೆ ನಮ್ಮಲ್ಲಿ ಹೆಚ್ಚಿನ ಜನಸಂಖ್ಯೆ ಇದ್ದರೂ ಕಡಿಮೆ ಜನಸಂಖ್ಯೆ ಇರುವ ಶ್ರೀಲಂಕಾ ಮಾಡುವ ಶೇ. 3 ರಷ್ಟನ್ನೇ ನಾವು ಖರ್ಚು ಮಾಡುತ್ತಿದ್ದೇವೆ. ಇದರಿಂದ ದೇಶದ ಪ್ರಗತಿ ಅಸಾಧ್ಯ ಎಂದು ಪ್ರತಿಪಾದಿಸಿದ್ದಾರೆ.

ಭಾರತೀಯ ಶಿಕ್ಷಣ ವ್ಯವಸ್ಥೆ ಅಸಮಾನತೆಯಿಂದ ಕೂಡಿದ್ದು ಶಿಕ್ಷಣ ವು ಮೇಲ್ವರ್ಗದವರ ಸ್ವತ್ತಾಗಿದೆ. ಶೇ. 70 ರಷ್ಟು ಬಡತನ ರೇಖೆಗಿಂತ ಕೆಳಗಿದ್ದಾರೆ. ವಯಸ್ಕರ ಶಿಕ್ಷಣಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಬೇಕಾಗಿದೆ. ನಾವು ಶಿಕ್ಷಣಕ್ಕಾಗಿ ಎಷ್ಟು ಹಣ ಖರ್ಚು ಮಾಡಿದರೂ ಅದು ದುರ್ಬಲ ಜನರಿಗೆ ಶಿಕ್ಷಣ ಕೊಡುವಲ್ಲಿ ವಿಫಲವಾಗಿದೆ ಎಂದು ಹೇಳಿದರು. ಭಾರತದಲ್ಲಿ ವೈದ್ಯಕೀಯ ಶಿಕ್ಷಣ ಪಾಶ್ಚಾತ್ಯೀಕರಣಗೊಂಡಿದೆ. ಇದು ತುಂಬಾ ವೆಚ್ಚದಾಯಕವಾಗಿದ್ದು ಭಾರತದ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗೆ ಸರಿಹೊಂದುತ್ತಿಲ್ಲ. ಆದರೆ ಈ ದಿಸೆಯಲ್ಲಿ ಚೀನಾ ದೇಶ ದೇಶೀಯ ವೈದ್ಯಕೀಯ ಶಿಕ್ಷಣ ಪದ್ಧತಿಯನ್ನು ನೀಡುವಲ್ಲಿ ಮುಂಚೂಣಿಯಲ್ಲಿದೆ.

ನಮ್ಮ ದೇಶದಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಿರುವ ಪಠ್ಯಕ್ರಮ ತತ್ವ, ಆದರ್ಶದ ಮೇಲೆ ರಚನೆಯಾಗಿಲ್ಲ. ಅದಕ್ಕಾಗಿ ಸಾಕಷ್ಟು ಹಣ ಖರ್ಚು ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಇತಿಹಾಸ ಪುಸ್ತಕಗಳನ್ನು ಓದಿದಾಗ ಗೊಂದಲ ಉಂಟಾಗುತ್ತದೆ. ಆದ್ದರಿಂದ ರಾಷ್ಟ್ರೀಯ ಮಟ್ಟದಲ್ಲಿ ಒಂದೇ ರೀತಿಯ ಸಮಾಜವಾದಿ ತತ್ವಗಳನ್ನು ಒಳಗೊಂಡ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ಬರಬೇಕೆಂದು ಆಗ್ರಹಿಸಿದರು. ಅತ್ಯುತ್ತಮ ಅಂಶಗಳನ್ನು ಒಳಗೊಂಡಿರುವ ಕೊಠಾರಿ ಆಯೋಗದ ಶಿಫಾರಸ್ಸುಗಳನ್ನು ಒಪ್ಪಿಕೊಳ್ಳಬೇಕು. ಅದಕ್ಕಾಗಿ ಸಾಕಷ್ಟು ಹಣ ಖರ್ಚು ಮಾಡಲಾಗಿದೆ ಎಂದು ವಿಧಾನಪರಿಷತ್‌ನಲ್ಲಿ ನಜೀರ್‌ಸಾಬ್ ಅವರು ಚರ್ಚಿಸಿದ್ದಾರೆ.[8]

ಭೂಸುಧಾರಣೆ:-

ಅಬ್ದುಲ್ ನಜೀರ್‌ಸಾಬ್‌ರವರು ವಿಧಾನ ಪರಿಷತ್‌ನಲ್ಲಿ ಭೂಸುಧಾರಣೆಗೆ ಸಂಬಂಧಪಟ್ಟಂತೆ ತಮ್ಮ ಅಭಿಪ್ರಾಯವನ್ನು ಮಂಡಿಸಿದ್ದಾರೆ. ಭೂಸುಧಾರಣೆಗೆ ಸಂಬಂಧಿಸಿದಂತೆ 38ನೇ ತಿದ್ದುಪಡಿಯನ್ನು ತಂದ ಸಂದರ್ಭದಲ್ಲಿ ಆ ತಿದ್ದುಪಡಿಯ ಆಗುಹೋಗುಗಳನ್ನು ಕುರಿತ ಚರ್ಚೆಯಲ್ಲಿ ಶ್ರೀ ನಜೀರ್‌ಸಾಬ್‌ರವರು ಕೃಷಿ ಕಾರ್ಮಿಕರು, ಕೈಗಾರಿಕಾ ಕಾರ್ಮಿಕರಿಗೆ ಅವರು ವಾಸವಾಗಿರುವ ಜಾಗವನ್ನು ಅವರಿಗೇ ಕೊಡಬೇಕೆಂಬ ನಿಯಮವಿದೆ. ಜೊತೆಗೆ ಈ ನಿಯಮದಲ್ಲಿ ಕೆಲವು ಅಂಶಗಳು ಭೂಮಾಲೀಕರ ಪರವಾಗಿವೆ. ಆದ್ದರಿಂದ ಇದನ್ನು ತೆಗೆಯಬೇಕೆಂದು ಹೇಳಿದರು. ಈ ರೀತಿಯ ತೀರ್ಮಾನದಿಂದ ಜನರಲ್ಲಿ ನ್ಯಾಯಾಧಿಕರಣದ ಮೇಲೆ ನಂಬಿಕೆ ಹೋಗುತ್ತದೆಂದು ತಿಳಿಸಿದರು. ಆಗ ಶ್ರೀ ಕೆ.ಹೆಚ್.ರಂಗನಾಥ್‌ರವರು ನಿಯಮ ಬೇಡವಾ? ಎಂದಾಗ ನಜೀರ್‌ಸಾಬ್‌ರವರು ಇದರಲ್ಲಿ ವಾಗ್ವಾದ ಇರಕೂಡದು, ಎಲ್ಲರೂ ಒಗ್ಗಟ್ಟಿನ ತೀರ್ಮಾನ ತೆಗೆದುಕೊಳ್ಳಬೇಕು ಎಂದರು.

ಈಗ ಸರ್ಕಾರದವರು ತಂದಿರುವ ತಿದ್ದುಪಡಿಯಿಂದ ನಿಜವಾದ ಟೆನೆಂಟ್ಸ್ ಅವಕಾಶವಾಗದೆ ಬೋಗಸ್ ಟೆನೆಂಟ್‌ಗಳಿಗೆ ಅವಕಾಶವಾಗುತ್ತಿದೆ. ರಾಜಕೀಯ ದ್ವೇಷದಿಂದ, ವೈಯುಕ್ತಿಕ ದ್ವೇಷ, ಮನೆಜಗಳದಿಂದ ಡಿಕ್ಲರೇಷನ್ ಕೊಟ್ಟಿರುವ ಕೇಸುಗಳು ಹೆಚ್ಚಾಗಿವೆ. ಒಂದು ಎಕರೆ ಜಮೀನು ವ್ಯವಸಾಯ ಮಾಡುವ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕು ಸಾಲ ನೀಡುತ್ತದೆ. ಆ ಸಾಲಕ್ಕೆ ವಾರ್ಷಿಕ ಶೇ.11ರ ಬಡ್ಡಿದರ ವಿಧಿಸಲಾಗುತ್ತದೆ. ಸಾಲದ ಹಣ ಮತ್ತು ಬಡ್ಡಿ ಹಣ ಎಲ್ಲ ಸೇರಿ ವಾರ್ಷಿಕವಾಗಿ 600ರಿಂದ 700 ರೂ.ಗಳವರೆಗೆ ಕಟ್ಟಬೇಕಾಗುತ್ತದೆ. ಇದರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತದೆ. ಆದ್ದರಿಂದ ಸರ್ಕಾರ ಐದು ಎಕರೆ ಭೂಮಿ ಇರುವ ರೈತರಿಗೆ ಬಡ್ಡಿಯನ್ನು ವಜಾ ಮಾಡಬೇಕು. ಇದರಿಂದ 100 ರೂ. ಬಡ್ಡಿಯನ್ನು ಕೊಡುತ್ತಿದ್ದ ರೈತ 600-700 ಕೊಡಬೇಕಾಗುತ್ತದೆ. ಆದ್ದರಿಂದ ಸರ್ಕಾರ ಸೂಕ್ತವಾಗಿ ಚರ್ಚೆ ಮಾಡಬೇಕು. ರಾಜ್ಯದಲ್ಲಿ ಆರ್ಥಿಕ ದುರ್ಬಲರೇ ಅಧಿಕವಾಗಿದ್ದಾರೆ. ಆದ್ದರಿಂದ ಬಡ್ಡಿಯ ಬಗ್ಗೆ ಪುನರ್‌ಪರಿಶೀಲನೆ ನಡೆಯಬೇಕು ಎಂದರು. ಒಂದು ಕಾಯಿದೆಯಿಂದ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲ. ಇದರಲ್ಲಿ ಮಾರ್ಕ್ಸ್‌ವಾದವು ಇದೆ. ಮಾರ್ಕ್ಸ್‌ವಾದದ ವಾಸ್ತವಾಂಶದ ದೃಷ್ಟಿಯಿಂದ ಡಾ. ಅಂಬೇಡ್ಕರ್ ಒಂದು ಸಲಹೆ ಕೊಟ್ಟಿದ್ದಾರೆ. "Collective farming is the only solution. He

has suggested that there can be no alternative for the development of agriculture sector until collective farming is adopted. That was his firm belief". ಈ ದೃಷ್ಟಿಯಿಂದ ನಾವು ಭೂಸಮಸ್ಯೆಯನ್ನು ವಿಚಾರ ಮಾಡುವಾಗ ನನ್ನ ಸಲಹೆ ಎಂದರೆ ಮಾನವನ ಭವಿಷ್ಯದಲ್ಲಿ ಈ ಭೂಸಮಸ್ಯೆಯನ್ನು ಹೋಗಲಾಡಿಸಲು ಹಂತಹಂತವಾಗಿ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕೆಂದರು.

ಭೂಸುಧಾರಣೆ ತಂದಾಗ ಅವರಿಂದ ಮತ್ತು ಜಮೀನ್ದಾರರಿಗೂ ತೊಂದರೆಯಾಗಬಾರದು, ಭೂಸಮಸ್ಯೆ ಉಂಟಾದಾಗ ಟ್ರಿಬ್ಯುನಲ್‌ನವರು ಕೇಸು ತೀರ್ಮಾನ ಮಾಡಿರುವ ಉದಾಹರಣೆ ಹೇಳುವುದಾದರೆ - ಒಂದು ಊರಿನಲ್ಲಿ ಒಬ್ಬ ಮನುಷ್ಯನ ಹೆಂಡತಿ ಜಮೀನಿನಲ್ಲಿಯೇ ಸತ್ತು ಬಿದ್ದಿದ್ದರೂ ಅವನು ಆ ಜಮೀನಿನಲ್ಲಿಯೇ ಕುಳಿತುಕೊಂಡಿದ್ದ. ಇದೇ ಗ್ರಾಮದವರೇ ಆ ಜಮೀನನ್ನು ಅವನು ಕೂಲಿಗೆ ಮಾಡುತ್ತಿದ್ದ ಎಂದು ಹೇಳಿದರೂ ಟ್ರಿಬ್ಯುನಲ್‌ನವರು ಆತನಿಗೆ ಜಮೀನು ಮಂಜೂರು ಮಾಡಲಿಲ್ಲ. ಅಂತಹ ಸಂದರ್ಭದಲ್ಲಿ (ಅಬ್ದುಲ್ ನಜೀರ್‌ಸಾಬ್‌ರವರು) ನಾನು ಸತ್ಯಾಗ್ರಹ ಮಾಡುತ್ತೇನೆ ಎಂದು ಹೇಳಿ ಜಮೀನು ಮಂಜೂರು ಮಾಡಿಸಿದರು. ಆದರೆ ಜಮೀನ್ದಾರರು ಬೇರೆ ಮಾರ್ಗದಲ್ಲಿ ಜಮೀನು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ತಿಳಿಯಿತು. ತಕ್ಷಣ ಚಳುವಳಿ ಮಾಡುತ್ತೇನೆಂದು ಹೇಳಿದೆ. ಈ ರೀತಯ ಪರಿಸ್ಥಿತಿ ಉಂಟಾಯಿತು. ಆದ್ದರಿಂದ ಬಡವರಿಗೆ ರಕ್ಷಣೆ ನೀಡುವ ಕಾನೂನುಗಳನ್ನು ಜಾರಿಗೆ ಬರಬೇಕು ಹಾಗೂ ಜನರು ಟ್ರಿಬ್ಯುನಲ್‌ಗಳ ಬಗ್ಗೆ ನಂಬಿಕೆ ಇಟ್ಟುಕೊಳ್ಳುವಂತಾಗಬೇಕೆಂದು ಪ್ರತಿಪಾದಿಸಿದರು.[9]

ಭೂ ಸುಧಾರಣೆಯ ವಿಚಾರದಲ್ಲಿ ಹೇಳುವುದಾದರೆ, ನಾವು ಸಾಕಷ್ಟು ಪ್ರಗತಿಪರವಾದ ಕಾರ್ಯಕ್ರಮಗಳನ್ನು ಮಾಡಿದ್ದೇವೆಂದು ಹಿಂದಿನ ಸರ್ಕಾರದವರು ಹೇಳುತ್ತಿದ್ದರು. ಈ ಒಂದು ಭೂ ಸುಧಾರಣೆಯಿಂದ ನಮ್ಮ ದೇಶದಲ್ಲಿರುವ ಬಡವರ ಸಮಸ್ಯೆಗಳನ್ನೆಲ್ಲಾ ಬಗೆಹರಿಸಿ ಸಮಾಜವಾದದ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದಾರೆಂದು ನಾನಂತೂ ಹೇಳುವುದಿಲ್ಲ. ಆಗಲೇ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಒಂದಾದ ಜಪಾನ್‌ನಲ್ಲೂ ನಿರಂಕುಶಾಧಿಕಾರಿ ಸಾಹಿ ಈರಾನಿನಲ್ಲೂ ಈ ರೀತಿಯ ಪ್ರಗತಿಪರವಾದ ಭೂ ಸುಧಾರಣೆಯನ್ನು ನೋಡಿದ್ದೇವೆ. ಉಳುವ ಮನೆ ಭೂಮಿಯ ಒಡೆಯಲಾಗಬೇಕು ಎನ್ನುವ ಸಿದ್ಧಾಂತ ಏನಿದೆ ಅದು ಈ ಸುಧಾರಣೆಯಲ್ಲಿ ವಿಫಲವಾಗಿದೆ. ಇದನ್ನು ನಾವು ತೀವ್ರವಾಗಿ ಜಾರಿಗೆ ತರಬೇಕಾದರೆ ಮತ್ತೆ ಹೆಚ್ಚುವರಿ ಭೂಮಿ ಬಡವರಿಗೆ ಸಿಕ್ಕಬೇಕಾದರೆ, ಟೆನ್ಸಿಯಲ್ಲಿರತಕ್ಕಂತಹ ನ್ಯೂನತೆಗಳು ಹೋಗಬೇಕು. 54 ಎಕರೆಯಂತೆ ಒಂದು ಸಂಸಾರದವರು ಎರಡು ಯೂನಿಟ್ಟುಗಳನ್ನು ಇಟ್ಟುಕೊಳ್ಳತಕ್ಕಂತಹದ್ದು ಎಂಬುದಾಗಿ ಹೇಳಿರುವುದರಿಂದ ದೊಡ್ಡ ದೊಡ್ಡ ಶ್ರೀಮಂತರೇ ಇಂತಹ ಸಮಯವನ್ನು ನೋಡಿಕೊಂಡು ದುರುಪಯೋಗ ಮಾಡಿಕೊಳ್ಳುತ್ತಾರೆ. ಈ ಬಗ್ಗೆ ಹಿಂದಿನ ಕಂದಾಯ ಸಚಿವರಾದ ಶ್ರೀಮಾನ್ ಬಸವಲಿಂಗಪ್ಪನವರು ಒಂದು ಉತ್ತಮ ಸಲಹೆಯನ್ನು ಹೇಳುತ್ತಿದ್ದರು. ಅದನ್ನು ನಮ್ಮ ಸರ್ಕಾರ ಮಾಡಬೇಕೆಂದು ಸಲಹೆ ಕೊಡಬಯಸುತ್ತೇನೆ. ಅದೇನೆಂದರೆ, 10 ಎಕರೆಗಿಂತ ಮೇಲ್ಪಟ್ಟು

ಜಮೀನು ಇದ್ದರೆ ಅದನ್ನು ಇಲ್ಲದವರಿಗೆ ಬಿಟ್ಟುಕೊಡಬೇಕು. ಆ ರೀತಿ ಹೆಚ್ಚುವರಿಯಿಂದ ಬರತಕ್ಕಂತಹ ಭೂಮಿಯನ್ನು ನೂರಾರು ಜನರು ಜಮೀನು ಇಲ್ಲದೇ ಏನು ಇದ್ದಾರೆ ಅವರಿಗೆ ಒದಗಿಸಿಕೊಡತಕ್ಕಂತಹದ್ದು ಅತ್ಯಂತ ಅವಶ್ಯಕ ಇದೆ. ಜೊತೆಗೆ ಈ ಒಂದು ಸಲಹೆಯನ್ನು ನಮ್ಮ ಸರ್ಕಾರ ಈಡೇರಿಸುವುದಕ್ಕೆ ಪ್ರಯತ್ನ ಮಾಡುತ್ತದೆಂದು ನಾನು ಅಂದುಕೊಂಡಿದ್ದೇನೆ. ಈ ದೇಶದಲ್ಲಿ ಹೆಚ್ಚುವರಿ ಭೂಮಿಯ ಅಂತರದ ಪ್ರಮಾಣವನ್ನು ಕಡಿಮೆಗೊಳಿಸಬೇಕು. 5 ಜನರಿರುವಂತಹ ಒಂದು ಸಂಸಾರದವರು 100 ಎಕರೆ ಖುಷ್ಕಿ, ಮತ್ತೆ 15 ಎಕರೆ ತರಿ, ಇದಕ್ಕೆ ಮೀರಿದಂತೆ ಜಮೀನು ಇರಬಾರದು ಎಂಬುದಾಗಿ ಒಂದು ಪ್ರಗತಿಪರವಾದ ಕಾರ್ಯಕ್ರಮವಾಗುತ್ತದೆ. ಇದನ್ನು ಸರ್ಕಾರ ಉಪಯೋಗಮಾಡಿಕೊಳ್ಳಬೇಕೆಂದು ಸಲಹೆ ಕೊಡುತ್ತೇನೆ. ಭೂಸುಧಾರಣೆಯ ಬಗ್ಗೆ ಮಾತನಾಡುವವರೆಲ್ಲಾ ಭೂಮಿಯ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ತಮಗೆ ಗೊತ್ತಿರಬಹುದು 1960-61 ರಲ್ಲಿ ಫೋರ್ಡ್ ಕಮಿಟಿ ಎಂಬುದಾಗಿ ಒಂದು ಸಮಿತಿಯನ್ನು ಮಾಡಿದ್ದರು. ಭಾರತದಲ್ಲಿ ಕೇವಲ ಮನುಷ್ಯ ಶಕ್ತಿಯಿಂದ ಭೂಮಿಯನ್ನು ವ್ಯವಸಾಯ ಮಾಡುವುದಕ್ಕಾಗುವುದಿಲ್ಲ ಎಂಬುದಾಗಿ ವರದಿಯನ್ನು ಕೊಟ್ಟಿದ್ದಾರೆ. ಈ ದೃಷ್ಟಿಯಿಂದ ಹೇಳುವುದಾದರೆ, ಸಹಕಾರ ಬೇಸಾಯ ಮತ್ತು ಸಾಮೂಹಿಕ ಬೇಸಾಯ ಈ ಪದ್ಧತಿಗಳನ್ನು ಜಾರಿಗೆ ತಂದರೆ ಇದು ಸಾಧ್ಯವಾದೀತು ಎನ್ನುವ ಅಭಿಪ್ರಾಯವನ್ನು ಆ ಸಮಿತಿಯವರು ಪಟ್ಟಿದ್ದಾರೆ. ಚೈನಾ ದೇಶದಲ್ಲಿ 130 ಮಿಲಿಯನ್ ಟನ್ ಆಹಾರವನ್ನು ಬೆಳೆಯುತ್ತಾರೆ. ಚೈನಾದಲ್ಲೂ ಕೂಡ ನಮ್ಮಲ್ಲಿರುವಂತೆ ಭೂಮಿಯ ಸಮಸ್ಯೆ ಇದೆ. ಅಲ್ಲೂ ಕೂಡ ಒಬ್ಬರಿಗೆ ಒಂದು ಎಕರೆ ಒಂದೂಕಾಲು ಎಕರೆ ಭೂಮಿ ಇದೆ ಎಂದು ಕಾಣುತ್ತದೆ. ಅವರು 280 ಲಕ್ಷ ಮಿಲಿಯನ್ ಟನ್ ಆಹಾರವನ್ನು ಉತ್ಪಾದನೆ ಮಾಡುತ್ತಿದ್ದಾರೆ. ಅವರು ಅಷ್ಟನ್ನು ಬೆಳೆಯುವುದಕ್ಕೆ ಸಾಧ್ಯವಿರುವಾಗ ನಮ್ಮಲ್ಲಿ ಅಷ್ಟು ಬೆಳೆ ಬೆಳೆಯಲು ಸಾಧ್ಯವಾಗುವುದಿಲ್ಲ ಎನ್ನುವುದನ್ನು ನಾವು ಒಪ್ಪುವುದಿಲ್ಲ. ಅವರು ಇದರಲ್ಲಿ ಮನುಷ್ಯನ ಶಕ್ತಿಯನ್ನು ಉಪಯೋಗಿಸಿದ್ದಾರೆ. ಆ ರೀತಿ ಮನುಷ್ಯನ ಶಕ್ತಿಯನ್ನು ಉಪಯೋಗಿಸುವುದರಲ್ಲೂ ಕೂಡ ಒಂದು ಕ್ರಮ ಬದ್ಧವಾಗಿ ಹಾಗೂ ಯೋಜನಾ ಬದ್ಧವಾಗಿ ಆಧುನಿಕ ಸಂಪ್ರದಾಯಿಕ ತಂತ್ರಗಳನ್ನು ಇದರಲ್ಲಿ ಒಳಪಡಿಸಿ ತಮ್ಮ ವ್ಯವಸಾಯ ಪದ್ಧತಿಯನ್ನು ಸುಧಾರಣೆ ಮಾಡಿದ್ದಾರೆ. ಇದು ನಮ್ಮಲ್ಲೂ ಆಗಬೇಕಾದರೆ ಮೊದಲ ಹಂತದಲ್ಲಿ ಸಹಕಾರಿ ಬೇಸಾಯ ಮತ್ತು ಸಾಮೂಹಿಕ ಬೇಸಾಯದಿಂದ ಈ ದೇಶದ ಸಮಸ್ಯೆ ಬಗೆಹರಿಯಬಹುದು. ಇದನ್ನು ರಾಷ್ಟ್ರ ಮಟ್ಟದಲ್ಲೂ ಹಾಗೂ ರಾಜ್ಯ ಮಟ್ಟದಲ್ಲೂ ವಿಚಾರಶೀಲವಂತರು ವಿಚಾರ ಮಾಡಬೇಕಾಗುತ್ತದೆ. 5ನೇ ಮಹಾ ಯೋಜನೆಯ ಕರಡಿನಲ್ಲಿ ಒಂದು ಕಡೆ ಹೇಳಿದ್ದಾರೆಂದರೆ, Poverty is so much it is only Rs. 65 per capita per month ಎಂದು, ಸುಮಾರು ಈ ದೇಶದ ಉತ್ಪಾದನೆ ಎಷ್ಟಿದೆ ಎಂದರೆ 6ನೇ ಯೋಜನೆಯ ಕರಡಿನಲ್ಲಿ ಹೇಳಿದ್ದಾರೆ. ವರ್ಷಗಳಾವುವು. ಆದರೂ ಕೂಡ ಈ ದೇಶದ ಅರ್ಧದಷ್ಟು ಜನ ಹೊಟ್ಟೆಗೆ ಅನ್ನ ಇಲ್ಲದೆ ಕೆಳಗಡೆ ಇದ್ದಾರೆ. ನಾವು ಇದುವರೆಗೂ ಮಾಡಿರತಕ್ಕಂತಹ ಯೋಜನೆಗಳಿಂದ ಇದು ಸಾಧ್ಯವಾಗಿಲ್ಲ 30 ವರ್ಷಗಳಿಂದ ಸುಧಾರಣೆಯಾಯಿತಾ? ಅದು ಸಾಧ್ಯವಿದ್ದರೆ ಇಷ್ಟು ಬಡತನ ಇರುವುದಕ್ಕೆ ಕಾರಣ ಏನು? ಈ ದೇಶದ ಸ್ವಾತಂತ್ರ್ಯವನ್ನು ತಂದು ಕೊಟ್ಟಂತಹ ಅವರೂ ಕೂಡ ಈ ದೇಶದ ಬಡತನ ಹೋಗಬೇಕು, ಈ ರಾಷ್ಟ್ರ ಪ್ರಗತಿದಾಯಕವಾಗಿ

ಮುಂದುವರಿಯಬೇಕೆಂದು ಅನೇಕ ಯೋಜನೆಗಳನ್ನು ಹಾಕಿಕೊಟ್ಟಿದ್ದಾರೆ. ಅವುಗಳ ಅಂಕಿ ಅಂಶಗಳನ್ನು ನೋಡಿದರೆ ಘೋರ ಬಡತನ, ಕಡು ಬಡತನ ಆಗ ಈ ನಾಡಿನಲ್ಲಿತ್ತು ಎಂಬುದು ಸಮಾಜವನ್ನು ಸೃಷ್ಟಿ ಮಾಡುವುದಕ್ಕೆ ಪ್ರಯತ್ನ ಪಟ್ಟರೋ ಅದರಲ್ಲಿ ದೋಷ ಇದೆ ಆ ಒಂದು ಸಿದ್ಧಾಂತವನ್ನು ನಾವು ಬದಲಾಯಿಸಬೇಕಾಗಿದೆ.

ಪಂಚಾಯತ್ ಚುನಾವಣೆ ಮುಂದೂಡಿಕೆಗೆ ವಿರೋಧ :-

1978ರ ಡಿಸೆಂಬರ್ ತಿಂಗಳಲ್ಲಿ ಪಂಚಾಯತ್ ಚುನಾವಣೆಗಳು ನಡೆಯುತ್ತವೆ ಎಂದು ಸರ್ಕಾರ ಘೋಷಿಸಿತ್ತು. ಆದರೆ ಕೆಲವೇ ದಿನಗಳಲ್ಲಿ ಡಿಸೆಂಬರ್ ತಿಂಗಳಲ್ಲಿ ರೈತರು ತಾವು ಬೆಳೆದ ಬೆಳೆಯನ್ನು ಒಕ್ಕಣೆ ಮಾಡುವುದರಿಂದ ಇದು ಚುನಾವಣೆಗೆ ಒಳ್ಳೆಯ ಸಮಯವಲ್ಲ ಎಂದು ತೀರ್ಮಾನಿಸಿ ಚುನಾವಣೆಯನ್ನು ಮುಂದೂಡಿತು. ಪಂಚಾಯತ್ ಚುನಾವಣೆಯನ್ನು ಮುಂದೂಡಿದ ಮಸೂದೆಯನ್ನು ಅಬ್ದುಲ್ ನಜೀರ್‌ಸಾಬ್ ವಿರೋಧಿಸಿದರು ನೀವು ಸರ್ಕಾರದವರು ಡಿಸೆಂಬರ್ ಕಾಲ ರೈತರು ಒಕ್ಕಣೆ ಮಾಡುವ ಕಾಲ. ರೈತರಿಗೆ ಕೆಲಸ ಇದೆ ಎಂದು ಚುನಾವಣೆ ಮುಂದೂಡಿದ್ದೀರಿ, ಜೂನ್ ತಿಂಗಳಲ್ಲಿ ಮತ್ತೆ ಬಿತ್ತನೆ ಕಾರ್ಯಗಳು ಪ್ರಾರಂಭವಾಗುತ್ತವೆ. ಆಗ ಮತ್ತೆ ಮುಂದೂಡಬೇಕಲ್ಲವೆ? ಆದ್ದರಿಂದ ಈ ಮಸೂದೆಯನ್ನು ವಿರೋಧಿಸುತ್ತೇನೆಂದು ಘರ್ಜಿಸಿದರು.

ಈಗ ಅಸ್ತಿತ್ವದಲ್ಲಿರುವ ಪಂಚಾಯಿತಿಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಈಗಿರುವ ಪಂಚಾಯ್ತಿ ಕಾಯ್ದೆ ದುರ್ಬಲವಾಗಿದೆ. ಈ ಕಾಯ್ದೆಯಿಂದ ಗ್ರಾಮ ಪಂಚಾಯ್ತಿಗೆ ಯಾವುದೇ ಸಹಾಯ ದೊರಕಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಕೊಳಚೆಯಿಂದ ಶುಚಿತ್ವ ಮಾಯವಾಗಿದೆ. ಮಾತೆತ್ತಿದರೆ ನಮ್ಮದು "ರಾಮರಾಜ್ಯ" ಎಂದು ಹೇಳುತ್ತೀರಿ. ಬಾಪೂಜಿಯವರ ಗ್ರಾಮಸ್ವರಾಜ್ಯ ಅಸ್ತಿತ್ವಕ್ಕೆ ಬರಬೇಕಾದರೆ ದೇಶದ ಪ್ರತಿಯೊಬ್ಬನೂ ಉತ್ಪಾದಕನಾಗಬೇಕು, ಬಳಸುವಂತಹವನಾಗಬೇಕು ಹಾಗೂ ಸಂಪನ್ಮೂಲಗಳನ್ನು ಉಳಿಸುವಂತಹವನಾಗಬೇಕು. ಇದು ಗಾಂಧೀಜಿಯವರ ಕನಸಾಗಿತ್ತು. ಆದರೆ ಇಂದು ಗ್ರಾಮಾಭಿವೃದ್ಧಿ ಎಂದರೆ ಒಂದು ಬಾವಿ ತೋಡಿಸುವುದು, ಶಾಲೆಗಳನ್ನು, ಮನೆಗಳನ್ನು ಕಟ್ಟಿಸುವುದು ಎಂದು ತಿಳಿಯಲಾಗಿದೆ. ಇದರಿಂದ ಗ್ರಾಮಾಭಿವೃದ್ಧಿ ಸಾಧ್ಯವೇ ? ಇಂದಿನ ಪಂಚಾಯಿತಿಗಳಿಂದ ಬಾಪೂಜಿಯವರ ಕಲ್ಪನಾರಾಜ್ಯ ಅಸ್ತಿತ್ವಕ್ಕೆ ಬರಲು ಸಾಧ್ಯವಿಲ್ಲ.

ಸರ್ಕಾರದವರು ಕೇವಲ ಚುನಾವಣೆಗಳನ್ನು ಮಾಡುವುದು ಮತ್ತು ಪಂಚಾಯ್ತಿಗಳನ್ನು ರಚನೆ ಮಾಡಿದರೆ ಸಾಲದು. ನಮ್ಮಲ್ಲಿ ಕೇವಲ ಸಾವಿರ ರೂಪಾಯಿ ಆದಾಯವಿರುವ ಪಂಚಾಯ್ತಿಗಳಿವೆ. ಅವುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿಲ್ಲ. ಗುಂಡ್ಲುಪೇಟೆಯ 122 ಪಂಚಾಯತಿಗಳಲ್ಲಿ 92ಕ್ಕೆ ವಿದ್ಯುಚ್ಛಕ್ತಿ ಇಲ್ಲದಂತಾಗಿದೆ. ಪರಿಸ್ಥಿತಿ ತುಂಬಾ ಹದಗೆಟ್ಟಿದ್ದು ಸರ್ಕಾರವೇ ಪಂಚಾಯಿತಿಗಳ ವಿದ್ಯುಚ್ಛಕ್ತಿ ಬಿಲ್ಲನ್ನು ಪಾವತಿಸಬೇಕು. ಯಾವುದೇ ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿ ಚರಂಡಿ ವ್ಯವಸ್ಥೆ ಇಲ್ಲ. ಉದಾಹರಣೆಗೆ ಗುಂಡ್ಲುಪೇಟೆ ಅಭಿವೃದ್ಧಿ ಮಂಡಳಿಯವರು 9 ವರ್ಷಗಳಿಂದ ಕೇವಲ 9 ಸಾವಿರ ರೂಪಾಯಿ ಖರ್ಚು

ಮಾಡಿದ್ದಾರೆ. ಅದು ಪ್ರಭಾವಶಾಲಿಗಳು ಇರುವ ಊರಿನಲ್ಲಿ ಮಾತ್ರ ಕೆಲಸವಾಗಿದೆ. ಪಂಚಾಯತಿಯಲ್ಲಿ ಅಭಿವೃದ್ಧಿ ಅಧಿಕಾರಿಗಳೇ ಇರುವುದಿಲ್ಲ. ಪಂಚಾಯ್ತಿ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳು ಪ್ರಬಲರಾಗಿದ್ದಾರೆ. ಅವರ ಮನೆಗಳೇ ಪಂಚಾಯತಿಗಳಾಗಿರುತ್ತವೆ. ಇದನ್ನು ಗಮನಿಸಿ ಸೂಕ್ತ ಪರಿಹಾರ ಕಂಡುಕೊಳ್ಳಬೇಕು ಎಂದು ಆಗ್ರಹಿಸಿದರು.

ದೊಡ್ಡ ದೊಡ್ಡ ಮನೆಗಳು, ದೊಡ್ಡವರ ಮನೆಗಳಿಗೆ ಹೆಚ್ಚಿನ ಕಂದಾಯ ವಸೂಲಿ ಮಾಡುವುದನ್ನು ಬಿಟ್ಟು ಸಣ್ಣಪುಟ್ಟ ಕೂಲಿಕಾರರಿಗೆ, ಹಳ್ಳಿಗಳ ಜನಗಳ ಮೇಲೆ ಕಂದಾಯ ಹಾಕುತ್ತೀರಿ.ಅವುಗಳನ್ನು ವಜಾ ಮಾಡಿ ಎಂದು ಸಲಹೆ ಇತ್ತರು.

ಗ್ರಾಮ ಪಂಚಾಯಿತಿಗಳಲ್ಲಿ ಜನರು ಕಟ್ಟುವ ಕಂದಾಯಕ್ಕೆ ರಸೀತಿ ನೀಡಲಾಗಿಲ್ಲ. ಮುಗ್ಧ ಜನರಿಗೆ ರಸೀದಿ ಕೇಳುವುದಕ್ಕೆ ಭಯ. ಜನರಿಂದ ವಸೂಲಾಗಿರುವ ಕಂದಾಯವನ್ನು ಯಾವುದಕ್ಕೆ ಬಳಸಿದ್ದಾರೆನ್ನುವ ಮಾಹಿತಿ ಇದೆಯಾ? ಈ ಬಗ್ಗೆ ಸರ್ಕಾರದ ವೈಫಲ್ಯ ಎದ್ದು ಕಾಣುತ್ತಿದೆ ಎಂದು ಹೇಳಿ ಸರ್ಕಾರಕ್ಕೆ ಜಾಗೃತಿ ಮೂಡಿಸಿದರು. ಈ ರೀತಿ ಸರ್ಕಾರದವರು ನಿರ್ಲಕ್ಷ್ಯ ವಹಿಸಿದರೆ ಗ್ರಾಮ ಪಂಚಾಯ್ತಿಗಳನ್ನು ಯಾವುದೇ ಕಾರಣಕ್ಕೂ ಅಭಿವೃದ್ಧಿ ಪಡಿಸಲು ಸಾಧ್ಯವಿಲ್ಲವೆಂದು ತಿಳಿಸಿದರು. ಗ್ರಾಮೀಣ ಪ್ರದೇಶದ ಜನರಿಗೆ ಪ್ರಮುಖವಾಗಿ ಕಂದಾಯ ವಜಾ ಮಾಡುವುದು, ಎರಡನೆಯದಾಗಿ ಸಮರ್ಪಕ ವಿದ್ಯುಚ್ಛಕ್ತಿ ಪೂರೈಸುವುದು, ಮೂರನೆಯದಾಗಿ ಹಳ್ಳಿಯ ಜನರಿಗೆ ಶುದ್ಧ ಕುಡಿಯುವ ನೀರನ್ನು ಪೂರೈಸುವುದು. ಅಗ ಮಾತ್ರ ಗ್ರಾ ಮ ಪಂಚಾಯಿತಿಗಳು ಪ್ರಬಲಗೊಳ್ಳುತ್ತವೆ ಎಂದು ಪ್ರತಿಪಾದಿಸುತ್ತಾ ನನ್ನ ಈ ಮೂರು ಸಲಹೆಗಳನ್ನು ಪರಿಶೀಲನೆ ಮಾಡಬೇಕೆಂದು ಹೇಳಿ ಪಂಚಾಯತ್ ಚುನಾವಣೆ ಮುಂದೂಡಿಕೆಯನ್ನು ವಿರೋಧಿಸಿದರು.[10]

ಆಡಳಿತದಲ್ಲಿ ಕನ್ನಡ ಭಾಷೆಯ ಬಳಕೆಗೆ ಒತ್ತಾಯ

ಶ್ರೀಯುತ ನಜೀರ್ ಸಾಬ್ ಪಕ್ಕದ ತಮಿಳುನಾಡಿನಲ್ಲಿ ಜನಿಸಿದರೂ ಅವರಿಗೆ ಕನ್ನಡದ ಮೇಲೆ ಅಪಾರ ವ್ಯಾಮೋಹವಿತ್ತು. ಶಾಮರಾಯರ ಶಿಷ್ಯರಾಗಿದ್ದ ಇವರು ರಾಮರಾಯರೊಂದಿಗೆ ಉತ್ತಮಬಾಂಧವ್ಯ ಹೊಂದಿದ್ದರು. ಜೊತೆಗೆ ಪ್ರತಿಭಾವಂತ ಸಾಹಿತಿಗಳಾಗಿದ್ದ ಅ.ನ.ಕೃ., ನಿರಂಜನ, ತ.ರಾ.ಸು. ಮುಂತಾದವರೊಂದಿಗೆ ಸಖ್ಯ ಬೆಳೆಸಿ ಕನ್ನಡ ಸಾಹಿತ್ಯದಲ್ಲಿ ಅಭಿರುಚಿ ಮೂಡಿಸಿಕೊಂಡರು.

ಕನ್ನಡ ಮತ್ತು ಸಂಸ್ಕೃತಿ ವಿಷಯದಲ್ಲಿ ನಜೀರ್ ಸಾಬ್‌ರಿಗೆ ವಿಶೇಷ ಕಳಕಳಿ ಇತ್ತು. ಕನ್ನಡದ ಯಾವುದೇ ಸಾಂಸ್ಕೃತಿಕ ಸಮಾರಂಭಕ್ಕೆ ತಪ್ಪದೇ ಹಾಜರಾಗುತ್ತಿದ್ದರು. ಮಹಾತ್ಮಾಗಾಂಧೀಜಿ ಬಗ್ಗೆ ಗೌರವ ಮತ್ತುಕಾಂಗ್ರೆಸ್ ಬಗ್ಗೆ ನಂಬಿಕೆ ಇತ್ತು.

ವಿದ್ಯಾರ್ಥಿದೆಸೆಯಿಂದಲೇ ನಜೀರ್‌ಸಾಬ್‌ರಿಗೆ ಸಾಹಿತ್ಯದಲ್ಲಿ ಅಪಾರವಾದ ಆಸಕ್ತಿ ಇತ್ತು. 1952ರಲ್ಲಿ ಸಾಹಿತ್ಯದಲ್ಲಿ ಅಪಾರವಾದ ಆಸಕ್ತಿ ಇತ್ತು. 1952ರಲ್ಲಿ ಮೈಸೂರಿನಲ್ಲಿ 'ಕಲಾಕ್ಷೇತ್ರ' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಪಿ.ಆರ್.ತಿಪ್ಪೇಸ್ವಾಮಿ, ಹೇಮದಳ ರಾಮದಾಸ ಮತ್ತು ಜೀ.ಶಂ.ಪರಮಶಿವಯ್ಯ ಮುಂತಾದ ಯುವಸಾಹಿತಿಗಳೊಂದಿಗೆ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡರು. ಅಲ್ಲದೆ ಸ್ವತಃ ತಾವೇ

ಲೇಖಕರಾಗಿ ಉರ್ದು ಭಾಷೆಯಿಂದ ಮಂಟೋವಿನ ಸಣ್ಣಕಥೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದರು. ಆದರೆ ಅವು ಪ್ರಕಟವಾಗಲಿಲ್ಲ[11]. ಅಬ್ದುಲ್ ನಜೀರ್ ಸಾಬ್‌ರ ಈ ಕನ್ನಡ ಪ್ರೇಮ ಮುಂದಿನ ದಿನಗಳಲ್ಲಿ ಅವರು ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾದಾಗ ಆಡಳಿತದಲ್ಲಿ ಕನ್ನಡ ಭಾಷೆಯನ್ನು ಜಾರಿಗೆ ತರಬೇಕೆಂದು ಒತ್ತಾಯಿಸಲು ಪ್ರೇರಣೆಯಾಯಿತು.

ಕರ್ನಾಟಕ ಸರ್ಕಾರ 1982ರಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಘೋಷಿಸಲು ಈ ನಿರ್ಧಾರವನ್ನು ಸ್ವಾಗತಿಸಿದ ನಜೀರ್ ಸಾಬ್‌ರು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಘೋಷಿಸಿದ್ದೀರಿ, ಅದಕ್ಕಾಗಿ ಒಂದು ಕನ್ನಡದ ಆಡಳಿತ ಶಬ್ದಕೋಶ ಸಿದ್ಧವಾಗಿದೆ. ಆದರೆ ಆ ಶಬ್ದಕೋಶ ಸಾಮಾನ್ಯ ಜನರಿಗೆ ಅರ್ಥವಾಗುವ ರೀತಿಯಲ್ಲಿ ರಚನೆಯಾಗಬೇಕು.ಕನ್ನಡದಲ್ಲಿಯೇ ಮಸೂದೆ ಮಾಡುವ ಅವಕಾಶವಿದೆ. ಆದರೆ ಪಾರಿಭಾಷಿಕ ಪದಗಳಿಗೆ ಮಾಡಿರುವ ಭಾಷಾಂತರ ಸಾಮಾನ್ಯ ಜನರಿಗೆ ಅರ್ಥವಾಗುವುದಿಲ್ಲ. ಉದಾ: ಆಮದು ರಫ್ತು ಎಂದು ಇದ್ದರೆ ಎಲ್ಲರಿಗೂ ಅರ್ಥವಾಗುತ್ತಿತ್ತು. ಆದರೆ ಅದಕ್ಕೆ ಬದಲಾಗಿ ಆಯಾತ, ನಿರ್ಯಾತ ಎಂದು ಹೇಳಿರುವುದರಿಂದ ಇದು ಯಾರಿಗೂ ಅರ್ಥವಾಗುವುದಿಲ್ಲ. ಆದ್ದರಿಂದ ಸರ್ಕಾರ ಇತ್ತ ಗಮನಹರಿಸಿ ಸೂಕ್ತ ಪರಿಹಾರ ಕಂಡುಹಿಡಿಯಬೇಕಾಗಿದೆ ಎಂದು ಸರ್ಕಾರವನ್ನು ಒತ್ತಾಯ ಪಡಿಸಿದರು.

ಸರ್ಕಾರ ಕನ್ನಡ ಆಡಳಿತ ಭಾಷೆಯಾಗಿದ್ದರೂ 1963ರಿಂದ ಉರ್ದು ಶಾಲೆಗಳಲ್ಲಿ 3ನೇ ತರಗತಿಯಿಂದ ಕನ್ನಡ ಕಲಿಸಬೇಕೆಂದು ಸರ್ಕಾರಿ ಆಜ್ಞೆ ಇದೆ. ಆದರೆ ಸಾವಿರಾರು ಉರ್ದು ಶಾಲೆಗಳಿಗೆ ಕನ್ನಡ ಉಪಾಧ್ಯಾಯರನ್ನೇ ನೇಮಿಸಿಲ್ಲ. ಕೇವಲ ಪುಸ್ತಕದಲ್ಲಿ "ಸಿರಿಗನ್ನಡಂ ಗೆಲ್ಗೆ" ಎಂದು ಬರೆದುಕೊಂಡರೆ ಸಾಲದು. ಅದರ ಜ್ಞಾನವನ್ನು ಪಡೆಯಬೇಕು ಎಂದು ತಿಳಿಸಿದರು.

ಕನ್ನಡದ ಹೆಸರು ಹೇಳಿಕೊಂಡು ಜೀವನ ಮಾಡುವ ಜನರಿಗೆ ಎಚ್ಚರಿಕೆ ಕೊಡಬೇಕು. ಅಲ್ಲದೆ ಪ್ರಪಂಚದ ಎಲ್ಲ ಭಾಷೆಗಳಲ್ಲಿನ ಪರಿಣಿತರ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರಿಸಬೇಕು. ಇದಕ್ಕೆ ಕೇವಲ ಹತ್ತು ಕೋಟಿಯಲ್ಲ, ನೂರು ಕೋಟಿಯನ್ನಾದರೂ ಖರ್ಚು ಮಾಡಬೇಕೆಂದು ಹೇಳಿದರು. ಕನ್ನಡದ ಜೊತೆಗೆ ಇನ್ನಿತರ ಭಾಷೆಗಳನ್ನು ತಿಳಿದುಕೊಳ್ಳಲು ಅವಕಾಶ ಕಲ್ಪಿಸಬೇಕೆಂದು ಸದನದಲ್ಲಿ ಆಗ್ರಹಿಸಿದರು[12].

ಗುಂಡ್ಲುಪೇಟೆ ಕ್ಷೇತ್ರದಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳು:-

ಶ್ರೀಯುತ ಅಬ್ದುಲ್ ನಜೀರ್ ಸಾಬ್‌ರವರು ತಮ್ಮ ಪ್ರಾಮಾಣಿಕತೆ, ಸರಳತೆ, ಸಜ್ಜನಿಕೆ ಗುಣಗಳಿಂದ ಶ್ರೀಮತಿ ಕೆ.ಎಸ್.ನಾಗರತ್ನಮ್ಮ ಮತ್ತು ಕೆ.ಎಚ್.ಪಾಟೀಲರ ಕೃಪೆಗೆ ಪಾತ್ರರಾಗಿ 1976ರಲ್ಲಿ ಕಾಂಗ್ರೆಸ್ ಪಕ್ಷದಿಂದ ವಿಧಾನ ಪರಿಷತ್‌ಗೆ ಆಯ್ಕೆಯಾದರು.

ವಿಧಾನ ಪರಿಷತ್‌ಗೆ ಆಯ್ಕೆಯಾದ ಮೇಲೆ ಅವರು ರಾಜ್ಯಕ್ಕೆ ನೀಡಿರುವ ಕೊಡುಗೆ ಅಪಾರ. ಹಾಗೆಯೇ ಅವರು ಶ್ರೀಮತಿ ಕೆ.ಎಸ್.ನಾಗರತ್ನಮ್ಮನವರ ಹಿಂಬಾಲಕರಾಗಿ, ಪ್ರೀತಿಯ ಮಗನಾಗಿ ನಾಗರತ್ನಮ್ಮನವರು ಜಾರಿಗೆ ತಂದ ಎಲ್ಲ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಿದರು. ಶ್ರೀಮತಿ ಕೆ.ಎಸ್.ನಾಗರತ್ನಮ್ಮ ಅವರ ಗುಂಡ್ಲುಪೇಟೆಗೆ ಸಂಬಂಧಿಸಿದ ಜನಪರ ಕಾರ್ಯಗಳನ್ನು ಯಶಸ್ವಿಗೊಳಿಸಿದ್ದು ಅಬ್ದುಲ್ ನಜೀರ್

ಸಾಬ್. ಶ್ರೀಯುತ ನಜೀರ್‌ಸಾಬ್ ಅವರು ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾದ ಮೇಲೆ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡರು. ಅದರಲ್ಲಿ ಗುಂಡ್ಲುಪೇಟೆಯ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ನಿರ್ಮಾಣ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದರು. ತಾವೇ ಮುಂದೆ ನಿಂತು ಆಸ್ಪತ್ರೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿದರು. ಗುಂಡ್ಲುಪೇಟೆಯು ಕರ್ನಾಟಕದ ಗಡಿಭಾಗದಲ್ಲಿದ್ದರೂ ತಮಿಳುನಾಡು ಮತ್ತು ಕೇರಳ ರಾಜ್ಯಗಳಿಗೆ ಕೊಂಡಿಯಾಗಿದೆ. ಈ ದೃಷ್ಟಿಯಿಂದ ಸಾರಿಗೆ ಮತ್ತು ಸಂಪರ್ಕವನ್ನು ಅಭಿವೃದ್ಧಿ ಪಡಿಸುವುದಕ್ಕೋಸ್ಕರ ಗುಂಡ್ಲುಪೇಟೆಯಲ್ಲಿ ಒಂದು ಬಸ್ ಡಿಪೋ ಸ್ಥಾಪನೆಗೆ ಕಾರಣಕರ್ತರಾದರು. ಇಂದು ಈ ಬಸ್ ಡಿಪೋ ಕರ್ನಾಟಕದಲ್ಲಿ ಇಂಧನ ಉಳಿತಾಯದಲ್ಲಿ ಮುಂಚೂಣಿಯಲ್ಲಿದ್ದು ಮಾದರಿ ಡಿಪೋ ಆಗಿದೆ. ಜೊತೆಗೆ ಗುಂಡ್ಲುಪೇಟೆಯಲ್ಲಿ ಒಂದು ಸರ್ಕಾರಿ ಬಸ್ ನಿಲ್ದಾಣವನ್ನು ಸ್ಥಾಪಿಸಿದರು. ಇದರಿಂದ ಗ್ರಾಮೀಣ ಪ್ರದೇಶದ ಜನರಿಗೆ ತುಂಬಾ ಅನುಕೂಲವಾಯಿತು. ಇಂದು ಅಬ್ದುಲ್ ನಜೀರ್ ಸಾಬ್‌ರಿಗೆ ಗ್ರಾಮೀಣಾಭಿವೃದ್ಧಿಯ ಬಗ್ಗೆ ಇದ್ದ ಕಳಕಳಿಯನ್ನು ಎತ್ತಿ ತೋರಿಸುತ್ತದೆ.

ಶ್ರೀಯುತ ಅಬ್ದುಲ್ ನಜೀರ್ ಸಾಬ್‌ರವರು ಶ್ರೀಮತಿ ಕೆ.ಎಸ್.ನಾಗರತ್ನಮ್ಮನವರ ಕಾಲದಲ್ಲಿ ನಿರ್ಮಾಣವಾದ ನಲ್ಲೂರ ಅಮಾನಿಕೆರೆ, ಕಲ್ಲುಕಟ್ಟೆ ಹಳ್ಳದ ನಿರ್ಮಾಣದಲ್ಲೂ ಪ್ರಮುಖ ಪಾತ್ರ ವಹಿಸಿದರು ಈ ಎರಡು ಕೆರೆಗಳ ನಿರ್ಮಾಣದಿಂದ ಹಲವಾರು ಗ್ರಾಮಗಳಲ್ಲಿ ನೀರಾವರಿ, ಕೃಷಿ ಪದ್ಧತಿ ಜಾರಿಗೆ ಬಂದಿತು.

ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ ನಜೀರ್‌ಸಾಬ್‌ರವರು ಜವಹರ್ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ, ಶೈಕ್ಷಣಿಕ ಅಭಿವೃದ್ಧಿಗೆ ಕಾರಣಕರ್ತರಾದರು. ಹಂತಹಂತವಾಗಿ ಈ ಶಿಕ್ಷಣ ಸಂಸ್ಥೆಯನ್ನು ಉತ್ತಮ ಸ್ಥಿತಿಗೆ ಕೊಂಡೊಯ್ದರು. ಅಲ್ಲದೆ ಈಗಾಗಲೇ ಸ್ಥಾಪನೆಗೊಂಡಿದ್ದ ಶ್ರೀ ದೊಡ್ಡಹುಂಡಿ ಭೋಗಪ್ಪ ಸರ್ಕಾರಿ ಪ್ರೌಢಶಾಲೆಗೆ ಹೆಚ್ಚಿನ ಕೊಡುಗೆ ನೀಡಿ ಗುಂಡ್ಲುಪೇಟೆಯ ಎಲ್ಲ ಜನತೆಗೆ ಶಿಕ್ಷಣ ದೊರಕಿಸಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಅಲ್ಲದೆ ರೈತರು ತಾವು ಬೆಳೆದ ಬೆಳೆಯನ್ನು ಮಾರಾಟ ಮಾಡಲು ಒಂದು ಸೂಕ್ತವಾದ ಸ್ಥಳದಲ್ಲಿ ಪುರಸಭಾ ಮಾರುಕಟ್ಟೆಯುನ್ನು ಸ್ಥಾಪಿಸಿದರು. ಇದಕ್ಕಾಗಿ ಜಾಗವನ್ನು ಮರಿಯಪ್ಪ ಅವರಿಂದ ಪಡೆದುಕೊಂಡರು.

ಹೀಗೆ ಅಬ್ದುಲ್ ನಜೀರ್‌ಸಾಬ್‌ರವರು ಸಾಮಾನ್ಯ ಕಾರ್ಯಕರ್ತರಾಗಿದ್ದಾಗಿನಿಂದಲೂ, ವಿಧಾನ ಪರಿಷತ್‌ಗೆ ಆಯ್ಕೆಯಾದ ಮೇಲೆ ಮತ್ತು ಕಾಂಗ್ರೆಸ್ ಪಕ್ಷ ತ್ಯಜಿಸಿ, ಕ್ರಾಂತಿರಂಗ ಪಕ್ಷದಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಾದ ಮೇಲೂ ಸಹ ಗುಂಡ್ಲುಪೇಟೆಯ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಇಂದಿಗೂ ಸಹ ಅಬ್ದುಲ್ ನಜೀರ್‌ಸಾಬ್‌ರ ಹೆಸರು ಗುಂಡ್ಲುಪೇಟೆ ಜನತೆಯ ಹೃದಯದಲ್ಲಿ ಅಚ್ಚ ಹಸಿರಾಗಿ ಉಳಿದಿದೆ. ಅದಕ್ಕೆ ಅವರು ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳು ಕಾರಣವಾಗಿವೆ[13].

ಕಾಂಗ್ರೆಸ್ ಪಕ್ಷದಿಂದ ನಿರ್ಗಮನ

ಶ್ರೀಯುತ ಅಬ್ದುಲ್ ನಜೀರ್‌ಸಾಬ್‌ರವರು ಕಾಂಗ್ರೆಸ್‌ನ ಸಾಮಾನ್ಯ ಕಾರ್ಯಕರ್ತರಾಗಿದ್ದಾಗಿನಿಂದಲೂ ಪ್ರಾಮಾಣಿಕತೆ, ಸರಳತೆ, ವಿಶ್ವಾಸಾರ್ಹತೆ ಮತ್ತು ತತ್ವನಿಷ್ಠತೆಗೆ ಹೆಸರಾಗಿದ್ದರು. ತಮ್ಮ ಮಾತೃಪಕ್ಷ ಕಾಂಗ್ರೆಸ್‌ನಲ್ಲೂ ಅನ್ಯಾಯ, ಭ್ರಷ್ಟಾಚಾರ ಪ್ರಕರಣಗಳು ಉಂಟಾದಾಗ ಅದರ ವಿರುದ್ಧ ಧ್ವನಿ ಎತ್ತುತ್ತಿದ್ದರು. ರಾಮ ಮನೋಹರ ಲೋಹಿಯಾ, ಜಯಪ್ರಕಾಶ್ ನಾರಾಯಣ, ಮಹಾತ್ಮಾ ಗಾಂಧೀಜಿ, ಸಮಾಜವಾದಿ ಶಾಂತವೇರಿ ಗೋಪಾಲಗೌಡ ಮುಂತಾದವರಿಂದ ಪ್ರಭಾವಿತರಾಗಿ ಪ್ರಾಮಾಣಿಕತೆ ಮತ್ತು ತತ್ವನಿಷ್ಠತೆಯನ್ನು ಮೈಗೂಡಿಸಿಕೊಂಡಿದ್ದರು.

1982ರಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದು ಗುಂಡೂರಾಯರು ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದರು. ನಜೀರ್‌ಸಾಬ್‌ರವರು ಆಡಳಿದ ಪಕ್ಷದ ವಿಧಾನ ಪರಿಷತ್ ಸದಸ್ಯರಾಗಿದ್ದರು. ಕರ್ನಾಟಕದ ಜನತೆಗೆ ತಿಳಿದಿರುವಂತೆ ಗುಂಡೂರಾಯರ ಕಾಲದಲ್ಲಿ ಒಂದು ದೊಡ್ಡ ಸಿಮೆಂಟ್ ಹಗರಣ ನಡೆಯಿತು. ಆಡಳಿತ ಪಕ್ಷದ ಸದಸ್ಯರಾಗಿದ್ದರೂ ಸಹ ತತ್ವನಿಷ್ಠರಾಗಿದ್ದ ನಜೀರ್‌ಸಾಬ್‌ರಿಗೆ ಸಿಮೆಂಟ್ ಹಂಚಿಕೆಯ ಬಗ್ಗೆ ಸಮಾಧಾನವಿರಲಿಲ್ಲ. ಸಿಮೆಂಟ್ ಹಂಚಿಕೆಯಲ್ಲಿ ಆಗಿರುವ ಅಕ್ರಮದ ಬಗ್ಗೆ ಉಗ್ರವಾಗಿ ಖಂಡಿಸಿದರು. ಅಲ್ಲದೇ ಪಕ್ಷದಿಂದಲೇ ಹೊರಬರುವ ತೀರ್ಮಾನ ಕೈಗೊಂಡರು. ಇದರಿಂದ ಕುಪಿತಗೊಂಡ ಕಾಂಗ್ರೆಸ್ ಅವರಿಗೆ ಟಿಕೆಟ್ ನೀಡಲು ನಿರಾಕರಿಸಿತು. ಇದರಿಂದ ಧೃತಿಗೆಡದ ನಜೀರ್‌ಸಾಬ್ ಅವರು ಎಸ್. ಬಂಗಾರಪ್ಪ ಕ್ರಾಂತಿರಂಗ ಪಕ್ಷ ಸೇರಿದರು[14].

4.4 ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಾಗಿ ಅಬ್ದುಲ್ ನಜೀರ್ ಸಾಬ್‌ರ ಸಾಧನೆಗಳು:-

ಶ್ರೀಯುತ ಅಬ್ದುಲ್ ನಜೀರ್ ಸಾಬ್‌ರವರು ಕಾಂಗ್ರೆಸ್ ಪಕ್ಷದಲ್ಲಿ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾದ ಮೇಲೆ ಅವರ ರಾಜಕೀಯ ಚಿತ್ರಣವೇ ಬದಲಾಯಿತು. ತಮ್ಮ ಪ್ರಾಮಾಣಿಕತೆ, ವಿನಯತೆ, ವಿಶ್ವಾಸಾರ್ಹತೆ, ಸರಳತೆಯ ಗುಣಗಳಿಂದ ಎಲ್ಲರ ಪ್ರೀತಿ ವಿಶ್ವಾಸಕ್ಕೆ ಭಾಜನರಾದರು. ವಾಗ್ಮಿಗಳಾದ ಇವರು ಸದನದಲ್ಲಿ ಯಾವುದೇ ವಿಷಯದ ಬಗ್ಗೆ ಚರ್ಚೆ ನಡೆದರೂ ಅದರಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಸದನದಲ್ಲಿ ಗೈರುಹಾಜರಾದದ್ದು ಕೆಲವೇ ದಿನಗಳು ಮಾತ್ರ. ಉಳಿದ ದಿನಗಳಲ್ಲಿ ಸದನದಲ್ಲಿ ಚರ್ಚೆ ಮಾಡಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಮೂಲಕ ಸದನಕ್ಕೆ ಒಂದು ವಿಶೇಷ ಮಾನ್ಯತೆ ಕಲ್ಪಿಸಿಕೊಟ್ಟಿದ್ದರು.

1976 ರಿಂದ 1982 ರವರೆಗೆ ಕಾಂಗ್ರೆಸ್ ಪಕ್ಷದಿಂದ ವಿಧಾನ ಪರಿಷತ್‌ಗೆ ಆಯ್ಕೆಯಾದ ನಜೀರ್ ಸಾಬ್ ಹಲವಾರು ಮಹತ್ತರ ಸಾಧನೆಗಳನ್ನು ಮಾಡಿದರು. 1982ರಲ್ಲಿ ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಒಂದು ದೊಡ್ಡ ಸಿಮೆಂಟ್ ಹಗರಣ ನಡೆಯಿತು. ಇದರಿಂದ ಕರ್ನಾಟಕದೆಲ್ಲೆಡೆ ಸರ್ಕಾರ ವ್ಯಾಪಕ ಟೀಕೆಗೆ ಒಳಗಾಯಿತು. ಅಷ್ಟೇ ಏಕೆ ಆಡಳಿತ ಪಕ್ಷದ ನಿಷ್ಠಾವಂತ ವಿಧಾನ ಪರಿಷತ್ ಸದಸ್ಯರಾದ ಅಬ್ದುಲ್ ನಜೀರ್ ಸಾಬ್‌ರವರು ಸಿಮೆಂಟ್ ಹಂಚಿಕೆಯ ಬಗ್ಗೆ ಅಸಮಾಧಾನ

ವ್ಯಕ್ತಪಡಿಸಿದರು. ಅದನ್ನು ಉಗ್ರವಾಗಿ ಖಂಡಿಸಿ ಪಕ್ಷದಿಂದಲೇ ಹೊರಬರುವ ತೀರ್ಮಾನಕ್ಕೆ ಬಂದರು. ಇದರಿಂದ ಕುಪಿತಗೊಂಡ ಕಾಂಗ್ರೆಸ್ ಪಕ್ಷದಿಂದ ಟಿಕೆಟ್ ನೀಡಲು ನಿರಾಕರಿಸಿತು. ಆದರೆ ಧೃತಿಗೆಡದ ನಜೀರ್ ಸಾಬ್ ಬಂಗಾರಪ್ಪನವರು ರಚಿಸಿದ್ದ ಕ್ರಾಂತಿರಂಗ ಪಕ್ಷ ಸೇರಿ ಅದರ ಅಧ್ಯಕ್ಷರಾದರು. ನಂತರ ನಡೆದ ಚುನಾವಣೆಯಲ್ಲಿ ಜನತಾಪಕ್ಷ ಮತ್ತು ಕ್ರಾಂತಿರಂಗಗಳು ಮೈತ್ರಿ ಮಾಡಿಕೊಂಡು ಚುನಾವಣೆ ಎದುರಿಸಿದವು. ಕಾಂಗ್ರೆಸ್ ಪಕ್ಷ ಭಾರೀ ಸೋಲು ಅನುಭವಿಸಿತು. ಜನತಾ ಪಕ್ಷ ಮತ್ತು ಕ್ರಾಂತಿರಂಗ ಪಕ್ಷಗಳು ಭರ್ಜರಿ ಜಯ ಸಾಧಿಸಿದವು.

ಇಂತಹ ಸಂದರ್ಭದಲ್ಲಿ ಪಕ್ಷದ ನಾಯಕರು ಯಾರಾಗಬೇಕು ಎಂಬ ಬಗ್ಗೆ ಸಾಕಷ್ಟು ಚರ್ಚೆ ನಡೆದಿತ್ತು. ಆಗ ನಜೀರ್ ಸಾಬ್‌ರ ಹೆಸರು ಸಹ ವಿಶೇಷವಾಗಿ ಕೇಳಿಬಂದಿತು. ಆಗ ಸ್ವತಃ ರಾಮಕೃಷ್ಣ ಹೆಗಡೆಯವರು ನಜೀರ್ ಸಾಬ್‌ರನ್ನು ನಾಯಕರಾಗಲು ಕೇಳಿಕೊಂಡರು. ಅಂದು ನಜೀರ್ ಸಾಬ್‌ರು ರಾಮಕೃಷ್ಣ ಹೆಗಡೆಯವರೊಂದಿಗೆ ಆಡಿದ ಮಾತು ಈ ಕೆಳಗಿನಂತಿತ್ತು. "ನನ್ನ ಸಾಮರ್ಥ್ಯ ಏನು ಎನ್ನುವುದು ನನಗೆ ಗೊತ್ತು. ಇಂದಿನ ಈ ಕಷ್ಟದ ಪರಿಸ್ಥಿತಿಯಲ್ಲಿ ನಾನು ಆ ಜವಾಬ್ದಾರಿಯನ್ನು ಹೊರಲಾರೆ. ನನಗಿಂತಲೂ ಸಮರ್ಥರಾದ ಇನ್ನಿತರರು ಪಕ್ಷದಲ್ಲಿದ್ದಾರೆ. ನೀವು ಒಪ್ಪಿದರೆ ಪಕ್ಷದ ದೃಷ್ಟಿಯಿಂದ ರಾಜ್ಯದ ದೃಷ್ಟಿಯಿಂದ ಒಳ್ಳೆಯದು. ನೀವು ನಾಯಕರಾಗಲು ಒಪ್ಪಲೇಬೇಕು" ಎಂದು ಕೇಳಿಕೊಂಡರಂತೆ.

ರಾಮಕೃಷ್ಣ ಹೆಗಡೆಯವರು ನಜೀರ್‌ಸಾಬ್‌ರ ಮಾತಿನಂತೆ ಮುಖ್ಯಮಂತ್ರಿಯಾದರು. ನಜೀರ್‌ಸಾಬ್‌ರವರು ಈ ಸಂದರ್ಭದಲ್ಲಿ ಯಾವುದೇ ಪ್ರಮುಖ ಖಾತೆಗಳನ್ನು ತೆಗೆದುಕೊಳ್ಳಬಹುದಿತ್ತು. ಆದರೆ ಜನಸೇವೆ ಮಾಡಬೇಕೆಂಬ ಗುರಿ ಹೊಂದಿದ್ದ ನಜೀರ್ ಸಾಬ್‌ರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಖಾತೆಯನ್ನು ವಹಿಸಿಕೊಂಡರು[15].

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಕೂಡಲೇ ಇಲಾಖೆಯ ಅಧಿಕಾರಿಗಳು, ಇಂಜಿನಿಯರುಗಳ ಸಭೆ ನಡೆಸಿದ ನಜೀರ್‌ಸಾಬ್‌ರು ತಮ್ಮ ಇಲಾಖೆಯನ್ನು ಯಾವ ದಿಶೆಯಲ್ಲಿ ಕೊಂಡೊಯ್ಯಬೇಕು ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಿದರು. ಈ ಇಲಾಖೆಯಲ್ಲಿ ಕೆಲಸ ನಿರ್ವಹಿಸಲು ದಕ್ಷತೆ, ಪ್ರಾಮಾಣಿಕತೆ, ಕ್ರಿಯಾಶೀಲತೆಗಳ ಅವಶ್ಯಕತೆಯನ್ನು ಮನವರಿಕೆ ಮಾಡಿಕೊಟ್ಟರು. ಜನರಿಗೆ ಶುದ್ಧ ಕುಡಿಯುವ ನೀರಿನ ಪೂರೈಕೆ ಮತ್ತು ಅಧಿಕಾರ ವಿಕೇಂದ್ರೀಕರಣವೇ ತಮ್ಮ ಪ್ರಥಮ ಆದ್ಯತೆ ಎಂದು ಘೋಷಿಸಿದರು.

ಶ್ರೀ ಅಬ್ದುಲ್ ನಜೀರ್ ಸಾಬ್‌ರವರು ಸಚಿವರಾಗಿ ಸದನದಲ್ಲಿ ಅನೇಕ ವಿಚಾರಗಳ ಬಗ್ಗೆ ಚರ್ಚಿಸಿ ಅವುಗಳಿಗೆ ಪರಿಹಾರ ಕಂಡುಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಲೋಕಾಯುಕ್ತ ಬಿಲ್ :-

ಪ್ರಾಮಾಣಿಕತೆಗೆ ಹೆಸರಾಗಿದ್ದ ನಜೀರ್‌ಸಾಬ್ ಲೋಕಾಯುಕ್ತ ಬಿಲ್ಲನ್ನು ಜಾರಿಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ತಾವು ಅಧಿಕಾರಕ್ಕೆ ಬಂದ ತಕ್ಷಣ ಲೋಕಾಯುಕ್ತ ಬಿಲ್‌ನ್ನು ಸಿದ್ಧಪಡಿಸಿ ರಾಷ್ಟ್ರಪತಿ

ಅನುಮೋದನೆಗೆ ಕಳುಹಿಸಿದರು. ವಿರೋಧ ಪಕ್ಷದವರಿಗಿಂತ ನಜೀರ್ ಸಾಬ್‌ರಿಗೆ ಲೋಕಾಯುಕ್ತ ಮಸೂದೆಯನ್ನು ತರುವ ಆಸಕ್ತಿ ಇತ್ತು. ಏಕೆಂದರೆ ದೇಶದಲ್ಲಿರುವ ಭ್ರಷ್ಟಾಚಾರ ಎಂಬ ಪಿಡುಗನ್ನು ನಿರ್ಮೂಲನೆ ಮಾಡದಿದ್ದರೆ ಸಾಮಾನ್ಯ ಜನತೆಗೆ ಯಾವ ಕಾರ್ಯಕ್ರಮವೂ ತಲುಪುವುದಿಲ್ಲ ಎನ್ನುವುದು ನಜೀರ್‌ಸಾಬ್‌ರಿಗೆ ತಿಳಿದಿತ್ತು.

ನಾವು ಸಿದ್ಧಪಡಿಸಿರುವ ಲೋಕಾಯುಕ್ತ ಶಾಸನದಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಇನ್ನಿತರ ಮಂತ್ರಿಗಳನ್ನು ಲೋಕಾಯುಕ್ತ ಶಾಸನದೊಳಗೆ ಸೇರಿಸಲಾಗಿದೆ. ಏಕೆಂದರೆ ಮೊದಲು ಭ್ರಷ್ಟಾಚಾರ ಪ್ರಾರಂಭವಾಗುವುದೇ ಮೇಲ್ಮಟ್ಟದಲ್ಲಿ. ಆದ್ದರಿಂದ ಮೇಲೆ ಶುದ್ಧವಾದರೆ ಕೆಳಮಟ್ಟದಲ್ಲಿ ಇದು ಬಹಳ ಪ್ರಭಾವಿಯಾಗಿ ನಡೆಯಬಹುದೆಂಬ ಸದುದ್ದೇಶದಿಂದ ಈ ಶಾಸನವನ್ನು ತಂದಿದ್ದೇವೆ ಎಂದು ತಿಳಿಸಿದರು.

ಲೋಕಾಯುಕ್ತ ಮಸೂದೆಯನ್ನು ಜಾರಿಗೆ ತರುವುದರಿಂದ ಆಡಳಿತದಲ್ಲಿ ಪಾರದರ್ಶಕತೆ, ಭ್ರಷ್ಟಾಚಾರ ಮುಕ್ತ ಸಮಾಜ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ದೇಶದಲ್ಲಿ ಭ್ರಷ್ಟಾಚಾರ ಎನ್ನುವುದು ಕುಷ್ಠರೋಗವಾಗಿದೆ, ಅದಕ್ಕೆ ಕಡಿವಾಣ ಹಾಕಬೇಕಾಗಿದೆ ಎಂದು ತಿಳಿಸಿದರು.

ಕುಟುಂಬ ಯೋಜನೆ:-

ದೇಶದಲ್ಲಿ ಬಡತನವಿದ್ದು, ಬಡತನ ಹೆಚ್ಚಳಕ್ಕೆ ಕಾರಣ ಜನಸಂಖ್ಯಾ ಸ್ಫೋಟ ಪ್ರಮುಖ ಕಾರಣವಾಗಿತ್ತು. ಜನಸಂಖ್ಯೆಯನ್ನು ನಿಯಂತ್ರಿಸಲು ಕುಟುಂಬ ಯೋಜನೆ ಅವಶ್ಯಕವಾಗಿದೆ. ಈ ಸದನದಲ್ಲಿ ಶ್ರೀಮಾನ್ ಶ್ರೀಕಂಠಯ್ಯನವರು ಹಿರಿಯರಾಗಿದ್ದಾರೆ. ಅವರು ಜನಸಂಖ್ಯೆ ನಿಯಂತ್ರಿಸಲು ಸಂತಾನಹರಣ ಚಿಕಿತ್ಸೆಯನ್ನು ಕಡ್ಡಾಯ ಮಾಡಬೇಕೆಂದು ಒತ್ತಾಯ ಮಾಡಿದ್ದಾರೆ. ಆದರೆ ಉತ್ತರ ನೀಡಿದ ನಜೀರ್‌ಸಾಬ್‌ರು ಅದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ಕೇಂದ್ರ ಸರ್ಕಾರ ರಾಜ್ಯಾಂಗಬದ್ಧಾವಾಗಿ ಮಾಡಿದರೆ ನಮ್ಮದೇನೂ ಅಭ್ಯಂತರವಿಲ್ಲವೆಂದು ಶ್ರೀಕಂಠಯ್ಯನವರಿಗೆ ಉತ್ತರಿಸಿದರು.

ನಿವೇಶನಗಳ ಹಂಚಿಕೆ:-

ಜನತಾಪಕ್ಷ 1983ರಲ್ಲಿ ಅಧಿಕಾರಕ್ಕೆ ಬಂದ ಮೇಲೆ ಸೂರಿಲ್ಲದ ಜನರಿಗೆ ವಸತಿ ನಿರ್ಮಿಸಿಕೊಡುವ ಕೆಲಸಕ್ಕೆ ಮುಂದಾಯಿಕು. ನಜೀರ್‌ಸಾಬ್‌ರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದರೂ ವಸತಿ ಖಾತೆ ಮಂತ್ರಿಗಳು ತಾತ್ಕಾಲಿಕವಾಗಿ ರಾಜೀನಾಮೆ ನೀಡಿದಾಗ ರಾಮಕೃಷ್ಣಹೆಗಡೆಯವರು ವಸತಿ ಖಾತೆಯ ಜವಾಬ್ದಾರಿಯನ್ನು ನಜೀರ್‌ಸಾಬ್‌ರ ಭುಜದ ಮೇಲೆ ಹೊರಿಸಿದರು. ಈ ಕ್ಷೇತ್ರದಲ್ಲಿ ನಜೀರ್‌ಸಾಬ್‌ರಿಗಿದ್ದ ನಿಷ್ಠೆ ಎಷ್ಟೆಂದರೆ ಕೆಲವೇ ದಿನಗಳಲ್ಲಿ ಅನೇಕ ಮಾರ್ಪಾಡುಗಳನ್ನು ತಂದರು. ಪ್ರತಿ ವರ್ಷಕ್ಕೆ 50,000ದಿಂದ 1,00,000 ಮನೆಗಳನ್ನು ಬಡವರಿಗೆ ಒದಗಿಸಿದರೆ ಮೂರ್ನಾಲ್ಕು ವರ್ಷಗಳಲ್ಲಿ ಕರ್ನಾಟಕದಲ್ಲಿ ವಸತಿ ಸಮಸ್ಯೆ ನಿವಾರಿಸಬಹುದು ಎನ್ನುವ ನಂಬಿಕೆ ಅವರಿಗೆ ಇತ್ತು.

ಅಬ್ದುಲ್ ನಜೀರ್‌ಸಾಬ್‌ರು ಬಡವರಿಗೆ ನಿವೇಶನ ಹಂಚುವ ಕಾರ್ಯದಲ್ಲಿ ಮುತುವರ್ಜಿ ವಹಿಸಿದರು. ಸುಮಾರು 3 ಲಕ್ಷದ 12 ಸಾವಿರದ 236 ಜನಗಳಿಗೆ ನಿವೇಶನ ಕೊಡಬೇಕೆಂದು ಗುರುತಿಸಲಾಗಿತ್ತು. ಅದರಲ್ಲಿ 1 ಲಕ್ಷದ 25 ಸಾವಿರದ 203 ಜನಗಳಿಗೆ ನಿವೇಶನಗಳನ್ನು ಕೊಟ್ಟರು. ಸುಮಾರು 77041 ಕುಟುಂಬಗಳನ್ನು ಗುರುತಿಸಿ ಈ ಎಲ್ಲ ಕುಟುಂಬಗಳಿಗೆ ಸೈಟುಗಳನ್ನು ಕೊಡಲು ನಿರ್ಧರಿಸಲಾಗಿದೆ. ಎಲ್ಲ ಕುಟುಂಬಗಳಿಗೆ ಒಂದೇ ಸಾರಿ ಸೈಟ್ ನೀಡಿದರೆ ಕಾನೂನು ಅಡಚಣೆಯಾಗುತ್ತದೆ. ಕಾನೂನು ಸಡಿಲ ಮಾಡಿ ಎಲ್ಲ ಕುಟುಂಬಗಳಿಗೂ ಸೈಟ್ ಕೊಡಲು ಕ್ರಮ ಕೈಗೊಳ್ಳಲಾಗುವುದು ಎಂದು ಸದನದಲ್ಲಿ ತಿಳಿಸಿದರು.

ತಾಂತ್ರಿಕ ಕಾಲೇಜುಗಳಿಗೆ ಸಹಾಯಧನ:-

ಉನ್ನತ ಶಿಕ್ಷಣವನ್ನು ನೀಡುವುದು ಸರ್ಕಾರದ ಉದ್ದೇಶವಾಗಿದೆ. ಆದರೆ ಸರ್ಕಾರಕ್ಕಿರುವ ಆರ್ಥಿಕ ಚೌಕಟ್ಟಿನಡಿಯಲ್ಲಿ ಕಾಲೇಜುಗಳನ್ನು ನಡೆಸುವುದು ಕಷ್ಟವಾಗಿದೆ. ನಮಗೆ ಸಿಕ್ಕಿರುವ ಅಂಕಿ-ಅಂಶಗಳ ಪ್ರಕಾರ ಅನುದಾನ ಪಡೆಯುವ ಕಾಲೇಜುಗಳ ಸಂಖ್ಯೆ 28, ಅನುದಾನ ಪಡೆಯದೇ ಇರುವ ಕಾಲೇಜುಗಳ ಸಂಖ್ಯೆ 18, ಅನುದಾನ ಕೊಡುವ ಕಾಲೇಜುಗಳಿಗೆ 45 ಲಕ್ಷ ರೂ. ವೆಚ್ಚವಾಗುತ್ತದೆ. 18 ಕಾಲೇಜುಗಳಿಗೆ ಅನುದಾನ ಕೊಟ್ಟರೆ 58 ಕೋಟಿ ರೂ. ವೆಚ್ಚವಾಗುತ್ತದೆ. 18 ಪಾಲಿಟೆಕ್ನಿಕ್ ಕಾಲೇಜುಗಳಿವೆ. ಅದರಲ್ಲಿ 4 ಕಾಲೇಜುಗಳಿಗೆ ಸರ್ಕಾರ ಸಹಕಾರ ನೀಡುತ್ತದೆ. ಉಳಿದ4 ಪಾಲಿಟೆಕ್ನಿಕ್‌ಗಳಿಗೆ ಯಾವುದೇ ಸಹಕಾರ ಇಲ್ಲ. ಯಾವುದೇ ಶುಲ್ಕವನ್ನು ಪಡೆಯದೇ ಕಾಲೇಜುಗಳನ್ನು ನಡೆಸಬೇಕಾದರೆ 18 ಕೋಟಿ ರೂ. ನೀಡಬೇಕಾಗುತ್ತದೆ ಎಂದು ಸದನದಲ್ಲಿ ನಜೀರ್‌ಸಾಬ್ ತಿಳಿಸಿದರು. ಮೆಡಿಕಲ್ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳನ್ನು ಸರ್ಕಾರವೇ ನಡೆಸಬೇಕಾದರೆ 120 ಕೋಟಿ ರೂ.ಗಳು ಬೇಕಾಗುತ್ತದೆ. ತಾತ್ವಿಕವಾಗಿ ಇಂತಹ ಸಲಹೆಗಳನ್ನು ಒಪ್ಪಿಕೊಂಡರೂ ನಾವು ನಮಗೆ ಇರುವ ಆರ್ಥಿಕ ಚೌಕಟ್ಟಿನೊಳಗೆ ಚಿಂತಿಸಬೇಕಾಗುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ಇರುವ ಡೊನೇಷನ್ ಹಾವಳಿಯನ್ನು ತೊಡೆದುಹಾಕಬೇಕು. ಈ ನಿಟ್ಟಿನಲ್ಲಿ ನಾವೆಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕೆಂದು ತಮ್ಮ ಸಹೋದ್ಯೋಗಿಗಳಿಗೆ ಕರೆ ನೀಡುವ ಮೂಲಕ ಎಲ್ಲರಿಗೂ ಶಿಕ್ಷಣ ಎನ್ನುವ ತಮ್ಮ ತತ್ವಕ್ಕೆ ಮತ್ತಷ್ಟು ಪ್ರೋತ್ಸಾಹ ನೀಡಿದರು.

ಬರ ಪರಿಹಾರ ಕಾಮಗಾರಿಗಳು:-

ಜನತಾಪಕ್ಷ 1983ರಲ್ಲಿ ಅಧಿಕಾರಕ್ಕೆ ಬಂದಾಗ ಬರಗಾಲ ಉಂಟಾಗಿತ್ತು. ಇಂತಹ ಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿ ಹರಿಕಾರರಾಗಿದ್ದ ನಜೀರ್‌ಸಾಬ್‌ರವರು ವಿರೋಧಿ ಪಕ್ಷದ ಸದಸ್ಯರೊಬ್ಬರು ಬರಪರಿಹಾರ ಕಾರ್ಯಕ್ರಮಗಳನ್ನು ಹೇಗೆ ಕೈಗೊಂಡಿದ್ದೀರಿ ಎಂದು ಕೇಳಿದ್ದಕ್ಕೆ ನಜೀರ್‌ಸಾಬ್ ಉತ್ತರಿಸುತ್ತಾ "ನಮ್ಮ ಸರ್ಕಾರ ಅಧಿಕಾರ ವಹಿಸಿಕೊಂಡ ಮೇಲೆ ಬರಪರಿಹಾರ ಕಾರ್ಯಕ್ರಮಗಳಿಗೆ ಸುಮಾರು 55 ಕೋಟಿ

ರೂಪಾಯಿಗಳನ್ನು ಖರ್ಚು ಮಾಡಿದೆ. ನಮ್ಮ ವಿರೋಧ ಪಕ್ಷದ ಸದಸ್ಯರ ಕಳಕಳಿಯನ್ನು ಒಪ್ಪಿಕೊಳ್ಳುತ್ತೇನೆ. ಇವತ್ತು ಹಳ್ಳಿಗಳಲ್ಲಿ ಜನರು ಸಾಯುತ್ತಿದ್ದಾರೆ. ಬಡಬಗ್ಗರ ಆಸ್ತಿಪಾಸ್ತಿ ನಷ್ಟವಾಗುತ್ತಿದೆ. ಹಿಂದಿನ ಸರ್ಕಾರದ ಮಂತ್ರಿಗಳಿಗೆ ಪ್ರತಿ ಮೂರು ತಿಂಗಳಿಗೆ ಒಂದರಂತೆ ಪತ್ರ ಬರೆದಿದ್ದೇನೆ. ಆದರೆ ಆಗಿನ ಮಂತ್ರಿಗಳು ನನ್ನ ಎಲ್ಲ ಪತ್ರಗಳಿಗೂ ಕ್ರಮ ಕೈಗೊಳ್ಳುತ್ತೇವೆ ಎಂದು ಉತ್ತರ ಬರೆದಿದ್ದಾರೆ. ಆದರೆ ನಾವು ಆಡಳಿತವನ್ನು ವಹಿಸಿಕೊಂಡ ಮೇಲೆ ಕುಡಿಯುವ ನೀರಿನ ಸೌಲಭ್ಯಕ್ಕೆ ಮತ್ತು ಬರಪರಿಹಾರಕ್ಕೆ ಸಂಬಂಧಿಸಿದಂತೆ 500 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ."

ಈ 500 ಕೋಟಿಯಲ್ಲಿ ಕೇಂದ್ರ ಸರ್ಕಾರದಿಂದ ಯಾವುದೇ ಪಾಲು ಇಲ್ಲ. ಜಿಲ್ಲೆಯ ಜಿಲ್ಲಾಧಿಕಾರಿಗಳು ಕಳುಹಿಸಿಕೊಟ್ಟ ಮಾಹಿತಿಗೆ ಅನುಗುಣವಾಗಿ ಹಣ ಬಿಡುಗಡೆ ಮಾಡಿದ್ದೇವೆ ಎಂದರು. ಇದು ಅಬ್ದುಲ್ ನಜೀರ್ ಸಾಬ್ ಅವರಿಗೆ ಗ್ರಾಮೀಣ ಜನತೆಯ ಬಗ್ಗೆ ಇರುವ ಕಳಕಳಿಯನ್ನು ತೋರಿಸುತ್ತದೆ[16].

ಕೊಳವೆ ಬಾವಿಗಳ ನಿರ್ಮಾಣ:

ಶುದ್ಧ ಕುಡಿಯುವ ನೀರಿನ ಪೂರೈಕೆಗೆ ಆದ್ಯತೆ:- 1983ರಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂದು ರಾಮಕೃಷ್ಣ ಹೆಗಡೆಯವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದರು. ಇನ್ನಿತರ ಖಾತೆಗಳ ಹಂಚಿಕೆಯಾಗಬೇಕಿತ್ತು. ಮುಖ್ಯಮಂತ್ರಿ ಸ್ಥಾನವನ್ನು ಪಡೆಯಬಹುದಾಗಿದ್ದ ಅಬ್ದುಲ್ ನಜೀರ್ ಸಾಬ್‌ರು ಯಾವ ಖಾತೆ ಕೊಟ್ಟರೂ ಪರವಾಗಿಲ್ಲ ಎಂದು ಹೇಳಿ ತಮ್ಮ ಪ್ರಾಮಾಣಿಕತೆಯನ್ನು ಮೆರೆದರು. ಆದರೆ ರಾಮಕೃಷ್ಣ ಹೆಗಡೆಯವರಿಗೆ ನಜೀರ್‌ಸಾಬ್‌ರನ್ನು ವಿದ್ಯಾಮಂತ್ರಿಯನ್ನಾಗಿ ಮಾಡುವ ಹಂಬಲ ಇರುತ್ತದೆ. ಕಾರಣ ನಜೀರರು ಆ ಕ್ಷೇತ್ರದಲ್ಲಿ ಒಂದು ಕ್ರಾಂತಿಯನ್ನು ತರಬಹುದ ಎಂಬ ನಂಬಿಕೆ ರಾಮಕೃಷ್ಣ ಹೆಗಡೆಯವರಿಗಿತ್ತು. ಆದರೆ ನಜೀರ್ ಸಾಬ್‌ರು ಬಹಳ ನಮ್ರತೆಯಿಂದ ಗ್ರಾಮೀಣಾಭಿವೃದ್ಧಿ ಖಾತೆ ಕೊಟ್ಟರೆ ಏನಾದರೂ ಸ್ವಲ್ಪ ಕೆಲಸ ಮಾಡಬಹುದು ಎಂಬ ಕೋರಿಕೆ ಮುಂದಿಟ್ಟರು. ಆ ದಿನಗಳಲ್ಲಿ ಅಷ್ಟೇನೂ ಮಹತ್ವವಲ್ಲದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿ ಸ್ಥಾನ ನೀಡಲು ರಾಮಕೃಷ್ಣ ಹೆಗಡೆ ಬಹಳ ಸಂತೋಷದಿಂದ ಸಮ್ಮತಿಸಿದರು.

ಆಧುನಿಕ ಭಗೀರಥರಾಗಿದ್ದ ನಜೀರ್‌ಸಾಬರಿಗೆ ಮೊದಲಿನಿಂದಲೂ ಕೆಳವರ್ಗದ ಜನರ ಬಗ್ಗೆ ವಿಶೇಷ ಕಾಳಜಿ ಇತ್ತು. ದೀನದಲಿತರ ಬಗ್ಗೆ, ಬಡವರ ಬಗ್ಗೆ ಅನುಕಂಪ ಹೊಂದಿದ್ದರು. ಭೂಕಾರ್ಮಿಕರನ್ನು ಸಂಘಟಿಸಿ ಅವರ ಕುಂದುಕೊರತೆಗಳ ಪರಿಹಾರಕ್ಕೆ ಹೋರಾಟ ನಡೆಸುತ್ತಿದ್ದರು. ಜೀತದಾಳುಗಳ ಸಮಸ್ಯೆಯ ಬಗ್ಗೆ ವಿಶೇಷ ಒಲವನ್ನು ತೋರಿದರು. ಹೆಗ್ಗಡದೇವನಕೋಟೆಯಲ್ಲಿ ಜೀತದಾಳುಗಳಿಗೆ ಪುನರ್‌ವಸತಿ ಯೋಜನೆ ಕೈಗೊಂಡಿದ್ದು ಇಡೀ ದೇಶಕ್ಕೆ ಮಾದರಿಯಾಗಿದೆ.

ಗ್ರಾಮೀಣ ಅಭಿವೃದ್ಧಿಯ ಬಗ್ಗೆ ಗ್ರಾಮಗಳ ಸಮಸ್ಯೆಗಳ ಬಗ್ಗೆ ವಿಶೇಷ ಗಮನ ಹರಿಸಿದ ನಜೀರ್‌ಸಾಬ್ ಜನರ ಮೂಲಭೂತ ಅವಶ್ಯಕತೆಯಾದ ಕುಡಿಯುವ ನೀರಿನ ಸಮಸ್ಯೆ ನೀಗಿಸಲು ತಮ್ಮನ್ನು

ತೊಡಗಿಸಿಕೊಂಡರು. ಕರ್ನಾಟಕ ರಾಜ್ಯಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ಅನೇಕ ಜನ ಮುಖ್ಯಮಂತ್ರಿಗಳು ನಮ್ಮ ದೇಶದಲ್ಲಿ ಆಡಳಿತ ನಡೆಸಿದ್ದಾರೆ. ಆದರೆ ಅಂದಿನಿಂದ 1983ರವರೆಗೆ ಯಾರೂ ಸಾಧಿಸಲಾಗದಿದ್ದುದನ್ನು ಕೇವಲ ಎರಡು ವರ್ಷಗಳ ಅಂತರದಲ್ಲಿ ನಜೀರ್‌ಸಾಬ್ ಸಾಧಿಸಿದರು. ಇದು ನಜೀರ್‌ಸಾಬ್ ಅವರ ವೈಯುಕ್ತಿಕ ಸಾಧನೆ. ಆದರೆ ಅವರು ಇದು ತಮ್ಮ ಪಕ್ಷದ ಸಾಧನೆ ಎಂದು ಹೇಳಿ ನಿಸ್ವಾರ್ಥತೆಯನ್ನು ಪ್ರದರ್ಶಿಸಿದರು. ಇದು ಅವರ ಒಳ್ಳೆಯ ಗುಣವಾಗಿತ್ತು.

ಒಮ್ಮೆ ಲೇಖಕರು ನಜೀರ್‌ಸಾಬ್‌ರನ್ನು ಭೇಟಿಯಾಗಿದ್ದರು. ನಜೀರರ ಕುಶಲೋಪರಿ ವಿಚಾರಿಸಲು ಬಂದ ಲೇಖಕರಿಗೆ ಅವರು ಕೊಟ್ಟ ಉತ್ತರ ಹೀಗಿತ್ತು. "ಕಳೆದೆರಡು ದಿನಗಳಿಂದ ಪಾಂಡವಪುರದ ಸುತ್ತಮುತ್ತಲ ಹಳ್ಳಿಗೆ ಭೇಟಿ ಕೊಟ್ಟಿದ್ದೆ. ಹಳ್ಳಿಗಳಾದ್ದರಿಂದ ವಿಪರೀತ ಧೂಳು, ಹಾಗಾಗಿ ಗಂಟಲು ಕಟ್ಟಿದೆ" ಎಂದು ಮುಂದುವರೆಯುತ್ತಾ " ನಮ್ಮ ಜನರಿಗೆ ಕನಿಷ್ಠ ಪಕ್ಷ ನೀರನ್ನೂ ಸಹಾ ಕೊಡಲು ಸಾಧ್ಯವಾಗದಿದ್ದರೆ ಏನು ಪ್ರಯೋಜನ" ಎಂದು ಮರುಗಿದರು.

ಸಾಮಾಜಿಕ ಕಳಕಳಿ ಅವರ ರಕ್ತದ ಕಣಕಣದಲ್ಲಿಯೂ ಅಡಗಿತ್ತು. ಈ ರೀತಿಯ ಅರ್ಪಣಾ ಭಾವದಿಂದ ನೀರಿನ ಸಮಸ್ಯೆಯನ್ನು ನಿವಾರಿಸಿದ್ದರಿಂದಲೇ ಇಡೀ ಕರ್ನಾಟಕದ ಜನತೆ ಅವರನ್ನು ಪ್ರೀತಿಯಿಂದ "ನೀರ್‌ಸಾಬ್" ಎಂದು ಕರೆಯುತ್ತಿದ್ದರು. ಅಬ್ದುಲ್ ನಜೀರ್ ಸಾಬ್ ಎಂದರೆ ಹೆಚ್ಚು ಜನರಿಗೆ ಅಪರಿಚಿತರಿರಬಹುದು. ಆದರೆ ನೀರ್‌ಸಾಬ್ ಎಂಬುದು ಇಂದು ಸಾಮಾನ್ಯ ಹಳ್ಳಿಗನಿಗೂ ಚಿರಪರಿಚಿತವಾದ ಹೆಸರು.

1983ರ ವೇಳೆಗೆ ದೇಶಕ್ಕೆ ಸ್ವಾತಂತ್ರ್ಯ ಬಂದು 35 ವರ್ಷಗಳಾಗಿದ್ದವು. ಮನುಷ್ಯನಿಗೆ ಅತ್ಯಂತ ಅವಶ್ಯಕವಾಗಿದ್ದ ಕುಡಿಯುವ ನೀರನ್ನು ಪೂರೈಸಲಾಗದಿದ್ದುದು ಒಂದು ರಾಷ್ಟ್ರೀಯ ಕಳಂಕ ಎಂದು ಅವರು ಅಭಿಪ್ರಾಯ ಪಟ್ಟಿದ್ದರು. ದೇಶದಲ್ಲಿ ಅನ್ನವಿಲ್ಲದ ಪರಿಸ್ಥಿತಿ ಇದ್ದರೂ ಜನರು ನೀರಿಗಾಗಿ ಬವಣೆ ಪಡುತ್ತಿದ್ದುದನ್ನು ಕಾಣಬಹುದು. ದೇಶದ ಐದೂವರೆ ಲಕ್ಷ ಹಳ್ಳಿಗಳಲ್ಲಿ ಕೇವಲ ಒಂದೂವರೆ ಲಕ್ಷ ಹಳ್ಳಿಗಳಿಗೆ ಮಾತ್ರ ನೀರು ಒದಗಿಸುವಂತಹ ಪರಿಸ್ಥಿತಿ ಇತ್ತು. ಇಂತಹ ಸಂಧಿಗ್ಧ ಪರಿಸ್ಥಿತಿಯಲ್ಲಿ ಸಮಸ್ಯೆಯನ್ನು ಪರಿಹರಿಸಿದ ಶ್ರೇಯಸ್ಸು ನಜೀರ್‌ಸಾಬ್‌ರಿಗೆ ಸಲ್ಲುತ್ತದೆ. 'ನೀರ್ ಸಾಬ್' ಎಂಬ ಅಭಿದಾನಕ್ಕೆ ನಜೀರ್‌ಸಾಬ್‌ರು ಅರ್ಹರಾದ ವ್ಯಕ್ತಿಯಾಗಿದ್ದಾರೆ[17].

ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಕೆಲವು ಜನ ಮೆಚ್ಚಿದ್ದಾರೆ ಕೆಲವು ಜನ ತಾರತಮ್ಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಅವರು ಆ ಮಾತನ್ನು ಹೇಳುವುದಕ್ಕೆ ಅವರಿಗೆ ಹಕ್ಕು ಇದೆ. ನಾನು ಈ ಖಾತೆಯನ್ನು ವಹಿಸಿಕೊಂಡ ಮೇಲೆ ರಾಜ್ಯದ ಎಲ್ಲಾ ಕಡೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆಯೆಂದು ಕಂಡು ಬಂತು. ಆಗ ನಾವು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕಾದರೆ ನಮ್ಮಲ್ಲಿ ಯಾವ ರೀತಿಯ ವ್ಯವಸ್ಥೆ ಕೂಡ ಇರಲಿಲ್ಲ. ಆಗ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಾನು ಒಂದು ಆಜ್ಞೆಯನ್ನು ಹೊರಡಿಸಿದೆ. ಅದು ಏನೆಂದರೆ

ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಅಭಾವ ಇದೆ. ಆ ಬಗ್ಗೆ ಜಿಲ್ಲಾಧಿಕಾರಿಗಳು ಹಾಗೂ ಆ ಜಿಲ್ಲೆಯ ಶಾಸಕರು ಮತ್ತು ಅಸಿಸ್ಟೆಂಟ್ ಕಮಿಷನರ್ಸ್ ಇಡೀ ಜಿಲ್ಲೆ ಮತ್ತು ತಾಲ್ಲೂಕಿನಲ್ಲಿ ಸಂಚಾರ ಮಾಡಿ ಸರ್ಕಾರಕ್ಕೆ ಒಂದು ವರದಿಯನ್ನು ಕೊಡಬೇಕು. ಮೊದಲು ತಾಲ್ಲೂಕು ಮಟ್ಟದಲ್ಲಿ ಎಷ್ಟು ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸಿಕೊಡಬೇಕಾಗಿದೆ ಎನ್ನುವ ಪಟ್ಟಿಯನ್ನು ತಯಾರು ಮಾಡಿಸಿ ನಂತರ ಆ ಪಟ್ಟಿಗೆ ಜಿಲ್ಲಾ ಮಟ್ಟದ ಸಮಿತಿ ಮಂಜೂರಾತಿ ನೀಡಿ ಅದನ್ನು ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ನಾವು ತೀರ್ಮಾನ ಮಾಡಿ ಒಂದು ಆಜ್ಞೆಯನ್ನು ಹೊರಡಿಸಿದ್ದೇವೆ. ಆ ಆಜ್ಞೆಯಲ್ಲಿ ಸಂಬಂಧಪಟ್ಟ ಶಾಸಕರನ್ನು ಕೇಳಿ ಪಟ್ಟಿ ತಯಾರಿಸಬೇಕೆಂದು ಸಹ ತಿಳಿಸಿದ್ದೇವೆ. ಆ ನಂತರ ನಮಗೆ ಸುಮಾರು ಮೂರು ಹಂತಗಳಲ್ಲಿ ಪಟ್ಟಿ ತಯಾರಾಗಿ ಬಂದವು. ಮೊದಲನೆಯ ಹಂತದಲ್ಲಿ ಸುಮಾರು 2000 ಕೊಳವೆ ಬಾವಿಗಳ ಅವಶ್ಯಕತೆ ಇದೆಯೆಂದು ತಿಳಿದು ಬಂತು. ಎರಡನೇ ಹಂತದಲ್ಲಿ ಸುಮಾರು 6000 ಕೊಳವೆ ಬಾವಿಗಳ ಅವಶ್ಯಕತೆ ಇದೆಯೆಂದು ಮತ್ತೆ ಮೂರನೇ ಹಂತದಲ್ಲಿ ಸುಮಾರು 11 ಸಾವಿರ ಕೊಳವೆ ಬಾವಿಗಳ ಅವಶ್ಯಕತೆ ಇದೆಯೆಂದು ತಿಳಿದು ಬಂತು. ಈ ಕೊಳವೆ ಬಾವಿಗಳನ್ನು ತೋಡಿಸಲು ಕ್ರಮವನ್ನು ಸಹ ತೆಗೆದುಕೊಂಡಿದ್ದು, ನಂತರ ಮತ್ತೆ ನಾಲ್ಕನೇ ಪಟ್ಟಿಯಲ್ಲಿ ಸುಮಾರು 6500 ಕೊಳವೆ ಬಾವಿಗಳ ಅವಶ್ಯಕತೆ ಕಂಡು ಬಂದಿದೆ ಆ ಬಗ್ಗೆ ಸರ್ಕಾರ ಇನ್ನೂ ಯಾವ ಕ್ರಮವನ್ನು ಸಹ ಕೈಗೊಂಡಿಲ್ಲ. ಅದಕ್ಕೆ ಸರ್ಕಾರದ ಮಂಜೂರಾತಿ ಕೂಡ ಕೊಟ್ಟಿಲ್ಲ. ನಾವು ಫೆಬ್ರವರಿ, ಮಾರ್ಚ್ ಹಾಗೂ ಏಪ್ರಿಲಂ ತಿಂಗಳಲ್ಲಿ ವ್ಯಾಪಕವಾದಂತಹ ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸ ಮಾಡಿದ್ದೇವೆ. ಇದರಲ್ಲಿ ಯಾವ ತಾರತಮ್ಯವನ್ನು ಕೂಡ ನಾವು ಮಾಡಿಲ್ಲ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ನಾನು ಈ ಸಂದರ್ಭದಲ್ಲಿ ತಿಳಿಯಬಯಸುತ್ತೇನೆ. ಗ್ರಾಮಾಭಿವೃದ್ಧಿ ವಿಷಯದಲ್ಲಿ ಸರ್ಕಾರ ತಾರತಮ್ಯ ಮಾಡತಕ್ಕಂಥದ್ದು ಎಲ್ಲಿಂದ ಬರುತ್ತದೆ? ಆದರೆ ಗುಲ್ಬರ್ಗ ಮತ್ತು ರಾಯಚೂರು ಇಂಥ ಕೆಲವೊಂದು ಜಿಲ್ಲೆಗಳಲ್ಲಿ ನಾವು ರಿಗ್ಸ್ ತೆಗೆದುಕೊಂಡು ಹೋಗಿ ಸುಮಾರು 100 ಅಡಿ 200 ಅಡಿ 300 ಅಡಿಗಳ ಆಳ ಮಾಡಿದರೂ ಸಹ ಅಲ್ಲಿ ನೀರು ಸಿಗುವುದಿಲ್ಲ. ಇದರಿಂದ ಅಲ್ಲಿಗೆ ಪ್ರವೇಟ್ ರಿಗ್ಸ್‌ನವರು ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಕಾರಣವೇನೆಂದರೆ ಅವರಿಗೆ ನಾವು ಕೊಡುವ ಹಣ ಬಹಳ ಕಡಿಮೆ. ಇದರಿಂದ ಅವರು ಇಷ್ಟಪಡುವುದಿಲ್ಲ. ಮತ್ತೆ ಶಿವಮೊಗ್ಗದಲ್ಲಿ ಸುಮಾರು 20 ಬಾವಿಗಳನ್ನು ಮಾಡಿದ್ದೇವೆ. ಇಲ್ಲಿನ ಭೂಮಿ ಕೂಡ ಹದವಾಗಿರುವುದಿಲ್ಲ. ಈ ದೃಷ್ಟಿಯಿಂದ ಅಲ್ಲಿ ಕೊಳವೆ ಬಾವಿಗಳನ್ನು ತೋಡಿಸುವುದಕ್ಕೆ ಆಗುವುದಿಲ್ಲ. ಇದರಿಂದ ಅಲ್ಲಿನ ಅಂಕಿ ಅಂಶಗಳು ಬಹಳ ಕಡಿಮೆ. ನಾನು ಈ ರಾಜ್ಯದ 19 ಜಿಲ್ಲೆಗಳಿಗೂ ಕೂಡ ಭೇಟಿ ಕೊಟ್ಟು ನೋಡಿಕೊಂಡು ಬಂದಿದ್ದೇನೆ. ಆ ತಾಲ್ಲೂಕಿನ ಶಾಸಕರನ್ನು ಸಹ ಕರೆದು ಮಾತನಾಡಿದ್ದೇನೆ. ಆದ್ದರಿಂದ ನಾವು ತಮಿಳುನಾಡು ಮತ್ತು ಕೇರಳ ರಾಜ್ಯಗಳಿಂದ ಕೂಡ ರಿಗ್ ಯಂತ್ರಗಳನ್ನು ತರಿಸಿದ್ದೇವೆ. ಕೆಲವೊಂದು ಕಡೆಗಳಲ್ಲಿ ತಾಂತ್ರಿಕ ವ್ಯತ್ಯಾಸಗಳಿಂದ ನಾವು ತಪ್ಪು ಮಾಡಿರಬಹುದು. ಆದರೆ ಉದ್ದೇಶಪೂರ್ವಕವಾಗಿ ಯಾರೂ ಕೂಡ ತಪ್ಪು ಮಾಡುವುದಿಲ್ಲ. ಶ್ರೀಮಾನ್ ಸೋಮಣ್ಣನವರು ಮಾತನಾಡುತ್ತಾ ತಮ್ಮ ಕ್ಷೇತ್ರದ ಉದಾಹರಣೆಯನ್ನು ಕೊಟ್ಟಿದ್ದಾರೆ. ಹಾಗೂ ಅವರು ಮಾತನಾಡುತ್ತಾ ಹೇಳಿದರು. ನರಗುಂದ ಮತ್ತು ನವಲಗುಂದ ಪ್ರದೇಶಗಳಲ್ಲಿ ಎಷ್ಟು ಕೊಳವೆ ಬಾವಿಗಳನ್ನು

ಜೋಡಿಸಿದ್ದೀರಿ ಮತ್ತೆ ಕನಕಪುರದಲ್ಲಿ ಎಷ್ಟು ಕೊಳವೆ ಬಾವಿಗಳನ್ನು ತೋಡಿಸಿದ್ದೀರಿ. ಎನ್ನುವ ಪ್ರಶ್ನೆಯನ್ನು ಸಹ ಕೇಳಿದ್ದಾರೆ, ಕೆಲವೊಂದು ಪ್ರದೇಶಗಳಲ್ಲಿ ಕೊಳವೇ ಭಾವಿಗಳನ್ನು ತೋಡುವುದಕ್ಕೆ ಆಗುವುದಿಲ್ಲ. ಮತ್ತೆ ಕೆಲವೊಂದು ಪ್ರದೇಶಗಳಲ್ಲಿ ಓಪನ್ಸ್ ವೆಲ್ಸ್, ಮಾಡಬೇಕಾಗುತ್ತದೆ. ಮತ್ತೆ ಕೆಲವು ಪ್ರದೇಶಗಳಲ್ಲಿ ಕೊಳವೆ ಬಾವಿಗಳನ್ನು ತೋಡಿಸಿದರೂ ಕೂಡ ಅಲ್ಲಿ ಕುಡಿಯುವ ನೀರು ಸಿಗುವುದಿಲ್ಲ. ಅಲ್ಲಿನ ನೀರಿನ ಲವಣಾಂಶಗಳು ವ್ಯತ್ಯಾಸ ಇರುತ್ತದೆ. ಮತ್ತು ಉಪ್ಪು ನೀರು ಇರುತ್ತದೆ. ಇದರಿಂದ ಆ ನೀರು ಕುಡಿಯಲು ಆಗುವುದಿಲ್ಲ. ಇನ್ನು ನಮ್ಮ ಸದಸ್ಯರಾದಂಥ ಶ್ರೀಮಾನ್ ಯಾಮುಗಲ್‌ರವರು ಮಾತನಾಡುತ್ತಾ ಹೇಳಿದರು. ಸುಮಾರು 2 ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡಿದ್ದೀರಿ. ಯೋಜನೆಯ ಮುಖಾಂತರ ಸುಮಾರು 40 ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಿಕೊಡಬೇಕು ಎನ್ನುವ ಮಾತನ್ನು ಹೇಳಿದರು. ಆದರೆ ಈ ಬಗ್ಗೆ ನಾವು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೇವೆ. ಅಲ್ಲಿಂದ ಬಂದ ತಕ್ಷಣ ನಾವು ಆ ಕೆಲಸವನ್ನು ಮಾಡಿಕೊಡುತ್ತೇವೆ ಎನ್ನುವ ಭರವಸೆಯನ್ನು ನಾನು ಈ ದಿವಸ ಈ ಸದನದಲ್ಲಿ ಕೊಡಬಯಸುತ್ತೇನೆ.

ಮತ್ತೆ ಕುಡಿಯುವ ನೀರಿನ ಬಗ್ಗೆ ಇನ್ನೂ ಕೂಡ ಕೆಲವು ಕಡೆ ಸಮಸ್ಯೆಗಳಿವೆ. ಮಾನ್ಯ ಸದಸ್ಯರಾದ ಶ್ರೀ ಸ್ವಾಮಿರಾವ್ ಇಲ್ಲಿಲ್ಲ. ಅವರು ನವಿಲೆ ಎನ್ನುವ ಗ್ರಾಮದಲ್ಲಿ ಏನು ಕೆಲಸ ಆಗಿಲ್ಲ ಎಂದು ಹೇಳಿದರು. ಆ ಗ್ರಾಮದಲ್ಲಿ ಹತ್ತು ಕೊಳವೆ ಬಾವಿಗಳನ್ನು ಮಾಡಿದ್ದರೂ ಕೂಡ ಅವುಗಳೆಲ್ಲವೂ ಸಫಲವಾಗಿವೆ. ಹತ್ತು ಕೊಳವೆ ಬಾವಿಗಳೂ ಅಲ್ಲಿ ವಿಫಲವಾಗಿದ್ದರಿಂದ ಅಲ್ಲಿ ತೋಡು ಬಾವಿಗಳನ್ನು ಮಾಡಬೇಕಾದ ಅವಶ್ಯಕತೆ ಇದೆ. ಇದರಲ್ಲಿ ಯಾವ ತಾರತಮ್ಯವು ಇಲ್ಲ. ಆ ಬಗ್ಗೆ ಯಾವುದೇ ಸಂಶಯ ಮಾನ್ಯ ಸದಸ್ಯರುಗಳ ಗಮನದಲ್ಲಿದ್ದರೆ ಅದನ್ನು ಮೊದಲು ಕಿತ್ತೊಗೆಯಬೇಕೆಂದು ನಾನು ಹೇಳುತ್ತೇನೆ. ನಾವು ಯಾವುದೇ ತಾರತಮ್ಯ ಮಾಡುವುದಿಲ್ಲವೆಂದು ಶ್ರೀ ಮಲ್ಲಿಕಾರ್ಜುನ ಖರ್ಗೆಯವರಿಗೆ ಗೊತ್ತು ಮುಂಚಿನ ಸರ್ಕಾರ 13 ಕೋಟಿ ರೂಪಾಯಿ ಅಂದಾಜು ಮಾಡಿತ್ತು. ಆದರೆ ನಾವು 26 ಕೋಟಿಗಳಿಗಿಂತಲೂ ಹೆಚ್ಚು ಕೆಲಸ ಮಾಡಿದ್ದೇವೆ. ಇದು ಹೇಗೆ ಆಗಿದೆ ಎಂಬುದು ಅವರಿಗೆ ಗೊತ್ತಿದೆ. ತ್ವರಿತ ಗತಿಯಲ್ಲಿ ಈ ಕೆಲಸ ಕಾರ್ಯಗಳನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ, (ಎನ್.ಆರ್.ಇ.ಪಿ.) ಯಲ್ಲಿ ಯಾವುದೇರೀತಿಯ ತಾರತಮ್ಯ ಇಲ್ಲದೆ ಮಾಡಿ ಮುಗಿಸಿದ್ದೇವೆ. ಇದು ಈ ಸಮಾಜಕ್ಕೆ ಜನಕ್ಕೆ ಅನುಕೂಲ ಆಗುವ ಕೆಲಸವಾಗಿದೆ.

ಎರಡನೆಯದು, ಮಾನ್ಯ ಸದಸ್ಯರಾದ ಶ್ರೀ ಅಡವಿಯಪ್ಪನವರು ಕೆಲವು ಕಡೆ ಬಾವಿ ತೋಡುವಾಗ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಹೇಳಿದರು. ಅವರು ನೀಡಿದ ಮತ್ತೊಂದು ಸಲಹೆಯಾದ ವಿಫಲವಾದ ಬಾವಿಗಳಿಂದ ಪೈಪುಗಳನ್ನು ತೆಗೆಯುವ ಬಗ್ಗೆ ನಾವು ಈಗಾಗಲೇ ನೋಡಿದೆವು. ಆದರೆ ತೋಡು ಬಾವಿಗಳಲ್ಲಿ ಬಹಳ ಒತ್ತಡ ಇರುತ್ತದೆ. ಮತ್ತು ಪೈಪುಗಳು ತುಂಬಾ ಒಳಗಡೆ ಹೋಗಿರುತ್ತವೆ 1.12 ಅಡಿ ಆಳದಷ್ಟು ಇರುವ ಪೈಪ್‌ನ್ನು ತೆಗೆಯಬಹುದೇ ಹೊರತು. ಇನ್ನೂ ಕೆಳಗಡೆ ಇರುವ ಪೈಪ್‌ನ್ನು ತೆಗೆಯಬೇಕಾದರೆ ಪವರ್ ಇಂಜಿನ್ ಸುಟ್ಟುಪಟ್ಟೆಯಾಗಿ ಮೇಲಕ್ಕೆ ಬರುತ್ತದೆ. ಹೀಗೆ ಪ್ರಯಾಸದಿಂದ ಪೈಪುಗಲನ್ನು ಹೊರ ತೆಗೆಯುವ ಖರ್ಚನ್ನು ಲೆಕ್ಕ ಹಾಕಿದರೆ, ಅದನ್ನು ಹಾಗೆಯೇ ಬಿಡುವುದೇ ಸೂಕ್ತವೆನಿಸುತ್ತದೆ. ಏಕೆಂದರೆ

ಹೀಗೆ ತೆಗೆದ ಪೈಪುಗಳನ್ನು ಯಾವ ಉಪಯೋಗಕ್ಕೂ ಬಳಸಿಕೊಳ್ಳಲಾಗದೆ ಗುಜರಿಗೆ ಹಾಕಬೇಕಾಗುತ್ತದೆ, ಈ ದೃಷ್ಟಿಯಿಂದ ಇದನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ.

ಇನ್ನು ಕೆಲವರು ಬಾವಿಗಳನ್ನು ತೋಡುವಾಗ 15.20 ಅಡಿ ಮಾತ್ರ ತೋಡುತ್ತಾರೆ. ಎಂದು ಆಪಾದನೆ ಮಾಡಿದ್ದಾರೆ. ನಾವು ಈಗ ಹೊಸದಾಗಿ ಆದೇಶವನ್ನು ಕೊಟ್ಟಿದ್ದೇವೆ; ಮತ್ತು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದೇವೆ ಮತ್ತು ನನ್ನ ಸನ್ಮಾನ್ಯ ಶಾಸಕರ ಮಿತ್ರರಿಗೂ ಹೇಳಿದ್ದೇನೆ. ಅದೇನೆಂದರೆ ಕೊಳವೆ ಬಾವಿಗಳನ್ನು ತೋಡುವ ಹಂತದಲ್ಲಿ ಆಯಾಯ ಗ್ರಾಮದ ಪ್ರಮುಖರ ಮುಂದೆ ಕೊಳವೆ ಬಾವಿಗಳನ್ನು ಹಾಕಬೇಕು, ಅವರ ಎದುರಿಗೆ ಬಾವಿಯನ್ನು ತೋಡುವಾಗ ಎಷ್ಟು ಆಳ ಆಗಿದೆ ಎಷ್ಟು ಪೈಪ್ ಹಾಕಿದೆ ಅಂತ ಮಹಜರು ಮಾಡಬೇಕು ಎಂದು ಹೀಗಿದ್ದರೂ ಕೂಡ ಕೆಲವು ಕಡೆ ಸ್ವಲ್ಪ ಹೆಚ್ಚು ಕಡಿಮೆಯಾಗಿ ನಡೆದಿರಬಹುದು, ಅಂತಹ ಯಾವುದಾದರೂ ಪ್ರಕರಣವನ್ನು ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ನನ್ನ ಗಮನಕ್ಕೆ ತಂದರೆ ನಾನು ಕೂಡಲೇ ಆಜ್ಞೆ ಮಾಡುತ್ತೇನೆ ಮತ್ತು ತಪ್ಪಿತಸ್ಥ ಅಧಿಕಾರಿಗಳಿಗೆ ಶಿಕ್ಷೆ ನೀಡಲು ಹಿಂದು ಮುಂದೆ ನೋಡುವುದಿಲ್ಲ ಎಂದು ಹೇಳಲು ಇಚ್ಛೆ ಪಡುತ್ತೇನೆ. ಶ್ರೀಮಾನ್ ಬಿ.ಎಸ್. ಯಡಿಯೂರಪ್ಪನವರು ಶಿಕಾರಿಪುರ ಮತ್ತು ಆನೇಕಲ್‌ನಲ್ಲಿ ನಡೆದ ದುರ್ವ್ಯವಾಹರಗಳ ಬಗ್ಗೆ ಹೇಳಿದ್ದಾರೆ ಶಿಕಾರಿಪುರದ ಬಗ್ಗೆ ಮೇಲ್ನೋಟಕ್ಕೆ ಸಾಬೀತಾಗಿ ನನ್ನ ಮುಂದೆ ಬಂತು, ಇದಕ್ಕೆ ಉತ್ತರವಾಗಿ ಸಂಬಂಧಪಟ್ಟ ಮೂರು ಮಂದಿ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡಲಾಗಿದೆ. ಆನೇಕಲ್ ವಿಷಯದಲ್ಲಿ ಯಾವ ರೀತಿಯಲ್ಲೂ ದುರ್ವ್ಯವಹಾರ ಸಾಬೀತಾ ವರದಿ ಬಂದಿಲ್ಲ. ಎಲ್ಲಾ ಆರೋಪಗಳೂ ಸಾಬೀತೂ ಆಗಿಲ್ಲವಾದ ಕಾರಣ ಏನು ಮಾಡಲೂ ಸಾಧ್ಯವಿಲ್ಲ.

ನಿರ್ಮಾಣವಾದ ಕೊಳವೆ ಬಾವಿಗಳ ಸಂಖ್ಯೆ :-

ಅಬ್ದುಲ್ ನಜೀರ್ ಸಾಬ್‌ರವರು ಕೊಳವೆ ಬಾವಿಗಳನ್ನು ತೋಡಿಸುವುದಕ್ಕಿಂತ ಮುಂಚೆ ಜನರು ಕುಡಿಯುವ ನೀರಿಗೆ ಕೆರೆಕಟ್ಟೆಗಳನ್ನು ಆಶ್ರಯಿಸುತ್ತಿದ್ದರು. ಈ ಕಲುಷಿತ ನೀರನ್ನು ಕುಡಿಯುತ್ತಿದ್ದುದರಿಂದ ಭೀಕರ ರೋಗರುಜಿನಗಳಿಗೆ ತುತ್ತಾಗುತ್ತಿದ್ದರು. ಇದನ್ನರಿತ ನಜೀರ್‌ಸಾಬ್ ಜನರಿಗೆ ಶುದ್ಧ ಕುಡಿಯುವ ನೀರಿನ ಪೂರೈಕೆ ಮಾಡುವ ದೃಢನಿರ್ಧಾರ ಕೈಗೊಂಡರು. ಅದಕ್ಕಾಗಿ ಬೋರ್‌ವೆಲ್‌ಗಳ ನಿರ್ಮಾಣಕ್ಕೆ ಕೈಹಾಕಿದರು. ಕೊಳವೆ ಬಾವಿ ನಿರ್ಮಾಣ ಕಾರ್ಯವನ್ನು ಇಡೀ ರಾಜ್ಯವಿಡೀ ಹಮ್ಮಿಕೊಂಡರು. ಇವರ ದೃಢಸಂಕಲ್ಪದ ಪರಿಣಾಮವಾಗಿ 1981-82ರಲ್ಲಿ ತೋಡಲಾದ ಬಾವಿಗಳ ಸಂಖ್ಯೆ 9235 ಇದ್ದುದು 1983-84ರ ವೇಳೆಗೆ 20,761ಕ್ಕೆ ಏರಿತು. ಪ್ರತಿ ಹಳ್ಳಿಗೂ ಒಂದಾದರೂ ಕೊಳವೆ ಬಾವಿ ಇರಬೇಕೆಂಬ ಅವರ ಸಂಕಲ್ಪ ಫಲಕಾರಿಯಾಯಿತು[18].

ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಸಮಗ್ರ ಬದಲಾವಣೆ:-

ಅಬ್ದುಲ್ ನಜೀರ್ ಸಾಬ್‌ರು ಸಚಿವರಾಗಿ ಅಧಿಕಾರ ವಹಿಸಿಕೊಂಡಾಗ ಈ ಇಲಾಖೆಗೆ ಸ್ಪಷ್ಟ ರೂಪುರೇಷೆ ಇರಲಿಲ್ಲ. ಇಲಾಖೆಯ ಒಬ್ಬ ಟೈಪಿಸ್ಟ್‌ನಿಂದ ಹಿಡಿದು ಜಿಯಾಲಜಿಸ್ಟ್‌ವರೆಗೆ ಬೇರೆ

ಇಲಾಖೆಯಿಂದ ಕರೆಸಿಕೊಳ್ಳಬೇಕಿತ್ತು. ಹಾಗೆಯೇ ಬೋರ್‌ವೆಲ್‌ಗಳು ರಿಪೇರಿಯಾದರೆ ಅವುಗಳನ್ನು ಸರಿ ಮಾಡುವ ಸಮಸ್ಯೆ ಕಾಡುತ್ತಿತ್ತು. ರಾಜ್ಯದ ಜನಸಂಖ್ಯೆ 3 ಕೋಟಿ ಇದ್ದರೂ ಪ್ರತಿ 500 ಮಂದಿಗೆ ಒಬ್ಬ ಮೆಕ್ಯಾನಿಕ್.ಇರುತ್ತಿದ್ದ. ಇದರಿಂದ ಒಬ್ಬ ಮೆಕ್ಯಾನಿಕ್ ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಹೋಗಿಬರಲು ಕನಿಷ್ಠ 250ದಿವಸ ಬೇಕಾಗಿತ್ತು.[19]

ಇಂತಹ ಪರಿಸ್ಥಿತಿಯಲ್ಲಿ ಗ್ರಾಮಮಟ್ಟದಲ್ಲಿ ಸಣ್ಣಪುಟ್ಟ ರಿಪೇರಿಗಳಿದ್ದರೆ ಮಾಡಿಕೊಳ್ಳಲು ಯುವಕರಿಗೆ ತರಬೇತಿ ಕೊಡುವುದು ತುಂಬಾ ಹಳೆಯದಾದ ಕೈಪಂಪುಗಳನ್ನು ಬದಲಾಯಿಸುವುದು ಮುಂತಾದ ಯೋಜನೆಗಳೊಂದಿಗೆ ತಮ್ಮ ಕಾರ್ಯವನ್ನು ಮುಂದುವರಿಸಿದರು. ಒಟ್ಟು ರಾಜ್ಯಾದ್ಯಂತ 140 ರಿಗ್ ಬೋರ್‌ವೆಲ್ ತೋಡುವ ಕಾರ್ಯದಲ್ಲಿ ತೊಡಗಿದವು. ಅಬ್ದುಲ್ ನಜೀರ್ ಸಾಬ್ ಸರ್ಕಾರ ಜನರಿಗೆ ಕುಡಿಯುವ ನೀರು ಪೂರೈಸುವಲ್ಲಿ ಹಿಂದೆ ಬೀಳುವುದಿಲ್ಲ ಎಂದು ಘೋಷಿಸಿದರು[19].

ಅದ್ಭುತ ಅನುಭವ:-

ಕರ್ನಾಟಕದ ಜನತೆಗೆ ಶುದ್ಧ ಕುಡಿಯುವ ನೀರಿನ ಪೂರೈಕೆ ಮಾಡುವ ದೃಢಸಂಕಲ್ಪ ಮಾಡಿದ ಅಬ್ದುಲ್ ನಜೀರ್ ಸಾಬ್ ರಾತ್ರಿ-ಹಗಲುಗಳ ಪರಿವೆಯಿಲ್ಲದೇ ತಮ್ಮ ಆರೋಗ್ಯವನ್ನು ಕಡೆಗಣಿಸಿ ಹಳ್ಳಿ ಹಳ್ಳಿಗಳಿಗೆ ಭೇಟಿ ನೀಡುತ್ತಿದ್ದರು. ಗ್ರಾಮಗಳಲ್ಲಿನ ಜನರ ಸಮಸ್ಯೆಗಳನ್ನು ಕಣ್ಣಾರೆ ಕಂಡು ಅವುಗಳಿಗೆ ಪರಿಹಾರ ಹುಡುಕಲು ಪ್ರಯತ್ನಿಸುತ್ತಿದ್ದರು.

ಒಮ್ಮೆ ಇದೇ ರೀತಿ ಬಿಜಾಪುರ-ರಾಯಚೂರು ಮದ್ಯ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಸಂದರ್ಭದಲ್ಲಿ ಕಾರಿನ ಚಕ್ರ ತೊಂದರೆ ಕೊಟ್ಟು ಚಾಲಕ ಚಕ್ರವನ್ನು ಬದಲಾಯಿಸುತ್ತಿರುತ್ತಾನೆ. ಸುಮಾರು ರಾತ್ರಿ 7.30ರ ಸಮಯ. ಸುಮಾರು 25 ಜನರ ಲಂಬಾಣಿ ಹೆಂಗಸರ ಗುಂಪೊಂದು ತಲೆ ಮೇಲೆ ಮಡಿಕೆಗಳನ್ನು ಇಟ್ಟುಕೊಂಡು ಹೋಗುತ್ತಿದ್ದರು. ಇದನ್ನು ಕುತೂಹಲದಿಂದ ಪ್ರಶ್ನಿಸಿದಾಗ ನಿಜಸಂಗತಿ ತಿಳಿದು ದಂಗಾದರು. ಕುಡಿಯುವ ನೀರಿಗಾಗಿ ಹೆಂಗಸರು ದಿನನಿತ್ಯ ಮೈಲುಗಟ್ಟಲೆ ಅಲೆಯುವ ದುಸ್ಥಿತಿಯಿಂದ ತುಂಬಾ ಮನನೊಂದರು. ಮರುದಿವಸವೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಸಲಹೆಯನ್ನು ನೀಡಿ ಬಹುಬೇಗ ಕೊಳವೆ ಬಾವಿ ತೋಡಿಸುವಂತೆ ನಿರ್ದೇಶಿಸಿದರು.

ನಜೀರ್‌ಸಾಬ್‌ರ ನಿರ್ದೇಶನದಂತೆ ಅವರಿಗೆ ಅತಿ ಶೀಘ್ರದಲ್ಲಿಯೇ ಅವರಿಗೆ ನೀರು ದೊರಕಿತು. ಆ ದಿನ ಲಂಬಾಣಿಗಳಿಗಾದ ಸಂತೋಷಕ್ಕೆ ಪಾರವೇ ಇಲ್ಲ. ಲಂಬಾಣಿಗಳು ಕೊಳವೆ ಬಾವಿ ತೋಡಲು ಬಂದಿದ್ದವರನ್ನು ಟ್ರಾಕ್ಟರ್‌ನಲ್ಲಿ ಕೂರಿಸಿ ಮೆರವಣಿಗೆ ಮಾಡಿದರು. ಆದರೆ ನಜೀರ್‌ಸಾಬ್ ಭಾಗವಹಿಸಲು ಸಾಧ್ಯವಾಗಲಿಲ್ಲ. ಆದರೇನಂತೆ ನಜೀರ್‌ಸಾಬ್‌ರಿಗೆ ಜನರ ಸಂತೋಷ ಮತ್ತು ಸಂಭ್ರಮದ ಬಗ್ಗೆ ಅಭಿಮಾನವಿತ್ತು[20].

ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆ:-

ಶ್ರೀಯುತ ಎಂ. ಮಲ್ಲಿಕಾರ್ಜುನ ಖರ್ಗೆಯವರು 1984-85ರಲ್ಲಿ ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆಯಲ್ಲಿ ಆಗಿರುವ ಕೆಲವು ಲೋಪ-ದೋಷಗಳ ಬಗ್ಗೆ ಸದನದಲ್ಲಿ ಸ್ಪಷ್ಟನೆ ಕೇಳಿದಾಗ ಅದಕ್ಕೆ ನಜೀರ್‌ಸಾಬ್ ಈ ಕೆಳಗಿನಂತೆ ಉತ್ತರಿಸುತ್ತಾರೆ.

1979-80ರಲ್ಲಿ ಜನತಾ ಸರ್ಕಾರ ಈ ಕಾರ್ಯಕ್ರಮವನ್ನು ರಾಷ್ಟ್ರೀಯವಾಗಿ ಚಿಂತನೆ ಮಾಡಿದ್ದು ಅದಕ್ಕೆ ಪರಿಣಿತರ ಸಮಿತಿಯ ಅಭಿಪ್ರಾಯವನ್ನು ಕೇಳಿತು. ದೇಶದಲ್ಲಿ 100ಕ್ಕೆ 50ರಷ್ಟು ಜನ ಬಡತನದ ರೇಖೆಗಿಂತ ಕೆಳಗಿದ್ದು ಇವರನ್ನು ಮೇಲಕ್ಕೆ ತರಬೇಕಾದರೆ ಪಂಚವಾರ್ಷಿಕ ಯೋಜನೆ ಜಾರಿಗೆ ತಂದು ವಾರ್ಷಿಕ 7 ಸಾವಿರ ಕೋಟಿ ರೂಪಾಯಿ ನಿಗದಿ ಪಡಿಸಿದರು. 1980-81ರಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದು ಯೋಜನೆಯ ಪದನಾಮವನ್ನು ಹಾಗೆಯೇ ಉಳಿಸಿಕೊಂಡು 7 ಸಹಸ್ರ ಕೋಟಿಗೆ ಬದಲಾಗಿ 2 ಸಾವಿರ ಕೋಟಿಗೆ ಇಳಿಸಿತು. ರಾಜ್ಯ ಸರ್ಕಾರ ತನ್ನ ಇತಿಮಿತಿಯೊಳಗೆ ಯೋಜನೆ ರೂಪಿಸಿ ಸಿದ್ಧಪಡಿಸಬೇಕು. ರಾಜ್ಯಸರ್ಕಾರ 7 ಕೋಟಿ, ಕೇಂದ್ರ ಸರ್ಕಾರ 7 ಕೋಟಿ, ಒಟ್ಟು 14 ಕೋಟಿ ಹಣದಿಂದ ಒಂದು ಲಕ್ಷ ಐದು ಸಾವಿರ ಸಂಸಾರಗಳಿಗೆ ಸಹಾಯ ಮಾಡಬಹುದು. ಸಮಗ್ರ ಗ್ರಾಮೀಣ ಅಭಿವೃದ್ಧಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಗ್ರಾಮಸಭೆ ಕರೆಯುತ್ತಾರೆ ಎಂದು ನಜೀರ್‌ಸಾಬ್ ತಿಳಿಸಿದರು. ಆಗ ಚೌಡಯ್ಯನವರು ನಮ್ಮಲ್ಲಿ ಗ್ರಾಮಸಭೆ ನಡೆಸದೆ ಆಯ್ಕೆ ಮಾಡಿದ್ದಾರೆ ಎಂದು ತಿಳಿಸಿದಾಗ ನಜೀರ್‌ಸಾಬ್‌ರು ನಾವು ಸ್ಪಷ್ಟವಾಗಿ ಆದೇಶ ಕೊಟ್ಟಿದ್ದೇವೆ. ಮುಂದಿನ ವರ್ಷ ರಾಜ್ಯಾದ್ಯಂತ ಜಾರಿಗೆ ತರುತ್ತೇವೆ. ಸದ್ಯ ಮೈಸೂರು, ಧಾರವಾಡದಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತಂದಿತ್ತು ಎಂದು ತಿಳಿಸಿದರು.

ಜೀತ ವಿಮುಕ್ತರಿಗೆ ಪುನರ್‌ವಸತಿ:-

ಅಧಿಕಾರ ಪಡೆಯುವುದಕ್ಕಾಗಿ ಎಂಥ ನೀಚ ಕಾರ್ಯಮಾಡುವ ಬಹುಸಂಖ್ಯಾತರೇ ತುಂಬಿರುವ ಈ ಸಮಾಜದಲ್ಲಿ ಅಲ್ಪಸಂಖ್ಯಾತರಲ್ಲೊಬ್ಬರಾದ ನಜೀರ್‌ಸಾಬ್‌ರು ಅಧಿಕಾರವನ್ನು ದಾಟಿ ನಿಂತಿದ್ದ ವ್ಯಕ್ತಿಯಾಗಿದ್ದರು. ನಜೀರ್‌ಸಾಬ್‌ರದ್ದು ತತ್ವನಿಷ್ಠ ಜೀವನ. ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಡಿ. ದೇವರಾಜ ಅರಸು ತಮ್ಮ ಅಧಿಕಾರಾವಧಿಯಲ್ಲಿ ದೀನದಲಿತರಿಗೆ ನಡೆಸಿದ ಹೋರಾಟ ಹಾಗೂ ಕೈಗೊಂಡ ದಿಟ್ಟ ಹೆಜ್ಜೆಗಳು ಇಂದಿಗೂ ಹಸಿರಾಗಿವೆ. ಇಂದಿರಾ ಗಾಂಧಿಯವರು ಇಪ್ಪತ್ತು ಅಂಶಗಳ ಕಾರ್ಯಕ್ರಮ ದೇಶದಲ್ಲೇ ಯಶಸ್ವಿಯಾದದ್ದು ಕರ್ನಾಟಕದಲ್ಲಿ ಮಾತ್ರ. ಇಪ್ಪತ್ತು ಅಂಶಗಳ ಕಾರ್ಯಕ್ರಮದಲ್ಲಿ ಜೀತಪದ್ಧತಿಯ ನಿರ್ಮೂಲನೆ ಮತ್ತು ಜೀತ ವಿಮುಕ್ತರಿಗೆ ಪುನರ್‌ವಸತಿ ಕಲ್ಪಿಸುವುದು ಪ್ರಮುಖ ಅಂಶವಾಗಿತ್ತು.

ಅದರಂತೆ ನಜೀರ್‌ಸಾಬ್‌ರು ಸಹ. ಕರ್ನಾಟಕದಲ್ಲಿ ಡಿ.ದೇವರಾಜ ಅರಸು ಅವರ ಆಳ್ವಿಕೆಯ ಅವಧಿಯಲ್ಲಿ ಜೀತವಿಮುಕ್ತರಾದವರಿಗೆ ಪುನರ್‌ವಸತಿ ಕಲ್ಪಿಸಿದರು. ಅಬ್ದುಲ್ ನಜೀರ್ ಸಾಬರು ರಾಜ್ಯದಲ್ಲಿ 62,666 ಜನ ಜೀತವಿಮುಕ್ತರನ್ನು ಗುರುತಿಸಿ ಅವುಗಳಲ್ಲಿ 29.038 ಜನರಿಗೆ ಪುನರ್‌ವಸತಿ ಕಲ್ಪಿಸಲಾಯಿತು.

1986ರ ವೇಳೆಯಲ್ಲಿ ಪ್ರಾರಂಭದಿಂದ **1986**ರ ವೇಳೆಯವರೆಗೆ ಪುನರ್‌ವಸತಿ ಯೋಜನೆಯಲ್ಲಿ ನೆರವು ಪಡೆದ ಫಲಾನುಭವಿಗಳ ಜಿಲ್ಲಾವಾರು ಅಂಕಿ - ಅಂಶ ಹೀಗಿವೆ.

1.	ಬೆಂಗಳೂರು ಜಿಲ್ಲೆ	3869
2.	ಬೆಳಗಾಂ	10
3.	ಬಳ್ಳಾರಿ	575
4.	ಬೀದರ್	10
5.	ಬಿಜಾಪುರ	202
6.	ಚಿಕ್ಕ ಮಗಳೂರು	2308
7.	ಚಿತ್ರದುರ್ಗ	972
8.	ದಕ್ಷಿಣ ಕನ್ನಡ	264
9.	ಗುಲ್ಬರ್ಗಾ	47
10.	ಹಾಸನ	3012
11.	ಕೊಡಗು	50
12.	ಕೋಲಾರ	1428
13.	ಮಂಡ್ಯ	1888
14.	ಮೈಸೂರು	6428
15.	ಶಿವಮೊಗ್ಗ	5938
16.	ತುಮಕೂರು	2022
17.	ಉತ್ತರ ಕನ್ನಡ	15
	ಒಟ್ಟು	**29038**

ಇದು ಕೇಂದ್ರ ಸರ್ಕಾರದ ಯೋಜನೆ ಆಗಿರುವುದರಿಂದ ಜಿಲ್ಲಾ ಮಟ್ಟದಲ್ಲಿ ಒಂದು ಸಮಿತಿ ತಾಲ್ಲೂಕು ಮಟ್ಟದಲ್ಲಿ ಒಂದು ಉಪ ಸಮಿತಿ ರಚಿಸಲಾಯಿತು.

ಮಂಡಲ ಪಂಚಾಯ್ತಿಗಳಿಗೆ ಸಹಾಯಧನ:

ಶ್ರೀಯುತ ಅಬ್ದುಲ್ ನಜೀರ್ ಸಾಬ್‌ರವರು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಾಗಿ ಅಧಿಕಾರ ವಹಿಸಿ ಕೊಂಡ ಮೇಲೆ ಅಧಿಕಾರ ವಿಕೇಂದ್ರಿಕರಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದರು. ಪ್ರತಿಯೊಂದು ಮಂಡಲ ಪಂಚಾಯಿತಿಯಲ್ಲಿ ಜನ ಸಂಖ್ಯೆಯ ಆಧಾರದ ಮೇಲೆ ಅನುದಾನವನ್ನು ನೀಡಲು ವ್ಯವಸ್ಥೆ ಮಾಡಿದರು. ಪ್ರಾರಂಭದ ದಿನಗಳಲ್ಲಿ ಬೇರೆ ಬೇರೆ ಮನೆಗಳಲ್ಲಿ ಕಛೇರಿ ಮಾಡಿಕೊಂಡು ಪಂಚಾಯ್ತಿಗಳನ್ನು ಪ್ರಾರಂಭಿಸಿದರು.

ಮಂಡಲ ಪಂಚಾಯಿತಿ ಸಾವಿರಾರು ಇದ್ದುದರಿಂದ ಏಕ ಕಾಲದಲ್ಲಿ ಕಟ್ಟಡ ನಿರ್ಮಾಣ ಮಾಡಲು ಸಾಧ್ಯವಿರಲಿಲ್ಲ. ಪ್ರತಿಯೊಂದು ಮಂಡಲ ಇರುವ ಕೇಂದ್ರದಲ್ಲಿ ಒಂದೇ ಮಾದರಿಯ ಕಛೇರಿಗಳು ನಿರ್ಮಾಣವಾಗಬೇಕೆಂಬ ಆಶಯ ಹೊಂದಿ ಹೊಸ ವಿನ್ಯಾಸ ತಯಾರಿಸಲು ಸೂಚನೆ ನೀಡಿದರು.

ಮಂಡಲ ಪಂಚಾಯತ್‌ಗೆ ನಾವು ನೀಡಿರುವ ಸಹಾಯಧನ ಅವರದೇ ಆದ ಹಣ ನಿಮ್ಮ ಯೋಜನೆಯಲ್ಲಿ ಶೇ. 40ರಷ್ಟು ಹಣವನ್ನು ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್‌ಗೆ ನೀಡುತ್ತಿವೆ ಈ ಅಂದಾಜಿನ ಪ್ರಕಾರ ಪ್ರತಿ ಪಂಚಾಯಿತಿಗೆ 10 ಲಕ್ಷ ರೂಗಳು ಸಿಗುತ್ತವೆ ಎಂದು ಪ್ರತಿ ಪಾದಿಸಿರು.

ಅಧಿಕಾರ ವಿಕೇಂದ್ರಿಕರಣ ವಿಧೇಯಕವನ್ನು ಬಹಳ ಕಷ್ಟಪಟ್ಟು ಸಿದ್ಧಪಡಿಸಿದರು ಅದಕ್ಕಾಗಿ ಹಲವರ ಸಹಾಯವನ್ನು ಪಡೆದುಕೊಂಡರು. ಆದರೆ ಈ ವಿದೇಯಕಕ್ಕೆ ಮೊದಲು ವಿಧಾನ ಮಂಡಲದಲ್ಲಿಯೇ ತಕರಾರು ಉಂಟಾಯಿತು. ನಂತರ ವಾದ ವಿವಾದಗಳಾದ ನಂತರ ಒಪ್ಪಿಗೆ ಸಿಕ್ಕಿತು.[21]

ವಿಧಾನ ಮಂಡಲದಲ್ಲಿ ಒಪ್ಪಿಗೆ ಪಡೆದ ನಂತರ ರಾಷ್ಟ್ರಪತಿಗಳ ಮುದ್ರೆ ಇದಕ್ಕೆ ಅನಿವಾರ್ಯವಾಗಿತ್ತು. 15 ತಿಂಗಳ ಕಾಲ ವಿಧೇಯಕ ರಾಷ್ಟ್ರಪತಿ ಭವನದಲ್ಲಿ ಕೊಳೆಯಿತು ರಾಷ್ಟ್ರಪತಿಗಳಿಂದ ವಿಧೇಯಕಕ್ಕೆ ಸಹಿ ಆಗಲಿಲ್ಲ. ಇದರಿಂದ ಕೆರಳಿದ ನಜೀರ್ ಸಾಬ್ ರಾಷ್ಟ್ರಪತಿ ವಿದೇಯಕಕ್ಕೆ ಸಹಿ ಹಾಕದಿದ್ದರೆ ಅವರ ಮನೆಯ ಮುಂದೆ ಉಪವಾಸ ಸತ್ಯಗ್ರಹ ಹೂಡುವುದಾಗಿ ಗುಡುಗಿದರು ಅಷ್ಟೇ ಅಲ್ಲ ನನಗೆ ಸಚಿವ ಪದವಿ ಮುಖ್ಯವಲ್ಲ ಅದಕ್ಕೂ ರಾಜೀನಾಮೆ ಕೊಡುತ್ತೇನೆಂದು ಘೋಷಿಸಿದರು.

ಅಧಿಕಾರ ವಿಕೇಂದ್ರಿಕರಣದ ವಿಚಾರದಲ್ಲಿ ಅವರು ಉಗ್ರರಾಗಿದ್ದರು. ವಿಕೇಂದ್ರಿಕರಣದ ಬಗ್ಗೆ ದ್ವಂದ್ವ ಮಾತಾಡುವವರನ್ನು ಖಂಡಿಸುತ್ತಿದ್ದರು. 20 ವರ್ಷಗಳ ಹಿಂದೆ ಇದೇ ಖಾತೆಯಲ್ಲಿದ್ದು ಸಾಧಿಸಲಾಗದಿದ್ದುದ್ದನ್ನು ನಜೀರ್ ಸಾಬ್ ಸಾಧಿಸಿದರು.

ನಜೀರ್ ಸಾಬರು ದೇಶವಿಡೀ ಸಾಕಷ್ಟು ಸುತ್ತಾಡಿದ್ದರು. ದೇಶದ ನಾನಾ ಹಿರಿಯ ಮುಖಂಡರುಗಳೊಂದಿಗೆ ಸಂಪರ್ಕರವಿರಿಸಿಕೊಂಡಿದ್ದರು. ಇವರಲ್ಲಿ ಮುಖ್ಯವಾಗಿ ಹಿಂದೆ ಕೇಂದ್ರ ಸರ್ಕಾರದಲ್ಲಿ ಅಭಿವೃದ್ಧಿ ಸಚಿವರಾಗಿದ್ದ ಜಿಲ್ಲಾ ಪರಿಷತ್ತಿನ ತತ್ವಗಳಲ್ಲಿ ಸಿದ್ಧಹಸ್ತರಾಗಿದ್ದ ಎಸ್.ಕೆ.ಡೇ ಅವರೊಡನೆ ನಿಕಟವಾದ ಸಂಪರ್ಕ ಹೊಂದಿದ್ದರು. ಜಿಲ್ಲಾ ಪರಿಷತ್ತಿನ ಕಾಯಿದೆಗಳನ್ನು ಕರ್ನಾಟಕದಲ್ಲಿ ಚುನಾವಣೆಗಳ ಮುನ್ನ ಎಸ್.ಕೆ.ಡೇ ಅವರನ್ನು ಕರ್ನಾಟಕ್ಕೆ ಕರೆಸಿ ರಾಜ್ಯದ ಉದ್ದಗಲಕ್ಕೂ ಪರಿಚಯ ಮಾಡಿಸಿದ್ದರು.

ಕರ್ನಾಟಕದ ಜನತೆ ಹಾಗೂ ನೈಸರ್ಗಿಕ ಸಂಪತ್ತನ್ನು ಕಂಡು ಸಂತೋಷದಿಂದ ಎಸ್.ಕೆ.ಡೇ ಅವರು ಜಿಲ್ಲಾ ಪರಿಷತ್‌ನ ಕಾಯಿದೆಗಳನ್ನು ಈ ರಾಜ್ಯದಲ್ಲಿ ಅಳವಡಿಸಲು ಸಹಕಾರಿಯಾಗಿದೆ ಎಂದು ಅಭಿಪ್ರಾಯ ಪಟ್ಟರು [22]

ಹೀಗೆ ನಜೀರ್ ಸಾಬ್‌ರವರು ಮಂಡಲ ಪಂಚಾಯ್ತಿ ಮತ್ತು ಜಿಲ್ಲಾ ಪರಿಷತ್‌ಗಳ ರಚನೆಯಲ್ಲಿ ವಹಿಸಿದ ಪಾತ್ರ ಅತ್ಯಂತ ಮಹತ್ವವಾದುದು.

84-85 ರ ಬಜೆಟ್ ಬಗೆಗಿನ ಚರ್ಚೆ

ಶ್ರೀ ಅಬ್ದುಲ್ ನಜೀರ್ ಸಾಬ್ - ಮಾನ್ಯ ಸಭಾಪತಿಯವರೇ, 7 ದಿನಗಳ ಚರ್ಚೆಯಲ್ಲಿ 11 ಜನ ಸನ್ಮಾನ್ಯ ಸದಸ್ಯರುಗಳು ಸುಮಾರು 16ಗಂಟೆ 32 ನಿರ್ಮಿಷಗಳ ಕಾಲ ಧೀರ್ಘವಾಗಿ ಚರ್ಚೆ ಮಾಡಿದ್ದಾರೆ.. 1984-85 ನೇ ಸಾಲಿನ ಆಯವ್ಯಯ ಪತ್ರದ ಮೇಲೆ ಮಾನ್ಯ ಸದಸ್ಯರು ಮಾತನಾಡತಕ್ಕಂಥ ಸಮಯದಲ್ಲಿ ಹೆಚ್ಚಿನ ಸದಸ್ಯರು ಹೆಚ್ಚು ಖೋತಾ ಬಜೆಟ್‌ನ್ನು ಮಂಡನೆ ಮಾಡಿದ್ದಾರೆ. ಆರ್ಥಿಕ ವ್ಯವಸ್ಥೆಯಲ್ಲಿ ದಿವಾಳಿತನ ತೋರಿಸಿದ್ದಾರೆ, ರಾಜ್ಯ ಮತ್ತು ಕೇಂದ್ರದ ಸಂಬಂಧದಲ್ಲಿ ಇಲ್ಲದೆ ಕೆಲವು ಪ್ರಶ್ನೆಗಳನ್ನು ಎತ್ತಿಕೊಂಡು ಕೇಂದ್ರದೊಡನೆ ಜಗಳ ಮಾಡುತ್ತಿದ್ದಾರೆ. ಎಂಬಂತಕ್ಕಂಥ ಮಾತುಗಳನ್ನು ಹೇಳಿದ್ದಾರೆ. ಮಾನ್ಯ ಸುಬ್ಬಯ್ಯನವರು ಮಾತನಾಡುವಾಗ ಈ ಬಡ್ಜೆಟ್ ಪಟ್ಟಭದ್ರ ಹಿತಾಸಕ್ತಿಗಳಿಂದ ಮುಕ್ತವಾಗಿಲ್ಲ ಇದು ಪಟ್ಟ ಭದ್ರಹಿತಾಸಕ್ತಿಗಳ ಸಂಕೋಲೆಗೆ ಸಿಕ್ಕಿದೆ. ಈ ಸರ್ಕಾರ ಬಡಜನರ ಸಲುವಾಗಿ ಕೆಲಸ ಮಾಡುತ್ತಿಲ್ಲವೆಂಬ ಆರೋಪವನ್ನು ಮಾಡಿದ್ದರು. ತೆರಿಗೆ ಹೊರೆ ಜಾಸ್ತಿಯಾಯಿತು. ಮತ್ತು ಇದರಲ್ಲಿ ಅನೇಕ ರೀತಿಯ ದೋಷಗಳಿವೆ ಎಂದೂ ಸಹ ಹೇಳಿದ್ದಾರೆ. ಇನ್ನೂ ಕೆಲವು ನನ್ನ ಮಿತ್ರರು ಮಾತನಾಡುವಾಗ ಜನಹಿತಕ್ಕಾಗಿ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ ಮತ್ತು ಆಡಳಿತಾತ್ಮಕವಾಗಿ ಕೆಲವೊಂದು ಲೋಪಗಳಿವೆ ಎಂದು ಕೆಲವು ನಿದರ್ಶನಗಳನ್ನು ಕೊಟ್ಟು ಮಾತನಾಡಿದರು. ಮತ್ತೆ ಕೆಲವರು ಕೆಲವೊಂದು ಇಲಾಖೆಗಳ ಬಗ್ಗೆ ನೇರವಾದಂಥ ಆಪಾದನೆ ಮಾಡಿದರು. ಈ ಆಪಾದನೆಗಳಿಗೆ ಸಂಬಂಧಪಟ್ಟಂತೆ ಈಗಾಗಲೇ ಇಬ್ಬರು ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಮುಖ್ಯವಾಗಿ ಈ ಖೋತಾ ಬಡ್ಜೆಟ್ ಏತಕ್ಕೆ ಆಯಿತು ಎಂಬ ಬಗ್ಗೆ ನಾನು ಉತ್ತರ ಕೊಡುತ್ತೇನೆ. ರಾಜ್ಯದ ಜನತೆಗೆ ಒಳ್ಳೆಯ ಬಡ್ಜೆಟ್‌ನ್ನು ಕೊಡಬೇಕೆಂದುಕೊಂಡು ಆರ್ಥಿಕ ಮಂತ್ರಿಗಳಾದವರು ಯಾವಾಗಲೂ ಅಪೇಕ್ಷೆ ಪಡುತ್ತಾರೆ. ನಮ್ಮ ರಾಜ್ಯದ ಆರ್ಥಿಕ ಪ್ರಗತಿ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಬಡೆಜ್ಟ್‌ನ್ನು ತಯಾರು ಮಾಡಬೇಕಾಗುತ್ತದೆ. ನಮ್ಮ ಒಂದು ಸಂಪನ್ಮೂಲಗಳು ಹಾಗೂ ನಾವು ಹಾಕಿಕೊಂಡಿರುವ ಗುರಿಯನ್ನು ಮುಟ್ಟಬೇಕಾದ ಸಂದರ್ಭದಲ್ಲಿ ಇಂತಹ ಒಂದು ಬಜೆಟ್ ಮಂಡಿಸಿರುವಾಗ ಈ ರಾಜ್ಯದ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳಲು ಸಾಧ್ಯವಾಗುವುದಿಲ್ಲ ಎನ್ನತಕ್ಕಂಥವಾದ ಸರಿಯಾದುದಲ್ಲ. ಇಷ್ಟೊಂದು ಆರ್ಥಿಕ ಖೋತಾ ಆಗಲು ಕಾರಣವೇನೆಂಬ ಬಗ್ಗೆ ನಾನು ಕೆಲವು ಅಂಕಿ ಅಂಶಗಳನ್ನು ವಿರೋಧ ಪಕ,ಧ ನಾಯಕರಿಗೆ ಮತ್ತು ಇತರ ಮಾನ್ಯ ಸದಸ್ಯರಿಗೆ ಕೊಡ ಬಯಸುತ್ತೇನೆ. 1983-84 ರಲ್ಲಿ ಪ್ರಾರಂಭವಾದ ಶಿಲು 44 ಕೋಟಿ ರೂಪಾಯಿಗಳು 1983-84 ರಲ್ಲಿ ನಮ್ಮ ಯೋಜನಾ ಗಾತ್ರ 575ಕೋಟಿ ರೂಪಾಯಿಗಳಿತ್ತು. ಆದರೆ ನಾವು ಇದಕ್ಕೆ ಬದಲು 630 ಕೋಟಿ ಖರ್ಚು ಮಾಡಿದ್ದೇವೆ. ಬಡ್ಡಿ ಬಾಬತ್ತು ಹೆಚ್ಚುವರಿಯಾಗಿ 8 ಕೋಟಿ ರೂಪಾಯಿಗಳನ್ನು ಹೆಚ್ಚು ಮತ್ತು ಪೆನ್‌ಷನ್ ಬಾಬತ್ತು 8 ಕೋಟಿ ರೂಪಾಯಿಗಳೆಂದು ಯೋಜನಾ ಆಯೋಗದವರು ತೀರ್ಮಾನ ಮಾಡಿದ್ದಾರೆ. ಇದು ಪ್ರಸಕ್ತ ವರ್ಷದ ಯೋಜನಾ ಚೌಕಟ್ಟಿಗಿಂತ 75 ಕೋಟಿ ರೂಪಾಯಿಗಳನ್ನು ಮತ್ತು ಕಾವೇರಿ ಬೆಸನ್ ಯೋಜನೆಗಳ ಸಲುವಾಗಿ 25 ಕೋಟಿ ರೂಪಾಯಿಗಳನ್ನು ಹೆಚ್ಚಾಗಿ ಖರ್ಚು ಮಾಡುತ್ತಿರುವ ಕಾರಣದಿಂದ ಇಷ್ಟೊಂದು ಹೆಚ್ಚುವರಿ ಖೋತಾವನ್ನು ತೋರಿಸಲಾಗಿದೆ. ಆದ್ದರಿಂದ ನಮ್ಮ ರಾಜ್ಯದ ಅಭಿವೃದ್ಧಿ ಕಾರ್ಯಗಳನ್ನು ಹಿಂದಕ್ಕೆ

ತಳ್ಳುತ್ತಿದ್ದೇವೆಂಬ ವಾದ ಸರಿಯಲ್ಲ ಈ ಒಂದು ಹಿನ್ನೆಲೆಯಲ್ಲಿ ಈ ಖೋತಾ ಬಜೆಟ್‌ನ್ನು ನೋಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಇದೊಂದು ಪ್ರಗತಿ ದಾಯಕವಾದಂಥ ಬಜೆಟ್ ಅಲ್ಲ, ಇದು ಶ್ರೀಮಂತರ ಪರವಾಗಿದೆಯೇ ಹೊರತು ಬಡವರ ಪರವಾಗಿಲ್ಲ ಮತ್ತು ಇಪ್ಪತ್ತು ಅಂಶಗಳ ಕಾರ್ಯಕ್ರಮದ ಬಗ್ಗೆ ಇದರಲ್ಲಿ ಒಂದು ಚಕಾರ ಕೂಡ ಹೇಳಿಲ್ಲವೆಂದು ಹೇಳಿದರು. 20ಅಂಶಗಳ ಕಾರ್ಯಕ್ರಮದ ಬಗ್ಗೆ ಇವೊತ್ತು ರಾಜ್ಯದಲ್ಲಿ ಆಗಿರುವಂತಹ ಪ್ರಗತಿಯ ಬಗ್ಗೆ ಹೇಳಬೇಕೆಂದರೆ, ಇದು ನಾವು ಸಹ ಒಪ್ಪಿರುಂತಹ ಕಾರ್ಯಕ್ರಮವಾಗಿದೆ. ಮತ್ತು ಇದು ಸಾಮಾನ್ಯ ಜನರಿಗೆ ಅನುಕೂಲವಾಗುವಂತಹ ಕಾರ್ಯಕ್ರಮ ಎನ್ನುವುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ ಆದ್ದರಿಂದ ಇದನ್ನು ಜಾರಿಗೆ ತರಬೇಕೆಂಬ ದೃಷ್ಟಿಯಿಂದಲೇ ಕೆಲವೊಂದು ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ. ಈ ಇಪ್ಪತ್ತು ಅಂಶಗಳ ಕಾರ್ಯಕ್ರಮದ ಬಗ್ಗೆ ಇಲ್ಲಿವರೆಗೆ ಆಗಿರುವಂತಹ ಪ್ರಗತಿಯ ಬಗ್ಗೆ ಒಂದೊಂದು ಅಂಶವನ್ನೇ ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ಇರಿಗೇಷನ್‌ನಲ್ಲಿ ಕಳೆದ ಸಲ 64 ಪರ್ಸೆಂಟ್ ಪ್ರಗಿತಿಯಾಗಿದ್ದರೆ ಈ ವರ್ಷ 117 ಪರ್ಸೆಂಟ್ ಪ್ರಗತಿಯಾಗಿದೆ. ಬೇಳೆಕಾಳುಗಳ ಉತ್ಪಾದನೆಯಲ್ಲಿ ಕಳೆದ ವರ್ಷ 55 ಪರ್ಸೆಂಟ್ ಪ್ರಗತಿಯಾಗಿದ್ದರೆ, ಈ ಸಲ ನೂರು ಪರ್ಸೆಂಟ್ ಪ್ರಗತಿಯಾಗಿದೆ. ಎಣ್ಣೆ ಬೀಜಗಳ ಉತ್ಪಾದನೆಯಲ್ಲಿ ಕಳೆದ ಸಲ 60 ಪರ್ಸೆಂಟ್ ಇದ್ದರೆ ಈಸಲ ನೂರು ಪರ್ಸೆಂಟ್ ಆಗಿದೆ. ಐ.ಆರ್.ಡಿ.ಪಿ.ಯಲ್ಲಿ 170 ಪರ್ಸೆಂಟ್ ಪ್ರಗತಿಯಾಗಿದೆ. ಕಳೆದ ವರ್ಷ ನಾವು ಆಡಳಿತ ನಡೆಸಿದ್ದು 3 ತಿಂಗಳು ಮಾತ್ರ ಈ ಅವಧಿಯಲ್ಲಿ 60 ಪರ್ಸೆಂಟ್ ಪ್ರಗತಿಯಾಗಿದ್ದರೆ ಇದಕ್ಕೂ ಮೊದಲಿನ 9 ತಿಂಗಳಲ್ಲಿ 110 ಪರ್ಸೆಂಟ್ ಪ್ರಗತಿಯಾಗಿತ್ತು. ಈ ಸಾಲಿನಲ್ಲಿ ನೂರು ಪರ್ಸೆಂಟ್ ಪ್ರಗತಿಯಾಗಿದೆ. ಎನ್.ಆರ್.ಇ.ಪಿ. ಯಲ್ಲಿ 135 ಪರ್ಸೆಂಟ್ ಪ್ರಗತಿ ಕಳೆದ ಸಲ ಆಗಿದ್ದರೆ ಈ ಸಲ 111 ಪರ್ಸೆಂಟ್‌ವರೆಗೆ ಆಗಿದೆ. ಕಳೆದ ಸಲ 6 ಪರ್ಸೆಂಟ್‌ವರೆಗೆ ಸರ್‌ಪ್ಲಸ್ ಲ್ಯಾಂಡನ್ನು ಅಲಾಟ್ ಮಾಡಿದ್ದರೆ, ಈ ಸಲ 13 ಪರ್ಸೆಂಟ್ ಮಾತ್ರ ಆಗಿದೆ.

ಒಂದು ಲಕ್ಷ 75 ಸಾವಿರ ಎಕರೆ ಹೆಚ್ಚುವರೆ ಭೂಮಿಗೆ ಸಂಬಂಧಪಟ್ಟಂತೆ ಮುಖ್ಯ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವುದರಿಂದ ನಾವು ಹೆಚ್ಚುವರಿ ಭೂಮಿಯನ್ನು ಹಂಚಲು ಸಾಧ್ಯವಾಗಿಲ್ಲ. ಆರ್ಥಿಕವಾಗಿ ಹರಿಜನರಿಗೆ ಏನು ಸಹಾಯ ಮಾಡಿದ್ದೀರಿ ಎಂದು ಕೇಳಿದ್ದಾರೆ. ಕಳೆದ ಸಲ ನಾವು ಶೇಕಡಾ 59 ರಷ್ಟು ಆರ್ಥಿಕ ಸಹಾಯವನ್ನು ಹರಿಜನರಿಗೆ ಮಾಡಿದ್ದರೆ ಈ ಸಲ ನಾವು ಶೇಕಡಾ ನೂರರಷ್ಟು ಗುರಿಯನ್ನು ಮುಟ್ಟಿದ್ದೇವೆ. ಕಳೆದ ಸಲ ಷೆಡ್ಯೂಲ್ - ಟ್ರೈಬ್ಸ್‌ಗೆ ಶೇಕಡಾ 50 ರಷ್ಟು ಆರ್ಥಿಕ ಸಹಾಯ ಮಾಡಿದ್ದರೆ ಈ ಸಲ ಶೇಕಡಾ ನೂರರಷ್ಟು ಗುರಿಯನ್ನು ಮುಟ್ಟಿದ್ದೇವೆ ಕುಡಿಯುವ ನೀರನ್ನು ಒದಗಿಸುವ ವಿಚಾರದಲ್ಲಿಯೂ ಸಹ ನಾವು ಶೇ. ನೂರರಷ್ಟು ಸಾಧನೆ ಮಾಡಿದ್ದೇವೆ. 1981ರಲ್ಲಿ ಕುಡಿಯುವ ನೀರಿನ ವಿಚಾರದಲ್ಲಿ ಸಮಸ್ಯಾತ್ಮಕ ಹಳ್ಳಿಗಳೆಂದು ಯಾವ ಯಾವ ಹಳ್ಳಿಗಳನ್ನು ಗುರುತು ಮಾಡಲಾಗಿತ್ತೋ, ಆ ಹಳ್ಳಿಗಳೆಲ್ಲಾ ಒಂದು ವರ್ಷ ಮುಂಚೆಯೇ ನೀರನ್ನು ಒದಗಿಸಲಾಗಿದೆ ಎಂಬ ಮಾತನ್ನು ಇಲ್ಲಿ ಸಂತೋಷದಿಂದ ತಿಳಿಸುವುದಕ್ಕೆ ಇಷ್ಟಪಡುತ್ತಿದ್ದೇನೆ. ಆರನೆ ಪಂಚವಾರ್ಷಿಕ ಯೋಜನೆ ಮಾರ್ಚ್ 1985ಕ್ಕೆ ಮುಗಿಯುತ್ತದೆ. ಈ

ಅವಧಿಯಲ್ಲಿ ನಾವು ಈ ಸಮಸ್ಯಾತ್ಮಕ ಹಳ್ಳಿಗಳಿಗೆ ನೀರನ್ನು ಒದಗಿಸಬೇಕಾಗಿತ್ತು. ಆದರೆ ನಾವು ಒಂದು ವರ್ಷ ಮುಂಚಿತವಾಗಿಯೇ ಈ ಗುರಿಯನ್ನು ಮುಟ್ಟಿದ್ದೇವೆ.

ಮತ್ತೆ ಹೌಸ್ ಟು ಸೈಟ್‌ಲೆಸ್ ಶೇಕಡ 88ರಷ್ಟು ಇತ್ತು ಆದರೆ ಈಗ ಅದು ಸುಮಾರು ಶೇಕಡ 100ರಷ್ಟು ಗುರಿಯನ್ನು ಮುಟ್ಟಿದೆ. ಮತ್ತೆ ಕನ್‌ಸ್ಟ್ರಕ್ಷನ್ ಅಸಿಸ್ಟೆಂಟ್ಸ್ ಪ್ರೈವೇಡೆಡ್ ಕಳೆದ ಸಾರಿ ಶೇಕಡ 48ರಷ್ಟು ಇತ್ತು. ಆದರೆ ನಾವು ಈ ಸಾರಿ ಶೇಕಡ 100 ರಷ್ಟು ಮಾಡಿದ್ದೇವೆ. ಮತ್ತೆ ಸ್ಲಮ್ಸ್ ಕವರ್ಡ್ ಕಳೆದ ಸಾರಿ 104 ಪರ್ಸೆಂಟ್ ಇತ್ತು ಆದರೆ ಅದು ಈ ಸಾರಿ 174 ಪರ್ಸೆಂಟ್ ಆಗಿದೆ ಮತ್ತೆ ವಿಲೇಜ್ ಎಲೆಕ್ಟ್ರಿಫೈಡ್ ಶೇಕಡ61 ಪರ್ಸೆಂಟ್ ಇತ್ತು ಆದರೆ ಅದು ಈ ಸಾರಿ ಸುಮಾರು 160 ಪರ್ಸೆಂಟ್ ಆಗಿದೆ. ಮತ್ತೆ ಪಂಪ್‌ಸೆಟ್ಸ್ ಎನರ್‌ಜೈಸ್‌ಡ್ ಶೇಕಡ102 ರಷ್ಟು ಇತ್ತು ಆದರೆ ನಾವು ಈ ಸಾರಿ 148 ರಷ್ಟು ಹೆಚ್ಚು ಮಾಡಿದ್ದೇವೆ. ಮತ್ತು ಟ್ರೀಸ್ ಪ್ಲಾಂಟೆಡ್ ಶೇಕಡ 90ರಷ್ಟು ಹಿಂದೆ ಇತ್ತು. ಆದರೆ ನಾವು ಈ ಸಾರಿ 112 ರಷ್ಟು ಸಾಧನೆ ಮಾಡಿದ್ದೇವೆ. ಮತ್ತೆ ಬಯೋಗ್ಯಾಸ್ ಪ್ಲಾಂಟ್ ಸೆಟ್ ಅಪ್ ಶೇಕಡ 60 ಪರ್ಸೆಂಟ್ ಇತ್ತು ಆದರೆ ನಾವು 63 ಪರ್ಸೆಂಟ್ ಮಾಡಿದ್ದೇವೆ. ಮತ್ತೆ ಇದರಲ್ಲಿ ನಾವು 100ಕ್ಕೆ 100ರಷ್ಟು ಸಾಧನೆಯನ್ನು ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೇ ನಮಗೆ ಕೇಂದ್ರ ಸರ್ಕಾರದವರು 500 ಬೈಯೋ ಗ್ಯಾಸ್ ಪ್ಲಾಂಟ್ಸ್ ಮಾಡಬೇಕೆಂದು ಆದೇಶ ಕೊಟ್ಟಿತ್ತು. ಆದರೆ ನಾವು ಅಷ್ಟನ್ನು ಸಹ ಮಾಡಿ ಮುಗಿಸಿದ್ದೇವೆ. ಅದರ ಜೊತೆಗೆ ಮತ್ತೆ ನಾವು 4000 ಬಯೋಗ್ಯಾಸ್ ಪ್ಲಾಂಟ್ಸ್ ಮಾಡುವುದಕ್ಕೆ ಪ್ರಯತನ ಪಟ್ಟಿದ್ದೇವೆ. ಒಟ್ಟಿನಲ್ಲಿ ನಾವು ಸುಮಾರು 9000 ಬಯೋಗ್ಯಾಸ್ ಪ್ಲಾಂಟ್ಸ್ ಮಾಡಿದಂತೆ ಆಗುತ್ತದೆ. ಇಡೀ ವಿಶ್ವದಲ್ಲೇಯೇ ನಮ್ಮ ಕರ್ನಾಟಕ ರಾಜ್ಯ ಸಾಧನೆ ಮಾಡಿದಷ್ಟು ಬೇರೆ ಯಾವ ರಾಜ್ಯ ಕೂಡ ಇಷ್ಟು ಸಾಧನೆ ಈ ಒಂದು ಯೋಜನೆಯನ್ನು ಮಾಡಿಲ್ಲವೆಂದು ನಾನು ಸಂತೋಷದಿಂದ ಹೇಳಬಯಸುತ್ತೇನೆ. ಇನ್ನು ಫ್ಯಾಮಿಲಿ ಪ್ಲಾನಿಂಗ್ ಸ್ಟರ್ ಲೈಜೇಷನ್ ಮಾಡಿದ್ದೇವೆ. ಇನ್ನು ಸಬ್ ಸೆಂಟರ್ಸ್, ಬೆಲ್ಟ್ ಸೆಟ್ ಆಪ್ 100ಕ್ಕೆ 100ರಷ್ಟು ಸಾಧನೆ ಸಾಧನೆಯನ್ನು ಮಾಡಿದ್ದೇವೆ. ಅದೇ ರೀತಿಯಲ್ಲಿ ಎನ್.ರೋಲ್‌ಮೆಂಟ್ ಆಪ್ ನಾವು 100 ಪರ್ಸೆಂಟ್ ರಷ್ಟು ಸಾಧನೆ ಮಾಡಿದ್ದೇವೆ. ಇನ್ನು ಆಡಲ್ಟ್ ಎಜುಕೇಷನ್ ಸುಮಾರು ಶೇಕಡಾ 100 ರಷ್ಟು ಹಿಂದಿನ ಸಾರಿ ಸಾಧನೆ ಮಾಡಿದ್ದರೆ ನಾವು ಹಿಂದಿನ ಸರ್ಕಾರ ಶೆಕಡ 18 ಪರ್ಸೆಂಟ್ ಮಾತ್ರ ಸಾಧನೆ ಮಾಡಿತ್ತು. ಆದರೆ ನಮ್ಮ ಸರ್ಕಾರ ಬಂದ ಮೇಲೆ ಶೇಕಡ 167 ಪರ್ಸೆಂಟ್ ಮಾತ್ರ ಸಾಧನೆಯನ್ನು ಮಾಡಿದ್ದೇವೆ. ಇನ್ನು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಸೆಟ್ ಆಫ್ ಹಿಂದೆ 51 ಪರ್ಸೆಂಟ್ ಇತ್ತು ಆದರೆ ಈಗ ಅದು ಶೇಕಡ 62 ಪರ್ಸೆಂಟ್‌ರಷ್ಟು ಇದೆ. ಆದ್ದರಿಂದ ನಾನು ಮಾನ್ಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈ ಒಂದು ಅಂಕಿ ಅಂಶಗಳನ್ನು ನೋಡಿದರೆ ನಮ್ಮ ಸರ್ಕಾರ ಪ್ರಗತಿ ಪರವಾದಂಥ ಕಾರ್ಯಕ್ರಮಗಳನ್ನು ಮಾಡಿದೆ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇನ್ನು ನಮ್ಮ ಮಾನ್ಯ ಮಿತ್ರರು ಹೇಳಿದಂತೆ ನಾವು 20 ಅಂಶಗಳ ಕಾರ್ಯಕ್ರಮದಲ್ಲಿ ಚಕಾರವೆತ್ತಿಲ್ಲ ಮತ್ತು 20 ಅಂಶಗಳ ಕಾರ್ಯಕ್ರಮದಲ್ಲಿ ಹರಿಜಯ ಮತ್ತು ಗಿರಿಜನರಿಗೆ ಅನುಕೂಲವಾದಂಥ ಕೆಲಸಗಳನ್ನು ತಾವು ಏನೂ ಮಾಡಿಲ್ಲವೆಂದು ವಾದ ಮಾಡಿದರು. ಆದ್ದರಿಂದ ನಾವು ಈ ಅಂಕಿ ಅಂಶಗಳನ್ನು ಸಭೆಯ ಮುಂದೆ ಇಡಬೇಕಾಗಿ ಬಂತು. ಆದರೆ ಈ ಅಂಕಿ ಅಂಶಗಳನ್ನು

ನೋಡಿದಾಗ ನಾವು ಎಲ್ಲಾ ರೀತಿಯ ಪ್ರಗತಿಪರವಾದಂಥ ಕಾರ್ಯಕ್ರಮಗಳನ್ನು ಸಾಧನೆ ಮಾಡಿದ್ದೇವೆಂದು ಹೇಳಬಹುದು.

ನಜೀರ್ ಸಾಬ್ ಅವರ ಇನ್ನಿತರ ಸುಧಾರಣೆಗಳು:

ಅಬ್ದುಲ್ ನಜೀರ್ ಸಾಬ್ ಅವರು ಕರ್ನಾಟಕ ರಾಜ್ಯದ ಸಮಗ್ರ ಅಭಿವೃದ್ಧಿಗೆ ಶ್ರಮಿಸಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು ಇವರು ವಿಧಾನ ಪರಿಷತ್ತು ಸದಸ್ಯರು ಮತ್ತು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗ ಹಲವಾರು ಸುಧಾರಣಾ ಕ್ರಮಗಳನ್ನು ಕೈಗೊಂಡಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮೀಸಲಾತಿ ಕಲ್ಪಿಸುವುದು, ಅಂತ್ಯೋದಯ ಕಾರ್ಯಕ್ರಮದ ಅನುಷ್ಠಾನ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ, ಕೈ ಪಂಪುಗಳನ್ನು ಸಮರೋಪಾದಿಯಲ್ಲಿ ದುರಸ್ಥಿಕೈಗೊಂಡು ಎಲ್ಲಿ ಕ್ಷೇತ್ರಗಳಲ್ಲೂ ಗಮನಾರ್ಹ ಸುಧಾರಣೆಗಳನ್ನು ಕೈಗೊಂಡರು ಅಲ್ಲದೆ ರಾಮಕೃಷ್ಣ ಹೆಗಡೆಯವರ ಸಹಕಾರದೊಂದಿಗೆ ಒಣಭೂಮಿ ಅಭಿವೃದ್ಧಿ ಯೋಜನೆಯನ್ನು ಕೈಗೊಂಡರು ಇದು ಶೇ. 75ರಷ್ಟು ಕೃಷಿಕರಿಗೆ ಅನುಕೂಲವಾಯಿತು[23].

ಉತ್ತಮ ಭಾಷಣಕಾರರಾಗಿ ನಜೀರ್ ಸಾಬ್

ಭಾಷಣಕಾರರಾಗಿ ನಜೀರರಿಗೆ ಜನರನ್ನು ಮೋಡಿ ಮಾಡುವ ರೋಚ್ಚಿಗೆಬ್ಬಿಸುವ,ರೋಮಾಂಚನಗೊಳಿಸುವ ಶಕ್ತಿಯಿತ್ತು. ತಿಳಿಗನ್ನಡದಲ್ಲಿ ಸರಳವಾಗಿ, ಇಂಪಾಗಿ ಮಾತನಾಡುತ್ತಿದ್ದ ಅವರ ಭಾಷಣದಲ್ಲಿ ಅರ್ಥವಿರುತ್ತಿತ್ತು. ಇಂಥ ಒಂದು ಸುವರ್ಣಾವಕಾಶ ಅನಿರೀಕ್ಷಿತವಾಗಿ ಈಗ ಐದು ವರ್ಷಗಳ ಹಿಂದೆ ಈ ಲೇಖಕರಿಗೆ ದೊರೆತಿತ್ತು. ಕಳೆದ ವಿಧಾನ ಸಭೆಯ ಕೊನೆಯ ಚುನಾವಣಾ ಭಾಷಣ ಕೆ.ಆರ್. ನಗರದಲ್ಲಿ ನಡೆಯಿತು. ಅಂದು ಮಾತನಾಡಿದ ಭಾಷಣಕಾರರಲ್ಲಿ ನಜೀರರ ಭಾಷಣ ವಿಶಿಷ್ಟವಾಗಿತ್ತು. ಆ ಗುಂಪಿನೊಳಗೆ ಹುದುಗಿದ್ದ ಈ ಲೇಖಕನಿಗೆ ನಜೀರರ ಭಾಷಣದಿಂದ ರೋಮಾಂತನವಾಯಿತು. ಅವರು ಅಂದು ಆಡಿದ ದಿಟ್ಟ ಹಾಗೂ ಕಠೋರ ಸತ್ಯದ ನುಡಿಗಳು ಒಪ್ಪುವಂಥವು ಹಾಗೂ ಅಭಿನಂದನಾರ್ಹವಾದುವು. ಅವರು ತ್ಯಾಗದ ಬಗ್ಗೆ ಮಾತನಾಡುತ್ತಾ, ಇಂದು ನಮ್ಮನ್ನು ಆಳುತ್ತಿರುವ ದಿಲ್ಲಿಯ ಪ್ರಭುಗಳು ತಾವು ದೇಶಕ್ಕಾಗಿ ತ್ಯಾಗ ಮಾಡಿದ್ದೇವೆ, ತ್ಯಾಗ ಮಾಡಿದ್ದೇವೆ ಎನ್ನುತ್ತಾರೆ. ತ್ಯಾಗ ಅಂದರೇನು ? ಯಾವುದು ತ್ಯಾಗ? ಸ್ವಾತಂತ್ರ್ಯ ಈ ದೇಶಕ್ಕೆ ಬಂದಾಗಿನಿಂದಲೂ ಪರಂಪರಾನುಗತವಾಗಿ ದೇಶವನ್ನು ಆಳಿಕೊಂಡು ಬರುತ್ತಿರವುದು ತ್ಯಾಗವೆ ಎಂದು ಜನಗಳತ್ತ ನಿಟ್ಟಿಸಿದರು. ರಾಷ್ಟವಿಡೀ ಸುತ್ತಾಡಿರುವ ನಜೀರರು ತ್ಯಾಗ ಎಂದರೇನು ಎಂಬುದರ ಬಗ್ಗೆ ಜನಗಳ ಮನಸ್ಸು ಮಿಡಿಯುವಂಥ, ಒಪ್ಪುವಂಥ ಮಾತನಾಡಿದರು. ಇಂದಿಗೂ ಚಂಡೀಗಢದಲ್ಲಿ ಈ ದೇಶಕ್ಕೆ ತನ್ನ ಪ್ರಾಣವನ್ನು ಬಲಿದಾನ ಮಾಡಿದ ಭಗತ್‌ಸಿಂಗ್ ತಾಯಿ ಬದುಕಿದ್ದಾಳೆ. ಆದರೆ ಯಾವ ರೀತಿ? ಹಿಡಿಕೂಳಿಗಾಗಿ ಭಿಕ್ಷೆ ಬೇಡುತ್ತಿರುವ ಆ ಮಹಾತಾಯಿ ಈ ದೇಶಕ್ಕಾಗಿ ತನ್ನ ಮಗನನ್ನು ಅರ್ಪಿಸಿದ್ದರೂ, ದೇಶದಿಂದ ಏನನ್ನೂ ಅಪೇಕ್ಷಿಸುತ್ತಿಲ್ಲ. ಇದು ನಿಜವಾದ ತ್ಯಾಗ, ತ್ಯಾಗದ ಅರ್ಥ ತಿಳಿಯದೇ ಕೇವಲ ಸಮಯ ಸ್ಪೂರ್ತಿಯಿಂದ ಮಾತನಾಡುವ ಸಮಯ ಸಾಧಕ ಭ್ರಷ್ಟರನ್ನು ಖಂಡಿಸಿದರು. ಮಾತನಾಡಲು

ಪ್ರಾರಂಭಿಸಿದರೆ ನಿರರ್ಗಳವಾಗಿ ಗಂಟೆ ಗಟ್ಟಲೆ ಮಾತನಾಡುವಂಥ ವಾಗ್ಝರಿ ನಜೀರರಿಗೆ ಒಲಿದಿತ್ತು. ತಮ್ಮ ಮಾತೃಭಾಷೆಯಲ್ಲೂ ಸಹ ಸೊಗಸಾಗಿ ಮಾತನಾಡುತ್ತಿದ್ದ ಅವರ ವಾಣಿ ಕರ್ಣಾನಂದಕರವಾಗಿತ್ತು.

ಮತ್ತೊಂದು ಪ್ರಸಂಗ ನಜೀರರು ಸಚಿವರಾದ ಮೇಲೆ ಮಾನಸಗಂಗೋತ್ರಿಯ ಗಾಂಧೀ ಭವನದಲ್ಲಿ ನಡೆದ ಒಂದು ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ್ದರು. ಅಂದು ನಜೀರರ ಮಾತಿನಿಂದ ಇಡೀ ಸಭಾಂಗಣವೇ ಮಂತ್ರ ಮುಗ್ಧವಾಯಿತು. ಕರ್ನಾಟಕದ ಹಳ್ಳಿಗರ ಬವಣೆ, ಬಡವ ಮತ್ತು ದೀನ ದಲಿತರ ಬಗ್ಗೆ ತಮಗಿರುವ ಕಳಕಳಿ, ಗಾಂಧೀಜಿಯವರ ರಾಮರಾಜ್ಯದಕಲ್ಪನೆ ಅವರ ಕನಸನ್ನು ನನಸು ಮಾಡುವ ಬಗ್ಗೆ ತಮ್ಮ ಸರ್ಕಾರಕ್ಕಿರುವ ಚಿಂತನೆಗಳನ್ನು ಪ್ರೇಕ್ಷಕರ ಮುಂದೆ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದರು.

ನಜೀರರ ವಾಗ್ಝರಿ ಕೇವಲ ಜನ ಸಾಮಾನ್ಯರನ್ನಷ್ಟೇ ಅಲ್ಲ. ಸಾಹಿತಿಗಳ ಮೆಚ್ಚುಗೆ ಸಹ ಗಳಿಸಿತ್ತು, ಎನ್ನುವುದಕ್ಕೆ ಒಂದು ಜೀವಂತ ನಿದರ್ಶನ. 57 ನೇ ಕನ್ನಡ ಸಾಹಿತ್ಯ ಸಮ್ಮೇಳನ ಕೈವಾರದಲ್ಲಿ ನಡೆಯಿತು. ಅಂದು ಸಮ್ಮೇಳನದ ನೆನಪಿನ ಸಂಚಿಕೆಯನ್ನು ನಜೀರರೇ ಬಿಡುಗಡೆ ಮಾಡಿದರು. ನಂತರ ಕೇವಲ ಹತ್ತು ನಿಮಿಷ ಮಾತನಾಡಿದ ನಜೀರರು ಕನ್ನಡ ಸಾಹಿತ್ಯದ ವಿವಿಧ ಮಗ್ಗುಲುಗಳನ್ನು ವಿಶ್ಲೇಷಿಸಿದರು. ನಜೀರರ ಭಾಷಣದ ತಿರುಳು ಈ ಕೆಳಕಂಡಿತ್ತಿತ್ತು.

"ನಮ್ಮ ಮುಂದಿನ ಸಾಹಿತ್ಯ ಸಮಾನತೆಯ ಕಡೆ ಇರಬೇಕು. ಎಲ್ಲ ಬಗೆಯ ತಾರತಮ್ಯವನ್ನು ಮೇಲು ಕೀಳುಗಳನ್ನು ಅಳಿಸಿ ಹಾಕುವಂಥ ಸಾಹಿತ್ಯ ಇನ್ನು ಮುಂದೆ ಸೃಷ್ಟಿಯಾಗಬೇಕು. ಇದೇ ಜನರನ್ನು ಒಂದು ಮಾಡಿಸುವ ಹಾಗೂ ಮನುಷ್ಯರೆಲ್ಲ ಒಂದು ಎಂಬ ಭಾವನೆಯನ್ನು ತರುವ ಹೊಣೆಗಾರಿಕೆ ಈ ಜವಾಬ್ದಾರಿ ನಮ್ಮ ಸಾಹಿತಿಗಳ ಮೇಲಿದೆ" ಎಂದರು. ಒಟ್ಟಿನಲ್ಲಿ ನಜೀರರ ಭಾಷಣದಲ್ಲಿ ವಿಚಾರದ ಕೆಚ್ಚು ಹಾಗೂ ಸಮಾಜಿಕ ಕ್ರಾಂತಿಯ ಕಿಚ್ಚನ್ನು ನಾವು ಕಾಣಬಹುದಾಗಿತ್ತು.

ನಗುವಿನ ಚಿಲುಮೆ

ಮುಕ್ತ ಮನಸ್ಸಿನ ಮನುಷ್ಯನಿಗೆ ಹಾಸ್ಯ ಪ್ರಜ್ಞೆ ಇರದೇ ಇರಲು ಸಾಧ್ಯವೇ ಇಲ್ಲ ಅಬ್ದುಲ್ ನಜೀರ್ ಸಾಬ್‌ರ ನಿರ್ವ್ಯಾಜ ಪ್ರೀತಿಭರಿತ ವ್ಯಕ್ತಿತ್ವಕ್ಕೆ ಅವರ ಆರೋಗ್ಯಕರ ಮನಸ್ಸಿಗೆ ಹಾಸ್ಯದಿಂದ ದೂರವಿರುವುದು ಸಾಧ್ಯವೇ?

"ನಗುವು ಸಹಜದ ಧರ್ಮ
ನಗಿಸುವುದು ಪರಧರ್ಮ
ನಗುವ ಕೇಳುತ ನಗುವುದದತಿಶಯದ ಧರ್ಮ
ನಕ್ಕು ನಗಿಸುವ ವರಮಿಗೆ ಬೇಡಿಕೊಳೋ ಮಂಕುತಿಮ್ಮ."

ಎಂಬಂತೆ ತಾನು ನಗುವುದಲ್ಲದೇ ಬೇರೆಯವರನ್ನು ನಗೆಯ ಹೊನಲಿನಲ್ಲಿ ತೇಲಿಸಿ ಬಿಡುತ್ತಿದ್ದರು. ನಜೀರರು ಅವರ ಈ ಹಾಸ್ಯ ಪ್ರಜ್ಞೆ ಅವರು ಎಷ್ಟೇ ದೊಡ್ಡ ಅಧಿಕಾರದಲ್ಲಿದ್ದರೂ ಅವರನ್ನು ಆಶ್ರಯಿಸಿಕೊಂಡಿರುತ್ತಿತ್ತು. ಅವರ ಸಂಪುಟ ಸಹೋದ್ಯೋಗಿಗಳೇ ಹೇಳುವಂತೆ ಸಚಿವ ಮಂಡಲದ ಸಭೆ

ನಡೆಯುತ್ತಿದ್ದಾಗಲೂ ತಮ್ಮ ವಿಷಯವಾವುದೂ ಇಲ್ಲದಿದ್ದರೆ ಎದುರಿಗೆ ಕುಳಿತ ಮಂತ್ರಿಯೊಬ್ಬರಿಗೆ "ನೀವು ಕೋತಿ" ಎಂದು ಆ ಮಂತ್ರಿಗಳ ಕಾರ್ಟೂನು (ವ್ಯಂಗ್ಯ ಚಿತ್ರ) ಬರೆದು ಮೇಜಿನ ಮೇಲೆಯೇ ಸರಿಸಿ ತೋರಿಸುತ್ತಿದ್ದರಂತೆ ಆಗ ಆ ಮಂತ್ರಿಗಳೂ 'ನೀನು ಕುತ್ತೆ' ಎಂದು ಮಾರುತ್ತರ ಕೊಟ್ಟಿದ್ದೂ ಉಂಟಂತೆ. ಅದೇ ರೀತಿಯಲ್ಲಿ ಆಗ ವಿದ್ಯಾ ಮಂತ್ರಿಯಾಗಿದ್ದ ಶ್ರೀ ಎಂ. ರಘುಪತಿಯವರೇ ಹೇಳುವ ಹಾಗೆ ಈ ರೀತಿಯಿಂದ ನಜೀರ್ ಸಾಬರು ಬರೆದ ಅಂದಾಜು 50 - 60 ವ್ಯಂಗ್ಯ ಚಿತ್ರಗಳನ್ನು ತಾವು ಸಂಗ್ರಹಿಸಿ ಲಂಕೇಶ್ ಪತ್ರಿಕೆಗೆ ಕೊಟ್ಟಿದ್ದಾಗಿಯೂ ನಜೀರರ ಮರಣಾನಂತರ ಅವೆಲ್ಲ ಆ ಪತ್ರಿಕೆಯಲ್ಲಿ ಪ್ರಕಟವಾಗಿದ್ದವಂತೆ.

ನಜೀರ್ ಸಾಬರಿಗಿದ್ದ ಚಟಗಳೆಂದರೆ, ಮೂರೇ ಮೂರು - ಪುಸತ್ಕ ಓದುವುದು, ಸಿಗರೇಟ್ ಸೇದುವುದು, ಚನ್ನಾಗಿ ಊಟ ಮಾಡುವುದು. ಈ ಊಟದಲ್ಲಿ ಉಪ ಭಾಗಗಳನ್ನಾಗಿ ಕುರುಕುರು ತಿಂಡಿ, ಮಾಂಸದಡಿಗೆ, ಐಸ್‌ಕ್ರೀಂ, ಎಳ್ಳು ಚಟ್ನಿ, ಮಾವಿನಹಣ್ಣುಗಳನ್ನು ವಿಶೇಷವೆಂದು ಹೆಸರಿಸಬಹುದು. ಒಮ್ಮೆ ಐಸ್ ಕ್ರೀಂ ತಿನ್ನಲು ಗೆಲೆಯರೊಂದಿಗೆ ಅವರ ಪ್ರೀತಿಯ ಲೇಕ್‌ವ್ಯೂಗೆ ಹೋಗಿದ್ದಾಗ ಗೆಳೆಯರಿಗೆ ತಮ್ಮಲ್ಲಿ ದುಡ್ಡು ಇರುವುದು ಇಷ್ಟು ಮಾತ್ರ ಎಂದು 50 - 60 ರೂ ತೆಗೆದಿಟ್ಟರು. ಆಗ ಗೆಳೆಯರು ಇವರನ್ನು ಛೇಡಿಸಲು ತಮ್ಮ ಹತ್ರಾನೂ ಹೆಚ್ಚು ದುಡ್ಡಿಲ್ಲ ಏನು ಮಾಡುವುದೆಂದರು ತಕ್ಷಣ ನಜೀರ್ ಸಾಬರು, 'ಏಳಿರಯ್ಯ ಅದಕ್ಯಾಕೆ ಚಿಂತೆ, ಅಂಗಿ ಕಳೆಯೋಣ ಒಳಕ್ಕ ಹೋಗಿ ರುಬ್ಬುವ ಕೆಲಸ ಮಾಡಿ ಸಾಲ ತೀರಿಸಿ ಬಿಟ್ಟರಾಯ್ತು' ಎಂದು ನಗೆಯಾಡಿದರಂತೆ.

ಮತ್ತೆ ಆಗಾಗ ತಮ್ಮ ಮಮನೆಯ ಅಡುಗೆಯವನ ಬಗ್ಗೆ ಹೀಗೆ ಹಾಸ್ಯ ಮಾಡುತ್ತಿದ್ದರು. "ಈತನಿಗೆ ಬರೋದು ಒಂದೇ ಮಸಾಲೆ ಕಣಯ್ಯ, ವೆಜ್‌ಗೂ ಅದನ್ನೇ ಹಾಕ್ತಾನೇ ನಾನ್ ವೆಜ್‌ಗೂ ಅದನ್ನೇ ಹಾಕ್ತಾನೆ, ಹೇಗೆಂದರೆ ನಮ್ಮೂರಲ್ಲಿ ಒಬ್ಬ ಬ್ಯಾಂಡ್ ಮೇಳದವನಿದ್ದ ಸತ್ತಾಗ್ಲೂ ಒಂದೇ ಹಾಡು ನುಡಿಸುತ್ತಿದ್ದ ಮತ್ತೆ ಮದುವೆ, ಮೆರವಣಿಗೆಗೂ ಅದನ್ನೇ ನುಡಿಸುತ್ತಿದ್ದ, " ಪ್ಯಾರ್‌ಕಿಯಾ ತೊ ಡರನಾ ಕ್ಯಾ ಜಬ್‌ಪ್ಯಾರ್ ಕಿಯಾ ತೊ......" ಎಂದುಮನದುಂಬಿ ನಗುತ್ತಿದ್ದರು.

ಇನ್ನೊಂದು, ನಜೀರ್ ಸಾಬರು ಹೇಳುತ್ತಿದ್ದ ಅವರ ಬಾಲ್ಯದಲ್ಲಿಯ ಘಟನೆ - ಅವರ ಊರಲ್ಲಿ ಕಾಂಗ್ರೆಸ್ ನಾಯಕರ ಚಳುವಳಿ ನಡೆಯುತ್ತಿದ್ದ ಕಾಲ. ಮೆರವಣಿಗೆಯಲ್ಲಿ ಭಾಗವಹಿಸುವ ಅವಕಾಶ ಬಾಲಕ ನಜೀರ್ ಸಾಬರಿಗೂ ಇತ್ತು. ಅಲ್ಲಿ ವಿವಿಧ ಘೋಷಣೆಗಳನ್ನು ಕೂಗುತ್ತಿದ್ದರಂತೆ, ಹೀಗೆಯೇ....

"ಜವಾಹರ್ ಲಾಲ್ ನೆಹರೂಜೀ ಕೀ -ಜೈ

ಸುಭಾಷ್ಚಂದ್ರಬೋಸ್ ಕೀ -ಜೈ

ಅಬ್ದುಲ್ ಕಲಂ ಅಜಾದ್‌ಕೀ - ಜೈ". ಇತ್ಯಾದಿ ರಾಷ್ಟ್ರ ನಾಯಕರ ಹೆಸರುಗಳು ಮುಗಿದ ಮೇಲೆ ರಾಜ್ಯದ ನಾಯಕರ ಹೆಸರುಗಳು ನಿಜಲಿಂಗಪ್ಪಾಜಿ ಕೀ ಜೈ.

ಸಾವಕಾರ ಚೆನ್ನಯ್ಯಾ ಕೀ - ಜೈ ಇತ್ಯಾದಿಯಾಗಿ ರಾಜ್ಯ ನಾಯಕರ ಹೆಸರುಗಳು ಬರುತ್ತಿದ್ದವು. ನಂತರ ಜಿಲ್ಲಾ ಮಟ್ಟದ ನಾಯಕರ ಹೆಸರು ಹಿಡಿದು ಘೋಷಣೆಗಳು ಅದಾದ ಮೇಲೆ ಕೊನೆಗೆ ಘೋಷಣೆ

ಕೂಗುವವನು 'ಇಸ್‌ಕಿ ಮಾಕೀ .... ಅನ್ನುತ್ತಿದ್ದರು ಯಾಂತ್ರಿಕವಾಗಿ ಎಲ್ಲರೂ ಜೈ ' ಅನ್ನುತ್ತಿದ್ದರಂತೆ. ಹಾಸ್ಯದೊಂದಿಗೇನೆ ಇಲ್ಲಿ ಗ್ರಾಮೀಣ ಜನರ ಮುಗ್ಧತೆಯನ್ನೂ ಮೆಚ್ಚುತ್ತಿದ್ದರು ನಜೀರ್ ಸಾಬ್.

ನಾಟಕ ನೋಡುವುದು, ಆಡಿಸುವುದು ನಜೀರ್ ಸಾಬರ ಇನ್ನೊಂದು ಹವ್ಯಾಸ ಅಲ್ಲಿ ನಡೆದ ಒಂದು ಹಾಸ್ಯ ಪ್ರಸಂಗ ನೋಟಿ: ದ್ರೌಪದಿ ವಸ್ತ್ರಾಪಹರಣದಸೀನು ನಡೆಯುತ್ತಿದೆ. ದ್ರೌಪತಿಯ ಪಾತ್ರಧಾರಿಗೆ ಎಂಟು ಸೀರೆಗಳನ್ನು ಉಡಿಸಲಾಗುತ್ತಿತ್ತು ಆದರೆ ಸೀರೆ ಸೆಳೆಯುವವನು ಯಾವ ಸಮಯಕ್ಕೆ ನಿಲ್ಲಿಸಬೇಕು ಎಂಬುದನ್ನು ಸೈಡ್ ವಿಂಗ್‌ನಲ್ಲಿ ಒಬ್ಬ ನಿಂತು ಏಳು ಬೀಡಿ ಸೇದುವ ಮೂಲಕ ಸಂಜ್ಞೆ ಮಾಡುವ ವ್ಯವಸ್ಥೆ ಇತ್ತು ಒಂದೊಂದು ಬೀಡಿ ಸೇದಿ ಒಗೆಯುತ್ತಿದ್ದಂತೆ ಒಂದೊಂದು ಸೀರೆಯನ್ನು ಎಳೆಯಬೇಕು. ಅಂದರೆ ಕೊನೆಯ ಬೀಡಿ ಮುಗಿದಾಗಲೂ ಕೊನೆಯದೊಂದು ಸೀರೆ ಉಳಿಯಲಿ ಎಂದು ಆದರೆ ಅಂದು ಆದದ್ದೇ ಬೇರೆ. ಬೀಡಿ ಸೇದುವವನು ಮರೆತು ನಡುವೆ ಯಾವುದೋ ಒಂದು ಬಿಡಿಯನ್ನು ಒಗೆಯಲೇ ಇಲ್ಲ. ಕೊನೆಯ ಬೀಡಿ ಇನ್ನೂ ಇದ್ದಾಗಲೇ ಕೊನೆಯ ಸೀರೆ ಸೆಳೆದಾಯಿತು. ಪಾತ್ರಧಾರಿಯ ವೇಷ ಅಂಡರ್‌ವೇರ್ ! ಅದೇ ತುಸು ಉದ್ದನೆಯ ನಿಕ್ಕರ್ ! (ಆಗ ಗಂಡಸರು ಸ್ತ್ರೀ ಪಾತ್ರ ಮಾಡುತ್ತಿದ್ದರಂತೆ) ಇದನ್ನು ನೆನಪಿಸುತ್ತ ನಜೀರ್ ಸಾಬರು ಹಲವಾರು ಸಾರಿ ಆನಂದಿಸುತ್ತಿದ್ದುದುಂಟು.

ಇನ್ನು ಮಾವಿನ ಹಣ್ಣು ನಜೀರರಿಗೆ ಅತ್ಯಂತ ಪ್ರೀತಿಯ ಖಾದ್ಯವೆಂದು ಈಗಾಗಲೇ ಹೇಳಿದೆಯಷ್ಟೆ. ಅದನ್ನು ತಿನ್ನ ತೊಡಗಿ ಅಂಗಿಯ ಮೇಲೆ ಅದು ಬಿದ್ದಾಗ ಗೆಳೆಯರು 'ಏನಯ್ಯಾ ಮಂತ್ರಿಯಾಗಿ ಹೀಗೆ ತಿನ್ನೋದಾ ಮಾವಿನಹಣ್ಣು?' ಎಂದರೆ ಅವರು ತಟ್ಟನೆ 'ಮಂತ್ರಿಗೂ ಮಾವಿನ ಹಣ್ಣಿಗೂ ಏನ್ರೋ ಸಂಬಂಧ?' ಅಂತ ಹಾಸ್ಯ ಮಾಡಿಬಿಡುತ್ತಿದ್ದರಂತೆ

ಸದಾ ಜಾಗೃತವಾಗಿದ್ದ ಈ 'ಹಾಸ್ಯ ಪ್ರಜ್ಞೆ' ಯಿಂದಾಗಿಯೇ ಅವರು ತಮ್ಮನ್ನು ತಾವು ಸಂಪೂರ್ಣ ಅಭಿವ್ಯಕ್ತಿಗೊಳಿಸಿಕೊಳ್ಳಲು, ಗೆಳೆಯರಿಗೆ ಆಪ್ತರಾಗಲು ಸಾಧ್ಯವಾಯಿತೇನೋ ಅಲ್ಲದೇ ಇದೇ ಧೋರಣೆ ಅವರಿಗೆ ಒಂದು ರೀತಿಯ ನಿರ್ಲಿಪ್ತ (Detached) ಮನೋ ಭಾವನೆಯನ್ನು ಕೊಟ್ಟು 'ಸ್ಥಾನಕ್ಕಿಂತ ವ್ಯಕ್ತಿ ಮೇಲು' ಎಂಬುದಕ್ಕೆ ಕಾರಣಯಾಯಿತೇನೊ ಅನ್ನಿಸುತ್ತದೆ.

ಪ್ರಾಮಾಣಿಕತೆಯ ಪ್ರತಿ ರೂಪ

'ಭ್ರಷ್ಟನಾಗುವಷ್ಟು ಧೈರ್ಯ ಆತನಿಗೆ ಇರಲಿಲ್ಲ' ಅಬ್ದುಲ್ ನಜೀರ್ ಸಾಬ್‌ರ ಆಪ್ತ ಮಿತ್ರ ಮಾಜಿ ವಿಧಾನ ಸಭಾಧ್ಯಕ್ಷರಾದ ಶ್ರೀ ರಮೇಶ್ ಕುಮಾರ್‌ರವರು ಆಪ್ತವಾಗಿಯೇ ನನ್ನೆದುರು ಹೇಳುತ್ತಿದ್ದರು. 'ಜನ ಏನೇನೋ ಹೇಳ್ತಾರೆ, ಊಹಾಪೋಹ; ಮಂತ್ರಿಯಾಗಿದ್ದ ಮೇಲೆ ಮಾಡಿಕೊಂಡಿರಬೇಕು, ಅದರಲ್ಲಿ ಇದರಲ್ಲಿ ಬೋರ್‌ವೆಲ್‌ನಲ್ಲಿ ದುಡ್ಡು ಮಾಡಿದರು. ಅಂತ. ನೋ, ಇಲ್ಲ ಖಂಡಿತ ಇಲ್ಲ ಆ ಧೈರ್ಯ ಆತನಿಗಿರಲಿಲ್ಲ. ಹಾಗೆ ಹೇಳೋರು ಹೇಳ್ತಾರೆ..... ಆಚಾರವಿಲ್ಲದ ನಾಲಗೆ .... ಎಂದೆಂಬಂತೆ ' ಅದರಂತೆ ಇನ್ನೊಬ್ಬ ಮಾಜಿ ಸಚಿವರಾದ ಶ್ರೀ ಡಿ.ಬಿ. ಇನಾಮದಾರ್ ರವರೂ ಹೇಳಿದರು. "ನಾನು ನಜೀರ್ ಬಾಬ್ ಕೂಡಿ ಐದು ವರ್ಷ ಮಂತ್ರಿಯಾಗಿದ್ದೆವು. ಒಂದೇ ಒಂದು ಪ್ರಕರಣದಲ್ಲೂ ಅವರು ಕೈ ಹೊಲಸು

ಮಾಡಿಕೊಂಡಿದ್ದಿಲ್ಲ. No impossible, ಅವರು ಎಷ್ಟೋ ಭ್ರಷ್ಟರಾಗಿರಲಿಲ್ಲ.," ಈ ಮಾತನ್ನು ಹೊಗಳಿಕೆಯನ್ನು ಕೇವಲ ನಜೀರ್‌ಸಾಬ್‌ರ ಆಪ್ತರಷ್ಟೇ ಅಲ್ಲ ಅಂದು ವಿಧಾನ ಸಭೆಯಲ್ಲಿಯ ವಿರೋಧ ಪಕ್ಷದವರೂ, ಇನ್ನಿತರರೂ ಹೇಳಿದ ಉಲ್ಲೇಖಗಳೂ ಇವೆ. ಅದರಲ್ಲೊಂದನ್ನು ಇಲ್ಲಿ ಸಾಂಕೇತಿಕವಾಗಿ ನಿರೂಪಿಸಬಹುದಾಗಿದೆ.

ವಿಧಾನ ಸಭೆಯಲ್ಲಿ ದಿನಾಂಕ: 08-03-1984ರಲ್ಲಿ ಗ್ರಾಮೀಣ ಅಭಿವೃದ್ಧಿ ಬೇಡಿಕೆಗಳ ಬಗ್ಗೆ ಚರ್ಚೆ ನಡೆದಾಗ ಆ ಇಲಾಖೆಯ ಮಂತ್ರಿಗಳಾದ ನಜೀರ್ ಸಾಬ್‌ರವರ ಬಗ್ಗೆ ಶ್ರೀ ಹನುಮಂತಗೌಡ ಶೇಖರಗೌಡ (ಕುಷ್ಟಗಿಯ ಶಾಸಕರು) ಹೇಳಿದ್ದು, ".... ಇನ್ನು ಗ್ರಾಮೀಣ ಅಭಿವೃದ್ಧಿಯ ಬಗ್ಗೆ ಹೇಳುವುದಾದರೆ ಮಾನ್ಯ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಸಚಿವರು ಬಹಳ ಪ್ರಾಮಾಣಿಕರು ಇವರೂ ಕೂಡ ಕೇಂದ್ರ ಸರ್ಕಾರದ ಅನುದಾನದಿಂದ ತೆಗೆದುಕೊಂಡು ...." ಹೀಗೆ ನಜೀರ್ ಸಾಬ್‌ರನ್ನು ಟೀಕಿಸುವಾಗಲೂ ಕೂಡ ವಿರೋಧ ಪಕ್ಷದವರೇ ಇವರನ್ನು 'ಬಹಳ ಪ್ರಮಾಣಿಕರು' ಎಂದು ಪ್ರಶಂಸಿಸುತ್ತಿದ್ದುದನ್ನು ಅಲ್ಲಲ್ಲಿ ಕಾಣಬಹುದಾಗಿದೆ. ಇಂತಹ ಹೊಗಳಿಕೆಗೆ ಪಾತ್ರಾದವರು, ಅದೂ ಮಂತ್ರಿಗಳು ಅದೂ ವಿರೋಧ ಪಕ್ಷದವರಿಂದ ಹೊಗಳಿಸಿಕೊಂಡವರು ತೀರ ವಿರಳ.

ನಜೀರ್ ಸಾಬರು ಮಂತ್ರಿಯಾಗಿದ್ದಾಗಲೂ ತಮಗೆ ಹಣದ ಅಡಚಣೆಯಾದಾಗ ಮೈಸೂರಿನಲ್ಲಿದ್ದ ಗೃಹ ಮಂಡಳಿಯಿಂದ ತಮಗೆ ಹಂಚಿಕೆಯಾಗಿದ್ದ ಮನೆಯನ್ನು ಮಾರಿಬಿಟ್ಟರು. ಮುಂದೊಮ್ಮೆ ಬೆಂಗಳೂರಿನಲ್ಲಿ ಶಾಸಕರ ಕೋಟಾದಲ್ಲಿ ಮಂಜೂರಾದ ನಿವೇಶನಕ್ಕಾಗಿ ಬೇಕಾಗಿರುವಷ್ಟು ಹಣ ಕೂಡಾ ಅವರಲ್ಲಿರಲಿಲ್ಲ. ಅವರ ಆಪ್ತರು, ಗೆಳೆಯರು ಆಸ್ಥೆವಹಿಸಿ ಹಣ ಕೂಡಿಸಿಕೊಟ್ಟಾಗಲೇ ಆ ನಿವೇಶನವನ್ನು ಇವರು ಕೊಳ್ಳಲು ಸಾಧ್ಯವಾಯಿತು. ಪ್ರಾಮಾಣಿಕ ವ್ಯಕ್ತಿತ್ವಕ್ಕೆ ಇದಕ್ಕಿಂತ ಬೇರೆ ಪುರಾವೆ ಬೇಕೆ?

ಇನ್ನು ನಜೀರಸಾಬರ ಸರಳ ವ್ಯಕ್ತಿತ್ವದ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ ಎಂದೆನ್ನಬಹುದು. ನೇರ ನಡೆನುಡಿ, ಸಾದಾ ಜೀವನಮಾರ್ಗ ಅವರ ವೈಶಿಷ್ಟ್ಯವಾಗಿತ್ತು. ಅವರು ಗ್ರಾಮೀಣ ಅಭಿವೃದ್ಧಿ ಮಂತ್ರಿಯಾಗಿ (1983) ಮೂರ್ನಾಲ್ಕು ತಿಂಗಳಾಗಿತ್ತು. ಆಗ ಗುಲ್ಬರ್ಗಾದಲ್ಲಿ ನಡೆದ ಒಂದು ಘಟನೆಯನ್ನು ಇಲ್ಲಿ ಪ್ರಸ್ತಾಪಿಸುವುದು ಬಹಳ ಸೂಕ್ತವೆನಿಸುತ್ತದೆ ಜಿಲ್ಲಾ ಮಟ್ಟದ ಅಭಿವೃದ್ಧಿ ಕಾರ್ಯಕ್ರಮಗಳ ಪರಾಮರ್ಶನ ಸಭೆಗಾಗಿ ಮಂತ್ರಿಗಳಾದ ನಜೀರ್ ಸಾಬರು ಆಗಮಿಸಿದ್ದರು. ಐವಾನ್ - ಏ - ಶಾಹಿ ಸರಕಾರಿ ಅತಿಥಿಗೃಹದಲ್ಲಿ ಅವರು ಸಭಾಗೃಹ ಪ್ರವೇಶಿಸುತ್ತಿದ್ದಂತೆಯೇ ನಾವೆಲ್ಲ ಅಧಿಕಾರಿಗಳು ಎದ್ದುನಿಂತು ಸ್ವಾಗತಿಸುತ್ತಿದ್ದೆವು, ಅಷ್ಟರಲ್ಲೇ ಅವರು ನಮಗೆಲ್ಲಾ ಕೊಡಲು ಹೇಳಿ 'ಇದೇನಿದು!' ಎಂದು ಆಶ್ಚರ್ಯ ವ್ಯಕ್ತಪಡಿಸಿದರು. ಅವರ ದೃಷ್ಟಿ ಅವರಿಗಾಗಿ ಹಾಕಿದ ನೀಲಿ ಕುತನಿ ಬಟ್ಟೆಯ ದೊಡ್ಡ ಮಹಾರಾಜಾ ಕುರ್ಚಿಯ ಕಡೆನೆಟ್ಟಿತ್ತು. ಇದನ್ನು ತೆಗೆದುಬಿಡಿ, ಸದಾ ಕುರ್ಚಿ ಸಾಕು ಎಂದರು. ಎಷ್ಟು ವಿನಂತಿಸಿದರೂ ಅದರ ಮೇಲೆ ಕುಳಿತುಕೊಳ್ಳಲು ಒಪ್ಪಲೇಯಿಲ್ಲ. ಕೊನೆಗೆ ಅದನ್ನು ತೆಗೆಯಿಸಿ ಬೇರೆ ಸಾದಾ ಕುರ್ಚಿ ಹಾಕಿದ್ದಾಯಿತು. ಆಗ ಅವರು ನಮ್ಮದು ಜನತಾ ಸರ್ಕಾರ, ಇಲ್ಲಿ ಇಂತಹ ಅನಾವಶ್ಯಕ ವೈಭವಕ್ಕೆ ಅವಕಾಶ ನೀಡುವುದಿಲ್ಲ ಎಂದು ಸೂಚ್ಯವಾಗಿ ತಿಳಿಸಿದರು.

ಹಾಗೆಯೇ ನಜೀರ್ ಸಾಬರ ಮನುಷ್ಯ ಪ್ರೀತಿ ಎಷ್ಟೊಂದು ಆಳವಾಗಿತ್ತೆಂದರೆ ಜನಸಾಮಾನ್ಯರ, ಬಡವರ ಕೆಲಸವೆಂದರೆ ಅವರಿಗೆ ಮೈದುಂಬಿದಂತಾಗುತ್ತಿತ್ತು. ಹಗಲು ರಾತ್ರಿ ಎನ್ನದೇ ಸಮಾಜ ಸೇವೆ ಮಾಡುವುದು. ಜನರ ಸಮಸ್ಯೆ ಕೇಳುವುದು, ಕಛೇರಿ ತಿರುಗಾಡಿ ಅವರ ಕೆಲಸ ಮಾಡಿಸಿಕೊಡುವುದು ಅವರ ಪರಿಪಾಠವಾಗಿತ್ತು. ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವುದುಅವರ ಸಹಜ ಮನೋಧರ್ಮವಾಗಿತ್ತು ತಾನೆ. ಇದರಿಂದಾಗಿ ಕೆಲಸಲ ಅವರ ಆರೋಗ್ಯವೂ ಹದಗೆಡುತ್ತಿತ್ತು. ಒಮ್ಮೆ ನಜೀರ್ ಸಾಬರಿಗೆ ಪ್ಯಾರಾ ಟೈಫಾಯ್ಡ್ ಆಯಿತು. ಹದಿನೈದು ದಿನಗಳ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಡಾಕ್ಟರ್‌ರು ಹೇಳಿಯಾಗಿತ್ತು. ಆದರೆ ಅವರು ಕೇಳಲೇಯಿಲ್ಲ. ಜನರ ಕೆಲಸಕ್ಕಾಗಿ ಅಲೆದಾಡತೊಡಗಿದರು. ಅವರ ತಮ್ಮ ಪಾಷರವರು ಈ ಬಗ್ಗೆ ತಕರಾರು ಮಾಡಿದಾಗ ಅಯ್ಯೋ ಪಾಪ ಜನ ದೂರದಿಂದ ಬಂದಿರುತ್ತಾರೆ. ಅವರಿಗಾಗಿ ಸ್ವಲ್ಪ ಕಷ್ಟ ತೆಗೆದುಕೊಂಡರೆ ಏನಾಗುತ್ತದೆ. ? ಅಂದರು ಆಗ ಜನರಿಗೆ ನೀವು ಕೇವಲ ಹದಿನೈದು ದಿನ ಮಾತ್ರ ನಮಗೆಲ್ಲ ತೊಂದರೆ ಅಥವಾ ಜನರಿಗೆ ನೀವು ಕೇವಲ ಹದಿನೈದು ದಿನ ಮಾತ್ರ ಸಿಗಲಿಕ್ಕಿಲ್ಲ ಆಕಸ್ಮಾತ್ ಇದೇ ತಿರುಗಾಟ ಜಾಸ್ತಿಯಾದರೆ ಟೈಫಾಯ್ಡ್ ಸೀರಿಯಸ್ ಆಗಿ ಮೂರು ತಿಂಗಳ ರೆಸ್ಟ್ ಬೇಕಾಗುತ್ತದೆ. ಆಗ ಎಲ್ಲರಿಗೂ ಮೂರು ತಿಂಗಳ ತೊಂದರೆಯಾಗುತ್ತದೆ. ತಾನೆ ಎಂದು ಎಚ್ಚರಿಸಿದರು. ಆಗ ಸ್ವಲ್ಪ ವಿಶ್ರಾಂತಿ ಪಡೆದರು ನಜೀರ್‌ಸಾಬರು.

ನಜೀರ್ ಸಾಬ್‌ರ ವ್ಯಕ್ತಿತ್ವ:

ಸುಮಾರು ಆರು ಅಡಿ ಎತ್ತರವಿದ್ದ ನಜೀರ್ ಸಾಬ್ ಒಬ್ಬ ಅಜಾನುಬಾಹುವಾಗಿದ್ದರು. ಅವರು ಎತ್ತರದ ಜೊತೆಗೆ ನೇರ ನಿಲುವನ್ನು ಹೊಂದಿದ್ದರು. ಅವರು ಮಾತನಾಡಿದರೆ ಗಂಟೆ ಬಾರಿಸಿದ ಶಬ್ಧದಂತಿತ್ತು. ಸಾವಿರ ಜನರ ಮದ್ಯದಲ್ಲಿದ್ದರೂ ಎದ್ದು ಕಾಣುವಂತಹ ಮತ್ತು ಎಲ್ಲರ ದೃಷ್ಟಿಯನ್ನು ಆಕರ್ಷಿಸುವ ಮಧುರ ವ್ಯಕ್ತಿತ್ವ ಅವರದಾಗಿತ್ತು. ಲಕ್ಷ ಜನರಿರುವ ಸಭೆಯಲ್ಲೂ ಕೇಳುವಂತಹ ಅದ್ಭುತ ಗಂಟಲ ಶಕ್ತಿ ಅವರದಾಗಿತ್ತು. ಎಲ್ಲರೊಂದಿಗೂ ಬೆರೆತು ಸಮಬಾಳು ನಡೆಸಲು ಇಚ್ಚೆ ಪಡುತ್ತಿದ್ದ ನಿರಾಡಂಬರ ವ್ಯಕ್ತಿಯಾಗಿದ್ದರು. ಈ ರೀತಿಯ ಬಹಿರಂಗ ಚೆಲುವಿನೊಂದಿಗೆ ಜನತಂತ್ರ, ಸಮಾಜವಾದ ಜಾತ್ಯಾತೀತ ಚಿಂತನೆಯ ಅಂತರಂಗದ ಒಲವಿನ ಮೆರಗನ್ನು ಅವರಲ್ಲಿ ಕಾಣಬಹುದಾಗಿತ್ತು.

ಯಾವುದೇ ವ್ಯಕ್ತಿ ಮೇಲೇರಿದಾಗ ಅತನ ವೇಷ ಭೂಷಣಗಳು, ರೀತಿ ರಿವಾಜುಗಳು ಬದಲಾಗುವುದು ಸಹಜ. ಆದರೆ ನಜೀರ್ ಸಾಬ್‌ರು ಈ ರೀತಿಯ ಬಹಿರಾಡಂಬರಗಳಿಗೆ ಬಲಿಯಾಗಲಿಲ್ಲ. ಪ್ರಾರಂಭದಿಂದಲೂ ಇದ್ದಂತೆ ಶುದ್ಧ ಬಿಳಿಯ ಖಾದಿಯ ಪೈಜಾಮ, ಧರಿಸುತ್ತಿದ್ದರು. ನಜೀರ್ ಸರಳತೆ, ಸೌಜನ್ಯತೆ ಮತ್ತು ಪ್ರಾಮಾಣಿಕತೆಯ ಸಾಕಾರ ಮೂರ್ತಿಯಾಗಿದ್ದರು. ಬಿಳಿಯ ಖಾದಿ ಪೈಜಾಮ ಧರಿಸುತ್ತಿದ್ದ ಅವರ ಹೃದಯ ಸಹ ಹಾಲಿನಂತೆ ಶುಭ್ರವಾಗಿತ್ತು ನಜೀರ್ ಸಾಬ್‌ರನ್ನು ನೋಡಿದಾಗ ಗಾಂಧೀಜಿಯವರ "ಶುಭ್ರತೆ ಇರುವ ಕಡೆ ದೇವರು ತಾನೇ ತಾನಾಗಿ ಬರುತ್ತಾನೆ" ಎಂಬ ಮಾತು ನೆನಪಿಗೆ ಬರುತ್ತದೆ [24].

ನಜೀರ್ ಸಾಬ್‌ರ ಅಂತಿಮ ದಿನಗಳು:

ಶ್ರೀಯುತ ನಜೀರ್ ಸಾಬ್‌ರವರು ರಾಜಕೀಯ ಪ್ರವೇಶ ಮಾಡಿದ ಮೇಲೆ ವಿಶ್ರಾಂತಿಯಿಲ್ಲದ ದುಡಿಮೆಯಿಂದಾಗಿ ಆರೋಗ್ಯ ಹದಗೆಟ್ಟಿತು. ಅಲ್ಲದೆ ವಿದ್ಯಾಭ್ಯಾಸದ ಸಂದರ್ಭದಲ್ಲೇ ಅವರ ಆರೋಗ್ಯ ಕೈಕೊಟ್ಟ ವಿದ್ಯಾಭ್ಯಾಸವನ್ನೇ ನಿಲ್ಲಿಸಬೇಕಾಯಿತು. ಅಬ್ದುಲ್ ನಜೀರ್ ಸಾಬರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಮೇಲೆ ಗ್ರಾಮೀಣ ಪ್ರದೇಶದಲ್ಲಿದ್ದ ನೀರಿನ ಸಮಸ್ಯೆಯನ್ನು ಹೋಗಲಾಡಿಸಲು ಹಗಲಿರುಳು ಶ್ರಮಿಸಿದರು. ಉತ್ತರ ಕರ್ನಾಟಕದಲ್ಲಿ ನೂರಾರು ಕಿ.ಮೀ. ಕಾಲ್ನಡಿಗೆಯಲ್ಲಿಯೇ ನಡೆಯುತ್ತಿದ್ದರು. ಅದು ವಿಪರೀತವಾದ ಧೂಳಿನಲ್ಲಿ. ಅದು ಇವರ ಶ್ವಾಸ ಕೋಶದ ಮೇಲೆ ಪರಿಣಾಮ ಬೀರಿತು.[25]

1988 ನೇ ಇಸವಿಯ ಪ್ರಾರಂಭದಲ್ಲಿ ನಜೀರ್ ಸಾಬ್‌ರ ಆರೋಗ್ಯ ತೀವ್ರವಾಗಿ ಹದಗೆಟ್ಟಿತು ತಕ್ಷಣ ನಜೀರ್ ಸಾಬ್‌ರನ್ನು ವಿವಿಧ ಪರಿಕ್ಷೆಗಳಿಗೆ ಒಳಪಡಿಸಲಾಯಿತು. ಹಲವಾರು ಪರಿಕ್ಷೆಗಳ ನಂತರ ಅವರಿಗೆ ಕ್ಯಾನ್ಸರ್ ರೋಗವಿರುವುದು ಪತ್ತೆಯಾಯಿತು. ಬಂಧು ಬಳಗದವರ ದುಃಖ ಹೇಳ ತೀರದಾಯಿತು. ನಜೀರ್ ಸಾಬ್‌ರ ಚಿಕಿತ್ಸೆಗಾಗಿ ಮುಖ್ಯ ಮಂತ್ರಿ ಬೊಮ್ಮಾಯಿಯವರು ಅವರನ್ನು ಅಮೇರಿಕಾಕ್ಕೆ ಕಳುಹಿಸಲು ತೀರ್ಮಾನಿಸಿ ನಜೀರ್ ಸಾಬ್‌ರ ಚಿಂತೆಯಲ್ಲಿ ಮತ್ತೊಬ್ಬ ಸಮಾಜವಾದಿ ಚಿಂತಕ ರಾಜಕಾರಣಿ ಶ್ರೀ ಜಾರ್ಜ್ ಫರ್ನಾಂಡಿಸ್ ರವರನ್ನು ಕಳುಹಿಸುವುದೆಂದು ತೀರ್ಮಾನಿಸಲಾಯಿತು. ಅದರಂತೆ ಅಮೇರಿಕಾಕ್ಕೆ ಹೋಗಿ ಬಂದರೂ ಯಾವುದೇ ಪ್ರಯೋಜನವಾಗಲಿಲ್ಲ[26] ಮುಂದಿನ ಕೆಲ ದಿನಗಳಲ್ಲೇ ಅಂದರೆ ದಿನಾಂಕ: 24ನೇ ಅಕ್ಟೋಬರ್ 1988 ರಂದು ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯಲ್ಲಿ ಸಾವು ಬದುಕುಗಳ ಏರು ಪೇರಿಗೆ ಒಳಗಾಗಿ ಕಡೆಗೆ ಸಾವಿನ ಮಡಿಲಿಗೆ ಜಾರಿದರು. ಮೂರನೇ ದಿನ ಬೆಳಿಗ್ಗೆ ಅಶ್ರುಭರಿತ ವಿದಾಯವನ್ನು ಅವರಿಗೆ ಅರ್ಪಿಸಲಾಯಿತು. ನಜೀರ್ ಸಾಬ್‌ರಿಗೆ ಶ್ರದ್ಧಾಂಜಲಿ ಸಲ್ಲಿಸಲು ಜನತಾದಳದ ಅದ್ಯಕ್ಷ ವಿ.ಪಿ. ಸಿಂಗ್, ಪ್ರಿಯಮಿತ್ರರಾಗಿದ್ದ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿ ಎಸ್.ಆರ್. ಬೊಮ್ಮಾಯಿ, ಗೆಳೆಯ ರಘುಪತಿ ಮುಂತಾದವರು ಮೃತರ ಪಾರ್ಥಿವ ಶರೀರಕ್ಕೆ ಪುಷ್ಪಗುಚ್ಛಗಳನ್ನೀರಿಸಿ ಗೌರವ ಸಲ್ಲಿಸಿದರು.[27]

ನಜೀರ್ ಅಂತ್ಯ ಕ್ರಿಯೆ :

ನಜೀರ್ ಸಾಬ್‌ರ ಅಂತ್ಯ ಕ್ರಿಯೆ ನಜೀರ್‌ರ ಸ್ವ ಕ್ಷೇತ್ರ ಗುಂಡ್ಲುಪೇಟೆಯಲ್ಲಿ ನಡೆಯಿತು. "ಶರಣ ಮಹಿಮೆಯನ್ನು ಮರಣದಲ್ಲಿ ನೋಡು" ಎಂಬ ಮಾತಿನಂತೆ ಅಬ್ದುಲ್ ನಜೀರ್ ಸಾಬ್‌ರ ಅಂತಿಮ ಯಾತ್ರೆ ಅಪಾರ ಜನಸ್ತೋಮ, ರಾಷ್ಟ್ರ, ರಾಜ್ಯದ ಗಣ್ಯನಾಯಕರೊಂದಿಗೆ ಬೆಂಗಳೂರಿನಿಂದ ಬಂದು ಗಂಟೆಗೆ ಹೊರಟಿತು. ಅಂತಿಮ ಯಾತ್ರೆಯ ದಾರಿಯುದ್ದಕ್ಕೂ ಜನ ಸಾಮಾನ್ಯರಾದಿಯಾಗಿ ನಾಡಿನ ಮೂಲೆ ಮೂಲೆಯಿಂದ ಹಿರಿಯ ಕಿರಿಯ ಧುರೀಣರು ಬಂದರು. ಮೈಸೂರು ಜಿಲ್ಲೆಯಲ್ಲಿ ಡಿ. ದೇವರಾಜ ಅರಸು ಅವರನ್ನು ಬಿಟ್ಟು ಉಳಿದ ಯಾವ ರಾಜಕೀಯ ನಾಯಕನ ಅಂತಿಮ ಯಾತ್ರೆಗೆ ಸೇರಲಾರದಷ್ಟು ಜನ ಸಾಗರ ಸೇರಿತ್ತು.

ಬೆಂಗಳೂರಿನಿಂದ ಹೊರಟ ಶವಯಾತ್ರೆ ಪ್ರಮುಖ ನಗರ ಮತ್ತು ಪಟ್ಟಣಗಳಲ್ಲಿ ಹತ್ತತ್ತು ನಿಮಿಷ ಸಾರ್ವಜನಿಕರ ದರ್ಶನಕ್ಕಾಗಿ ನಿಲ್ಲುತ್ತಿತ್ತು. ನಜೀರ್‌ಸಾಬ್‌ರ ಶವಯಾತ್ರೆ ಹೊರಟಾಗ 20 ವಾಹನಗಳಿದ್ದವು ಗುಂಡ್ಲುಪೇಟೆ ತಲುಪಿದಾಗ ವಾಹನಗಳ ಸಂಖ್ಯೆ 400ಕ್ಕೇರಿತು. ನಜೀರ್ ಸಾಬ್‌ರ ಜನಪ್ರಿಯತೆಗೆ ಇದಕ್ಕಿಂತ ಹೆಚ್ಚಿನ ಸಾಕ್ಷಿ ಇನ್ನೇನು ಬೇಕು.

ಬಾಳಿನ ಅರ್ಧ ದಾರಿಯಲ್ಲಿ ತಮ್ಮ 54ನೇ ವಯಸ್ಸಿನಲ್ಲಿ ಇಹಲೊಕ ತ್ಯಜಿಸಿದರು. ಇನ್ನೂ ಬಹುಕಾಲ ಬದುಕ ಬೇಕಾಗಿದ್ದ ಜೀವಕ್ಕೆ ಅಕಾಲ ಕೊನೆ ಉಂಟಾಯಿತು. ನಜೀರ್ ಸಾಬ್ ಅಂತ್ಯ ಕ್ರಿಯೆಯಲ್ಲಿ ಭಾಗವಹಿಸಿದ ಜನತೆ ಬಂದಿದ್ದ ಅಪಾರ ಜನಸ್ತೋಮ ನೋಡಿ ಆಶ್ಚರ್ಯ ಚಕಿತರಾದರು.

ಒಟ್ಟಿನಲ್ಲಿ ಅಬ್ದುಲ್ ನಜೀರ್ ಸಾಬ್ ನಮ್ಮ ನಾಡಿನವರೆಲ್ಲ ಎದೆತಟ್ಟಿ ಹೇಳಿಕೊಳ್ಳಬಹುದಾದ ಹೆಮ್ಮೆಯ ಪುತ್ರರಾಗಿದ್ದಾರೆ.[28]

ನಜೀರ್ ಸಾಬ್‌ರ ನಿಧನದಿಂದ ಒಬ್ಬ ನಿಷ್ಠಾವಂತ ರಾಜಕೀಯ ಕಾರ್ಯಕರ್ತನ ಕಣ್ಮರೆಯಾಯಿತು. ಶ್ವಾಸಕೋಶದ ಕ್ಯಾನ್ಸರ್ ರೋಗಕ್ಕೆ ಬಲಿಯಾಗಿ ತನ್ನ ಇಹಲೋಕ ಯಾತ್ರೆಯನ್ನು ಮುಗಿಸಿದ ನಜೀರ್ ಸಾಬ್ ರಾಜ್ಯ ರಾಜ ಕಾರಣದಲ್ಲಿ ತಮ್ಮ ಛಾಪನ್ನು ಒತ್ತಿ ಹೋದರು. ವಿಧಾನ ಪರಿಷತ್ತಿನ ಸಬಾ ನಾಯಕನಾಗಿ ಸದನದ ಎಲ್ಲಾ ಕಡೆಯವರಿಗೂ ಆತ್ಮೀಯವಾದ ವ್ಯಕ್ತಿಯಾಗಿದ್ದರು. ಮಹಾತ್ಮಗಾಂಧೀಜಿ, ಕಾರ್ಲ್ ಮಾರ್ಕ್ಸ್ ಲೋಕ ನಾಯಕ ಜನ ಪ್ರಕಾಶ ನಾರಾಯಣ ಮತ್ತು ರಾಮ ಮನೋಹರ ಲೋಹಿಯಾ ಅವರ ಚಿಂತನೆಗಳಿಂದ ಪ್ರಭಾವಿತರಾಗಿದ್ದರು. ತಮ್ಮ ಜೀವನದಲ್ಲಿ ಉದಾತ್ತ ವಿಚಾರಗಳನ್ನು ಅಳವಡಿಸಿಕೊಂಡು ಸರಳವಾಗಿ ಜೀವಿಸಿದರು. ನೇರವಾಗಿ ನಡೆದುಕೊಂಡರು.

ನಜೀರ್ ಸಾಬ್‌ರ ಜೀವನ ದೃಷ್ಟಾಂತದಂದ ಅಧಿಕಾರ ಮತ್ತು ಸ್ಥಾನ ಹೇಗೆ ಒಬ್ಬ ನಿಷ್ಠಾವಂತ ಪ್ರಾಮಾಣಿಕ ಮತ್ತು ಧೀಮಂತ ರಾಜಕೀಯ ಕಾರ್ಯಕರ್ತನನ್ನು ಬೆನ್ನಟ್ಟಿ ಬರಬಹುದು ಎಂಬುದಕ್ಕೆ ಸಾಕ್ಷಿಯಾಗಿದೆ[29]

ಹೀಗೆ ತಾಲ್ಲೂಕು ಮತ್ತು ರಾಜ್ಯ ಮಟ್ಟದಲ್ಲಿ ಜನಾನುರಾಗಿ ರಾಜಕಾರಣಿಯಾಗಿದ್ದ ಇವರ ಗ್ರಾಮೀಣಾಭಿವೃದ್ಧಿಯ ಬಗ್ಗೆ ಆಸಕ್ತಿ, ಅಭಿವೃದ್ಧಿಯ ಕಾರ್ಯವನ್ನು ಮನಗಂಡು ಕರ್ನಾಟಕ ಸರ್ಕಾರವು ಮೈಸೂರಿನಲ್ಲಿರುವ ಗ್ರಾಮೀಣಾಭಿವೃದ್ಧಿ ಸಂಸ್ತೆಗೆ "ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯೆಂದು ಮೈಸೂರಿನ ಜಿಲ್ಲಾ ಪಂಚಾಯತ್‌ನ ಸಭಾಂಗಣಕ್ಕೆ "ಅಬ್ದುಲ್ ನಜೀರ್ ಸಾಬ್ ಸಭಾಂಗಣ" ವೆಂದು ಹೆಸರಿಟ್ಟಿದೆ ಈ ಜಿಲ್ಲಾ ಪಂಚಾಯತ್ ಕಾರ್ಯಾಲಯದ ಆವರಣದಲ್ಲಿ ನಜೀರ್ ಸಾಬ್‌ರ ಶಿಲಾ ಪ್ರತಿಮೆಯನ್ನು ಹಾಕಿಸಲಾಗಿದೆ. ಅಲ್ಲದೆ ನಜೀರ್ ಸಾಬ್‌ರ ಸ್ವ ಕ್ಷೇತ್ರ ಗುಂಡ್ಲುಪೇಟೆಯಲ್ಲಿ ಒಂದು ರಸ್ತೆಗೆ ಇವರ ಹೆಸರನ್ನೀಡಲಾಗಿದೆ. ಈಗ ಅಬ್ದುಲ್ ನಜೀರ್ ಸಾಬ್ ಇನ್ನಿಲ್ಲ ಆದರೆ ಅವರು ಕೋಟಿ ಕೋಟಿ ಕನ್ನಡಿಗರ ಹೃದಯದಲ್ಲಿ ಚಿರಸ್ಥಾಯಿಯಾಗಿ ಉಳಿದಿರುತ್ತಾರೆ ಎಂಬುದರಲ್ಲಿ ಯಾವ ಸಂದೇಹವು ಇಲ್ಲ.[30]

4.5 ಸಮ ಕಾಲೀನರ ಸದಾಶಯುಗಳು

ಅಭಿವೃದ್ಧಿಯ ಹರಿಕಾರ ನಜೀರ್ ಸಾಬ್

ಜೆ.ಸಿ. ಅಂಗಡಿ ಚಿಕ್ಕಣ್ಣನವರು

ಮಾಜಿ ಪುರಸಭಾ ಅಧ್ಯಕ್ಷರು,

ಗುಂಡ್ಲುಪೇಟೆ.

ಶ್ರೀ ಅಬ್ದುಲ್ ನಜೀರ್ ಸಾಬ್ ಮೈಸೂರಿನಲ್ಲಿ ವಿದ್ಯಾಬ್ಯಾಸ ಮಾಡುತ್ತಿದ್ದಾಗ ಅನಾರೋಗ್ಯಕ್ಕೆ ತುತ್ತಾಗಿ ಗುಂಡ್ಲುಪೇಟೆಗೆ ಮರಳಿದರು ಇಂತಹ ಸಂದರ್ಭದಲ್ಲಿ ನಜೀರ್ ಸಾಬ್ ನಮ್ಮ ಅಂಗಡಿಗೆ ಬರಲು ಪ್ರಾರಂಭಿಸಿದರು. ನಂತರ ನಮ್ಮಿಬ್ಬರಿಗೆ ಪರಿಚಯವಾಯಿತು. ರಾಜ್ಯರಾಜಕಾರಣದತ್ತ ಒಲವಿದ್ದ ನಜೀರ್ ಸಾಬ್ ನಮ್ಮ ಅಂಗಡಿಯಲ್ಲೇ ಪತ್ರಿಕೆಗಳನ್ನು ಓದುತಿದ್ದರು ಅವರಿಗೆ ನಮ್ಮ ಅಂಗಡಿಯ ಸಿಗರೇಟು ಚಹಾ ಇಲ್ಲದೆ ದಿನ ಕಳೆಯುತ್ತಿರಲಿಲ್ಲ.

ಆಗಿನ ದಿನಗಳಲ್ಲಿ ಗುಂಡ್ಲುಪೇಟೆಯ ಪುರಸಭೆಯ ಆಳ್ವಿಕೆ ಹಣವಂತರ ಕೈಯಲ್ಲಿತ್ತು ಈ ಮೇಲ್ವರ್ಗದ ಜನರ ದಬ್ಬಾಳಿಕೆಯನ್ನು ಕೊನೆಗಾಣಿಸುವ ಧೃಢ ನಿರ್ಧಾರಕೊಂಡೆವು. ಇದೇ ಹೊತ್ತಿನಲ್ಲಿ ಮೈಸೂರು ರಾಜ್ಯದ 2ನೇ ಸಾರ್ವತ್ರಿಕ ಚುನಾವಣೆ ಹತ್ತಿರ ಬಂದಿತು. ಆಗ ಗುಂಡ್ಲುಪೇಟೆಯ ವಿ.ಕೆ. ನಂಜುಂಡಯ್ಯ ಬರಗಿ ನಾಗಮಲ್ಲಪ್ಪ ಜೆ.ಸಿ. ಗುರುಮಲ್ಲಪ್ಪ. ಮುಂತಾದವರು ಶ್ರೀಮತಿ ಕೆ.ಎಸ್. ನಾಗರತ್ನಮ್ಮ ಅವರನ್ನು ಕರೆತಂದು ಚುನಾವಣೆಗೆ ನಿಲ್ಲಿಸಿ ಜಯಶೀಲರನ್ನಾಗಿ ಮಾಡಿದರು ನಂತರ ನಾನು ಅಬ್ದುಲ್ ನಜೀರ್ ಸಾಬ್ ಜಿ.ಬಿ. ಚಿಕ್ಕಣ್ಣ 1960 ರಿಂದ 1964 ರವರೆಗೆ ಜನರನ್ನು ಸಂಘಟಿಸುದೆವು. 1964 ರಲ್ಲಿ ನಡೆದ ಪುರಸಭಾ ಚುನಾವಣೆಯಲ್ಲಿ ನಮ್ಮಗಳ ಮತ್ತು ಜನರ ಒತ್ತಾಯದ ಮೇಲೆ ಸ್ಪರ್ಧಿಸಿ ಜಯ ಗಳಿಸಿದರು. ನಂತರ 1968 ರಿಂದ 69 ರಲ್ಲಿ ನಡೆದ ಮತ್ತೊಂದು ಪುರಸಭಾ ಚುನಾವಣೆಯಲ್ಲಿ ಗೆದ್ದು ಉಪಾಧ್ಯಕ್ಷರಾದರು. 1969 -70 ಹಾಗೂ 1970 ರಿಂದ 71 ಅವಧಿಯಲ್ಲಿ ಗುಂಡ್ಲುಪೇಟೆ ಪುರಸಭಾ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ತದನಂತರ ಕಾಂಗ್ರೆಸ್ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿ ಕಾರ್ಯ ನಿರ್ವಹಿಸಿದರು. ಇವರ ಸರಳತೆ, ಪ್ರಾಮಾಣಿಕತೆ, ಅಪಾರವಾದ ಜ್ಞಾನವನ್ನು ಗಮನಿಸಿದ ನಜೀರ್ ಸಾಬ್‌ರಿಂದ " ಅಮ್ಮ " ಎಂದೇ ಕರೆಯಲ್ಪಡುತ್ತಿದ್ದ ಶ್ರೀಮತಿ ಕೆ.ಎಸ್. ನಾಗರತ್ನಮ್ಮ ನವರು ನಜೀರ್ ಸಾಬ್‌ರನ್ನು 1976 ರಲ್ಲಿ ವಿಧಾನ ಪರಿಷತ್ ಸದಸ್ಯರಾಗಿ ನೇಮಿಸಿದರು.

ಶ್ರೀಯುತ ನಜೀರ್‌ಸಾಬ್‌ರವರು ವಿಧಾನ ಪರಿಷತ್ ಸದಸ್ಯರಾಗಿದ್ದಾಗ ಗುಂಡ್ಲುಪೇಟೆಯ ಅಭಿವೃದ್ಧಿಗಾಗಿ ಹಲವಾರು ಕ್ರಮಗಳನ್ನು ಕೈಗೊಂಡರು ಅವುಗಳಲ್ಲಿ ಸಾರ್ವಜನಿಕ ಆಸ್ಪತ್ರೆಯ ನಿರ್ಮಾಣ ಕಾರ್ಯ, ಸರ್ಕಾರಿ ಬಸ್ ನಿಲ್ದಾಣ ಮತ್ತು ಬಸ್ ಡಿಪೋ ಸ್ಥಾಪನೆ, ನಲ್ಲೂರು ಅಮಾನಿ ಕೆರೆ ನಿರ್ಮಾಣ ಕಲ್ಲು ಕಟ್ಟೆಹಳ್ಳಿ, ಮುನ್ಸಿಪಲ್ ಮಾರು ಕಟ್ಟೆಯ ನಿರ್ಮಾಣಗಳಲ್ಲಿ ತಾನೇ ಮುಂದಾಳತ್ವ ವಹಿಸಿ ನಮ್ಮಗಳ ಸಹಕಾರದೊಂದಿಗೆ ಯಶಸ್ವಿಯಾಗಿ ಪೂರ್ಣಗೊಳಿಸಿದರು. ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರ ಕ್ರಾಂತಿ ತಂದು 1972 ರಲ್ಲಿ ಜವಹರ ಶಿಕ್ಷಣ ಸಂಸ್ಥೆಯನ್ನು ಹುಟ್ಟು ಹಾಕಿ ಸಂಸ್ಥಾಪಕ ಅಧ್ಯಕ್ಷರಾದರು.

ನಜೀರ್ ಸಾಬ್, ನಾನು ಜಿ.ಬಿ. ಚಿಕ್ಕಣ್ಣ ಬರಗಿ ನಾಗಮಲ್ಲಪ್ಪ ಕೆ.ಎಸ್. ನಾಗರತ್ನಮ್ಮ ನಾವು ಹಿಂಬಾಲಕರಾಗಿ, ನೆಚ್ಚಿನ ಶಿಷ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದೆವು ಇದೇ ಸಂದರ್ಭದಲ್ಲಿ ನಜೀರ್ ಸಾಬ್‌ರು ಕಾಂಗ್ರೆಸ್ ಪಕ್ಷದಿಂದ ಟಿಕೆಟ್ ನೀಡದಿದ್ದಕ್ಕೆ ಬೇಸರಗೊಂಡು ಬಂಗಾರಪ್ಪ ನವರ ಕ್ರಾಂತಿರಂಗ ಪಕ್ಷ ಸೇರಿದರು. ನಂತರ ಅದೇ ಪಕ್ಷದಿಂದ ಗ್ರಾಮೀಣಾಭಿವೃದ್ಧಿ ಸಚಿವರಾಗಿ ಆಯ್ಕೆಯಾದರು. ಅವರು ಕಾಂಗ್ರೆಸ್ ಪಕ್ಷ ತ್ಯಜಿಸಿದರೂ ನಮ್ಮಗಳ ಸ್ನೇಹ, ಅಮ್ಮನವರ ಮೇಲಿನ ಅಭಿಮಾನಕ್ಕೆ ಧಕ್ಕೆಯಾಗಲಿಲ್ಲ. ನಮ್ಮ ನಡುವಿನ ಸಂಬಂಧವನ್ನು ಕಾಪಾಡಿಕೊಂಡದ್ದು ಅವರ ಹೆಗ್ಗಳಿಕೆಯಾಗಿದೆ.

ನಜೀರ್ ಸಾಬರು ಗ್ರಾಮೀಣಾಭಿವೃದ್ಧಿ ಮಂತ್ರಿಯಾಗಿ ಹಳ್ಳಿಗಾಡಿನ ಜನರಿಗೆ ಶುದ್ಧ ಕುಡಿಯುವ ನೀರಿನ ಪೂರೈಕೆ ಮಾಡುವ ದೃಢ ಸಂಕಲ್ಪ ಮಾಡಿ ಅದರಲ್ಲಿ ಯಶಸ್ವಿಯಾದರು ಇದಕ್ಕಾಗಿ ಹಗಲಿರುಳು ಶ್ರಮಿಸಿ ತಮ್ಮ ಆರೋಗ್ಯವನ್ನು ಕಡೆಗಣಿಸಿದರು. ಇದು ಅವರಿಗೆ ಜನರ ಮೇಲಿದ್ದ ಕಾಳಜಿಯನ್ನು ತಿಳಿಸುತ್ತದೆ. ನಂತರ ದಿನ ಕಳೆದಂತೆ ಕರ್ನಾಟಕದ ಎಲ್ಲಾ ಹಳ್ಳಿ ಹಳ್ಳಿಗಲಿಗೂ ನೀರು ಸರಬರಾಜು ಮಾಡುವ ಮೂಲಕ "ನೀರ್ ಸಾಬ್" ಎಂದು ಪ್ರಖ್ಯಾತಿಯಾದರು

ನಜೀರ್ ಸಾಬ್‌ರು ಯಾವಾಗಲೂ ಸರಳವಾಗಿ ಜೀವಿಸಿ ಉದಾತ್ತಾ ಚಿಂತನೆಗಳನ್ನು ಮಾಡುತ್ತಿದ್ದರು. ಹಳ್ಳಿಯ ಜನರನ್ನು ಕಂಡರೆ ತಾವೇ ಅವರನ್ನು ಕರೆದು ಅವರ ಕಷ್ಟ ಸುಖಗಳನ್ನು ವಿಚಾರಿಸುತ್ತಿದ್ದರು. ಇದು ಅವರ ದೊಡ್ಡಗುಣವಾಗಿತ್ತು. ಆದರೆ ನಜೀರ್ ಸಾಬ್ ಇಂದು ನಮ್ಮ ಜೊತೆ ಇಲ್ಲದಿದ್ದರೂ ನಮ್ಮಗಳ ಹೃದಯದಲ್ಲಿ ಇನ್ನು ಅಚ್ಚ ಹಸಿರಾಗಿ ಉಳಿದಿದ್ದಾರೆ ಅವರ ಆದರ್ಶ ಹಾದಿಯಲ್ಲಿ ನಡೆಯಬೇಕಾದದ್ದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.[31]

ಗ್ರಾಮೀಣಾಭಿವೃದ್ಧಿಯ ರೂವಾರಿ

ಶ್ರೀ ಅನ್ವರ್ ಪಾಷ

ಖಜಾಂಚಿಗಳು

ಶ್ರೀ ಜವಹರ್ ಶಿಕ್ಷಣ ಸಂಸ್ಥೆ,

ಗುಂಡ್ಲುಪೇಟೆ

ಅಬ್ದುಲ್ ನಜೀರ್ ಸಾಬ್‌ರವರು ಎಂದಿಗೂ ತಮ್ಮ ಬಗ್ಗೆ ಚಿಂತಿಸಿದವರಲ್ಲ. ಅವರು ರಾಜಕೀಯ ಪ್ರವೇಶಿಸಿ ಜನಸೇವೆ ಮಾಡಲಿ ಎಂದು ತೀರ್ಮಾನಿಸಿ ನಮ್ಮ ತಂದೆ ಅವರಿಗೆ ಸಂಪೂರ್ಣ ಸಹಕಾರ ನೀಡಿದರು. ನಾನು ಸಹ ನನ್ನ ಸಹೋದರನ ರಾಜಕೀಯ ಏಳಿಗೆಗಾಗಿ ಮತ್ತು ಗುಂಡ್ಲುಪೇಟೆಯಲ್ಲಿ ನಮ್ಮ ಜಮೀನಿನ ನಿರ್ವಹಣೆಗಾಗಿ ನನ್ನ ನೌಕಾದಳದ ಸರ್ಕಾರಿ ಸೇವೆಯನ್ನು ಮೊಟಕುಗೊಳಿಸಿ ಕುಟುಂಬದ ಜವಾಬ್ದಾರಿಯನ್ನು ವಹಿಸಿಕೊಂಡೆ ನಂತರ ನನ್ನ ಸಹೋದರ ರಾಜಕೀಯದಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡರು.

ನಜೀರ್ ಸಾಬ್ ಸಾರ್ವಜನಿಕ ಜೀವನದಲ್ಲಿ ಎಷ್ಟು ತಲ್ಲೀನರಾಗಿದ್ದರು ಎಂಬುದಕ್ಕೆ ಅವರಿಗಿದ್ದ ಒಬ್ಬ ಮಗನನ್ನು ಎತ್ತಿ ಮುದ್ದಾಡಲು ಸಮಯವಿರಲಿಲ. ಸಾಮಾನ್ಯ ಕಾರ್ಯಕರ್ತನಿಂದ ವಿಧಾನ ಪರಿಷತ್ ಸದಸ್ಯರಾಗಿರುವವರೆಗೆ ಜನರು ಬೆಳಿಗ್ಗೆ ಬಂದು ಎಬ್ಬಿಸುತ್ತಿದ್ದರು. ರಾತ್ರಿ ಮನೆಯಲ್ಲಿ ಮಕ್ಕಳು ಮಲಗಿದ ಮೇಲೆ ಮನೆಗೆ ಬರುತ್ತಿದ್ದರು. ಮಂತ್ರಿಗಳಾಗಿದ್ದಾಗ ಬೇರೆ ಮಕ್ಕಳನ್ನು ಎತ್ತಿ ಮುದ್ದಾಡುತ್ತಿದ್ದುದನ್ನು ಕಂಡ ನಾನು "ಈ ಮಕ್ಕಳೇ ಅದೃಷ್ಟವಂತರು" ನಿನ್ನ ಮಗನನ್ನು ನೀನು ಮುದ್ದಾಡುವುದನ್ನು ನಾವು ಕಾಣಲಿಲ್ಲವೆಂದಾಗ ನಾನು ಮುದ್ದಾಡಿದ್ದೇನೆ ಎಂದು ಸುಳ್ಳು ಸಮರ್ಥನೆ ನೀಡುತ್ತಿದ್ದರು.

ನನ್ನ ಸಹೋದರ ನಜೀರ್ ಸಾಬ್‌ರಿಗೆ ಹಳ್ಳಿಗಾಡಿನ ಜನರನ್ನು ಕಂಡಾಗ ಅವರಿಗೆ ಸೇವೆ ಮಾಡಬೇಕೆನ್ನುವ ತವಕವಿತ್ತು. ಅವರ ಚಿಂತನೆ ಎಲ್ಲಿಯವರೆಗೆ ಇತ್ತು ಎನ್ನುವುದಕ್ಕೆ ಒಂದು ಸಣ್ಣ ದೃಷ್ಟಾಂತ "ನಜೀರ್ ಸಾಬ್‌ರಿಗೆ ಟೈಫಾಯಿಡ್ ಜ್ವರ ಬಂದಿತ್ತು. ಗುಂಡ್ಲುಪೇಟೆಯ ವೈದ್ಯರು ನಜೀರ್ ಸಾಬ್ ಉತ್ತಮ ರೋಗಿಯಂತೆ ವರ್ತಿಸುವುದು ಕಷ್ಟ ಸಾಧ್ಯ. ಟೈಫಾಯಿಡ್ ಮತ್ತೆ ಬರುವ ಭೀತಿ ಇದೆ" ಎಂದು ನನಗೆ ತಿಳಿಸಿದರು. ಅದರಂತೆ ನಾನು ನಜೀರ್ ಸಾಬ್‌ರಿಗೆ ಸಹೋದರ ನಾನು ನಿಮ್ಮ ಜೊತೆ ಬೆಂಗಳೂರಿಗೆ ಬರುತ್ತೇನೆ ಎಂದಾಗ ಅವರಿಗೆ ಅರ್ಥವಾಯಿತು. ಈತ ನನ್ನ ಬೇನ್ನೆರಿದ್ದನೆ ಎಂದು ಬೆಂಗಳೂರಿಗೆ ಹೋದನಂತರ ಮೂರು ದಿನಗಳ ವರೆಗೆ ಜನರನ್ನು ಸಂದರ್ಶಿಸಲು ಬಿಡಲಿಲ್ಲ. ಇದು ನನ್ನ ಕೈವಾಡವೆಂದು ಅವರಿಗೆ ಅರ್ಥವಾಯಿತು.

ಮತ್ತೆ ಮೂರನೆ ದಿನ ಜನರನ್ನು ನೋಡಲು ಮಹಡಿಯಿಂದ ಕೆಳಗೆ ಇಳಿಯುತ್ತಿದ್ದಾಗ ನಾನು "ಎಲ್ಲಿಗೆ ಹೋಗುತ್ತಿದ್ದೀರಿ" ಎಂದು ಪ್ರಶ್ನಿಸಿದೆ. ಅದಕ್ಕೆ ಅವರು ಕುಪಿತಗೊಂಡು ನೀನು ಇಲ್ಲಿಗೆ ಏತಕ್ಕೆ ಬಂದಿರುವೆ? ಜನರಿಗೆ ತೊಂದರೆ ಕೊಡಲು ಬಂದಿದ್ದೀಯಾ ? ಜನ ಇಲ್ಲಿಗೆ ಏತಕ್ಕಾಗಿ ಬರುತ್ತಾರೆ? ಏನಾದರೂ ಕೆಲಸವಿದ್ದರೆ ಸಚಿವರನ್ನು ಕಂಡು ಮಾಡಿಸಿಕೊಳ್ಳೋಣವೆಂದು ಬಂದಿರುತ್ತಾರೆ. ಜನ ಇಲ್ಲಿಗೆ ಬರುವುದಕ್ಕೆ ಸಾಲ ಮಾಡಿಕೊಂಡು ಬಂದಿರುತ್ತಾರೆ. ಮನೆಯಲ್ಲಿರುವ ಪದಾರ್ಥಗಳನ್ನು ಗಿರವಿಗೆ ಇಟ್ಟು ಬಂದಿರುತ್ತಾರೆ.

ಬೆಳಿಗ್ಗೆ ನೋಡಿ ಸಂಜೆ ವಾಪಸ್ಸೋಗೋಣ ಎಂದು ಸ್ವಲ್ಪ ಹಣ ತಂದಿರುತ್ತಾರೆ. ಈ ದಿನ ಅವರು ನನ್ನನ್ನು ನೋಡದೇ ಇದ್ದರೆ ಅವರು ಉಳಿದು ಕೊಳ್ಳುವುದು ಎಲ್ಲಿ? ಊಟ ಮಾಡುವುದು ಎಲ್ಲಿ? ನೀನು ಜನರಿಗೆ ತೊಂದರೆ ಕೊಡಲು ಬಂದಿದ್ದೀಯಾ? ಎಂದು ನನ್ನನ್ನು ಗದರಿಸಿದರು. ಅದಕ್ಕೆ ನಾನು ಅವರಿಗೆ ವಿನಯದಿಂದಲೇ "ಅಣ್ಣ ಜನರಿಗೆ 15 ದಿನ ತೊಂದರೆ ಕೊಡುವುದು ಅಥವಾ ಮೂರು ತಿಂಗಳು ತೊಂದರೆ ಕೊಡುವುದು ಇಷ್ಟನಾ ಎಂದು ಮಾರ್ಮಿಕವಾಗಿ ಪ್ರಶ್ನಿಸಿದೆ. " ಅದಕ್ಕೆ ಅವರು ಏನಯ್ಯಾ ಅದು ಸರಿಯಾಗಿ ಹೇಳು ಎಂದು ಮರು ಪ್ರಶ್ನಿಸಿದರು. ಇದು ಅವರ ಜನಪರ ಕಾಳಜಿಯ ಒಂದು ಸಣ್ಣ ಉದಾಹರಣೆಯಾಗಿದೆ.

ನಜೀರ್ ಸಾಬ್‌ರಿಗೆ ಓದಿದ ಓದಾಗಲಿ ಅಥವಾ ವ್ಯಕ್ತಿಗಳಾಗಲಿ ಎಷ್ಟು ವರ್ಷಗಲು ಕಳೆದಿದ್ದರೂ ಅವರ ಹೆಸರುಗಳನ್ನು ನೆನಪಿನಲ್ಲಿಡುವಷ್ಟು ವಿಶೇಷ ಜ್ಞಾಪಕಶಕ್ತಿ ಅವರಲ್ಲಿತ್ತು. ಸಾಮಾನ್ಯವಾಗಿ ದೊಡ್ಡ ವ್ಯಕ್ತಿಗಳು, ಸಾಮಾನ್ಯ ಜನರಿಂದ ವಂದನೆ ಸ್ವೀಕರಿಸುವುದನ್ನು ಅಪೇಕ್ಷೆ ಪಡುತ್ತಾರೆ. ಆದರೆ ನಜೀರ್ ಸಾಬ್ ಸಾಮಾನ್ಯ ಮನುಷ್ಯರನ್ನು ಕಂಡೊಡನೆ ಅವರಿಗಿಂತ ಮುಂಚಿತವಾಗಿ ಇವರೇ ನಮಸ್ಕಾರಗಳನ್ನು ತಿಳಿಸುತ್ತಿದ್ದರು. ಸಾಮಾನ್ಯ ಮನುಷ್ಯನಿಗೆ ಅಧಿಕಾರ ಇಲ್ಲವೇ ಐಶ್ವರ್ಯ ಬಂದಾಗ ಅಹಂಕಾರ ಬರುವುದು ಸಹಜವಾದ ಪ್ರಕೃತಿಯ ನಿಯಮ ಆದರೆ ಅವರು ಮಂತ್ರಿಯಾದ ಮೇಲೂ ಸರಳ ಜೀವನ ನಡೆಸಿದ್ದು, ಅವರ ತತ್ವನಿಷ್ಠೆತೆಗೆ ಸಾಕ್ಷಿಯಾಗಿದೆ.

ಅಬ್ದುಲ್ ನಜೀರ್ ಸಾಬ್‌ರಿಗೆ ಕ್ಯಾನ್ಸರ್ ರೋಗ ಕಾಣಿಸಿಕೊಂಡಿತು. ಆಗ ಚಿಕಿತ್ಸೆಗಾಗಿ ಅಮೇರಿಕಾಕ್ಕೆ ತೆರಳಿ ವಾಪಸ್ಸು ಬರುವಾಗ ಮುಂಬಯಿ ವಿಮಾನ ನಿಲ್ದಾಣದಲ್ಲಿ ನಡೆದ ಒಂದು ಘಟನೆ ಅವರಿಗಿದ್ದ ದೇಶ ಭಕ್ತಿಯನ್ನು ತಿಳಿಸುತ್ತದೆ. ಇಪ್ಪತ್ತೆರಡು ಘಂಟೆಗಳ ವಾಯು ಪ್ರಮಾಣದಲ್ಲಿ ಎರಡು ಕಿತ್ತಳೆ ಹಣ್ಣು ಸೇವಿಸಿದೆ ಅದು ವಾಂತಿಯಾಯಿತು ಎಂದು ಹೇಳಿ ಮಾತನ್ನು ಬದಲಾಯಿಸಿ ನನ್ನನ್ನು ಕುರಿತು ನಿನಗೆ ಗೊತ್ತೇನಯ್ಯಾ ಅಮೇರಿಕಾದಲ್ಲಿ ಭಾರತ ದೇಶದ ಬಾವುಟ ಹಾರುತ್ತಿದೆ ಸ್ಲೋನ್ ಕೇಟರಿಂಗ್ ಆಸ್ಪತ್ರೆಯಲ್ಲಿ 10,000 ಹಾಸಿಗೆ ಇದ್ದು ಪ್ರಪಂಚದ ಅತಿ ದೊಡ್ಡ ಆಸ್ಪತ್ರೆಯಾಗಿದೆ. ಈ ಆಸ್ಪತ್ರೆಯ 3 ಜನ ಮುಖ್ಯಸ್ಥರು ಭಾರತೀಯರು, ಶೇ. 90ರಷ್ಟು ದಾದಿಯರು ಕೇಳರ ರಾಜ್ಯದವರು ಅಂದರೆ ಕಟ್ಟಡ ಹಾಗೂ ಹಣ ಮಾತ್ರ ಅಮೇರಿಕಾ ದೇಶದ್ದು ಉಳಿದದ್ದು ಭಾರತದ್ದಾಗಿದೆ ಹಾಗಾಗಿ ಭಾರತದ ಗೌರವ ಬಹಳ ಎತ್ತರದಲ್ಲಿದೆ ಎಂದು ನನಗೆ ಬಹಳ ಸಂತೋಷದಿಂದ ತಿಳಿಸಿದರು. ಇನ್ನೇನು ಮರಣ ಶಂಯ್ಯೆಯಲ್ಲಿ ಇರುವಂತಹ ವ್ಯಕ್ತಿ ತನ್ನ ಎಲ್ಲಾ ನೋವುಗಳನ್ನು ಮರೆತು ಭಾರತದ ಬಗ್ಗೆ ಇರುವ ದೇಶ ಭಕ್ತಿಯನ್ನು ಪ್ರದರ್ಶಿಸಿದರು.[32]

ಅಬ್ದುಲ್ ನಜೀರ್‌ಸಾಬ್‌ರವರು ಗ್ರಾಮೀಣಾಭಿವೃದ್ಧಿ ಸಚಿವರಾಗಿ ಹಳ್ಳಿಗಳಿಗೆ ಕುಡಿಯುವ ನೀರನ್ನು ಪೂರೈಸಿ "ನೀರ್ ಸಾಬ್" ಎಂದು ಹೆಸರುಗಳಿಸಿದರು. ಸರಳತೆ, ಪ್ರಮಾಣಿಕತೆ ಮತ್ತು ಮಾನವೀಯತೆಯ ಪ್ರತಿರೂಪವಾಗಿದ್ದರು. ಇಂದಿಗೂ ಸಹ ನಜೀರ್ ಸಾಬ್‌ರ ಹೆಸರು ಕರ್ನಾಟಕದ ಜನರ ಹೃದಯಗಳಲ್ಲಿ ಅಚ್ಚ ಹಸಿರಾಗಿರುವುದು ಅವರ ಜನಪರ ಕಾರ್ಯಗಳಿಗೆ ಸಿಕ್ಕಂತಹ ಗೌರವವಾಗಿದೆ.

ಎತ್ತರಕ್ಕೆ ಬೆಳೆಯ ಬಲ್ಲ ಶಕ್ತಿ ಅವರಿಗಿತ್ತು

ಸಿದ್ದರಾಮಯ್ಯನವರು
ಕಾಂಗ್ರೆಸ್ ಮುಖಂಡರು

ಶ್ರೀಯುತ ಸಿದ್ದರಾಮಯ್ಯನವರು 1980 ರ ದಶಕದಲ್ಲಿ ಅಸ್ತಿತ್ವಕ್ಕೆ ಬಂದ ಕಾಂಗ್ರೆಸ್ಸೇತರ ಸಮ್ಮಿಶ್ರ ಸರ್ಕಾರದಲ್ಲಿ ಅಬ್ದುಲ್ ನಜೀರ್ ಸಾಬ್‌ರು ಸಹೋದ್ಯೋಗಿಗಳಾಗಿದ್ದರು. ಅವರು ನಜೀರ್ ಸಾಬ್ ಕುರಿತು ತಮ್ಮದೇ ಅಭಿಪ್ರಾಯವನ್ನು ತಿಳಿಸಿದ್ದಾರೆ.

ಕಾಂಗ್ರೇಸ್ಸೇತರ ಸರ್ಕಾರ - ಅಸ್ತಿತ್ವಕ್ಕೆ ಬಂದಾಗ ನಾವು ಸಹೋದ್ಯೋಗಿಗಳಾಗಿದ್ದು, ಈ ಒಡನಾಟದಲ್ಲಿ ನಾವು ತೀರ ಹತ್ತಿರದ ಗೆಳೆಯರಾಗಿ ಬೆಳೆದೆವು ನಜೀರ್ ಸಾಬ್‌ರ ನೇರ ನಡೆ, ನುಡಿ, ಸಂಸ್ಕೃತಿ, ನಿಷ್ಕಳಂಕ ಪ್ರೀತಿ ಯಾರನ್ನಾದರೂ ಗೆದ್ದು ಬಿಡುತ್ತಿದ್ದವು. ಮನುಷ್ಯ ಮನುಷ್ಯರ ನಡುವಿನ ಮಧುರ ಸಂಬಂಧವೆನೆಂಬುದನ್ನು ನಜೀರ್ ಸಾಬ್‌ರೊಡನೆ ಸ್ನೇಹಕ್ಕೊಳಗಾದವರನ್ನು ಕೇಳಿ ತಿಳಿಯಬಹುದು, ಗಾಂಧಿ, ಜಯಪ್ರಕಾಶ ನಾರಾಯಣ ರಾಮ ಮನೋಹರ ಲೋಹಿಯಾರ ತೀವ್ರ ಪ್ರಬಾವಕ್ಕೊಳಗಾದ ನಜೀರ್‌ಸಾಬ್, ಗ್ರಾಮೀಣಾಭಿವೃದ್ಧಿಗೆ, ಅಧಿಕಾರ ವಿಕೇಂದ್ರಿಕರಣಕ್ಕೆ, ಪಂಚಾಯತ್ ರಾಜ್ ಪುನಶ್ಚೇತನಕ್ಕೆ ಹೊಂದಿದ್ದ ಬದ್ಧತೆ, ತಳೆದ ನಿಲುವು ಇಂದಿಗೂ ಇತಿಹಾಸದಲ್ಲಿ ನಳನಳಿಸುವ ದಾಖಲೆಯಾಗಿದೆ ಶುದ್ಧ ಕುಡಿಯುವ ನೀರು, ಜನತಾ ವಸತಿ ಯೋಜನೆಗಳು, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ, ಅಂತ್ಯೋದಯ ಕಾರ್ಯಕ್ರಮಗಳು ಇವರ ಕಾಲದಲ್ಲಿ ಅಭೂತಪೂರ್ವವಾಗಿ ಅನುಷ್ಠಾನ ಗೊಂಡಿದ್ದನ್ನು ನಾಡು ಇಂದಿಗೂ ಕೃತಜ್ಞತೆಯಿಂದ ನೆನೆಯುತ್ತಿರುವುದನ್ನು ನಾವು ಕಾಣುತ್ತಿದ್ದೇವೆ.[33]

ನೀರ್ ಸಾಬ್‌ರನ್ನು ನೆನೆದಾಗ ....

ಶ್ರೀ ಬಸವರಾಜ ಹೊರಟ್ಟಿ
ಜೆ.ಡಿ.ಎಸ್. ಮುಖಂಡರು

"ನೀರ್ ಸಾಬ್" ಎಂದೇ ಖ್ಯಾತರಾಗಿರುವ ಶ್ರೀ ಅಬ್ದುಲ್ ನಜೀರ್ ಸಾಬ್ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಮಹತ್ವ ಹೆಚ್ಚಿಸಿದ ವ್ಯಕ್ತಿ. ಅಲ್ಲಿಯವರೆಗೆ ಜನ ಸಾಮಾನ್ಯರ ದೃಷ್ಟಿಯಲ್ಲಿ ಸಾಮಾನ್ಯ ಇಲಾಖೆಯಾದ ಗ್ರಾಮೀಣಾಭಿವೃದ್ಧಿ ಇಲಾಖೆ ಒಮ್ಮೆಲೆ ಮಹತ್ವದ ಇಲಾಖೆಯಾದದ್ದು ನಜೀರ್ ಸಾಬ್‌ರಿಂದಾಗಿ ದೇಶದಲ್ಲೇ ಪ್ರಥಮ ಬಾರಿಗೆ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತಂದು ಇಡೀ ವಿಶ್ವಾದ ಗಮನ ಈ ಕಡೆ ಹರಿಯುವಂತೆ ಮಾಡಿದವರು ನಜೀರ್‌ಸಾಬ್ ಗ್ರಾಮಾಂತರ ಪ್ರದೇಶಗಳಲ್ಲಿ ಮನೆ ಮನೆಗೂ ನೀರು ಹರಿಸಿ "ನೀರ್ ಸಾಬ್" ಆದರು ಅದರ ಹಿಂದೆ ಇದ್ದ ಮಂತ್ರಿಗಳು "ಬೋರ್ ವೆಲ್" ಮಂತ್ರಿಗಳೆಂದು ಜನರ ಅಪಹಾಸ್ಯಕ್ಕೆ ಗುರಿಯಾಗಿದ್ದರು. ಆದರೆ ಗ್ರಾಮೀಣ ನೀರು ಸರಬರಾಜು ಯೋಜನೆಯನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸಿ ಖ್ಯಾತಿಗಳಸಿದವರು ನಜೀರ್ ಸಾಬ್.

ಗುಂಡ್ಲುಪೇಟೆಯ ಸಾಮ್ರಾಜ್ಯಿಯಂತಿದ್ದ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ಅಶ್ರಯದಲ್ಲಿ ಬೆಳೆದು ಬಂದ ನಜೀರ್ ಸಾಬ್ ಮುಂದೆ ಆ ಕ್ಷೇತ್ರ ಹೆಮ್ಮೆ ಪಟ್ಟುಕೊಳ್ಳುವಷ್ಟು ಬೆಳೆದರು. ತಾವು ನಂಬಿದ ತತ್ವ ಸಿದ್ಧಾಂತಗಳಿಗೆ ಅಂಟುಕೊಂಡಿದ್ದ ಅವರು ಶುದ್ಧ ಹಸ್ತರು

ಹಿಂದೆ ಅರಣ್ಯ ಸಚಿವರಾಗಿದ್ದ ಜಿ. ಮಾದೇಗೌಡರು ಒಮ್ಮೆ ಶಾಸಕರನ್ನು ಬಂಡೀಪುರ ಅರಣ್ಯ ಧಾಮಕ್ಕೆ ಕರೆದುಕೊಂಡು ಹೋಗಿದ್ದರು. ಎಲ್ಲರೂ ಹೋದ ನಂತರ ನಜೀರ್‌ಸಾಬ್ ನನ್ನನ್ನು ಕರೆದು "ಮುನ್ನಾ ನಿನ್ನ ಹತ್ತಿರ 100ರೂ. ಇದ್ದರೆ ಕೊಡು ಊರಿಗೆ ಹೋಗ ಬೇಕು" ಎಂದು ಕೇಳಿದರು. ಅವರ ಚಿಕ್ಕ ವಯಸ್ಸಿನವನಾಗಿದ್ದ ನನ್ನನ್ನು ಯಾವಾಗಲೂ ಪ್ರೀತಿಯಿಂದ "ಮುನ್ನ" ಎಂದು ಕರೆಯುತ್ತಿದ್ದರು. ವಿಧಾನ ಪರಿಷತ್ ಸದಸ್ಯರಾಗಿದ್ದ ಅವರು ಕೈಯಲ್ಲಿದ್ದ ಹಣವನ್ನೆಲ್ಲಾ ಪುಸ್ತಕ ಕೊಂಡುಕೊಳ್ಳಲು ಖರ್ಚು ಮಾಡುತ್ತಿದ್ದರಿಂದ ಅವರ ಕೈಯಲ್ಲಿ ಹಣ ಇರುತ್ತಿರಲಿಲ್ಲ. ಇದು ಅವರ ಸರಳತೆಯನ್ನು ಎತ್ತಿ ತೋರಿಸುತ್ತದೆ.

ಅಬ್ದುಲ್ ನಜೀರ್ ಸಾಬ್ ಒಬ್ಬ ಕನಸುಗಾರ ಅವರ ಕನಸುಗಳು ಆಕಾಶದಲ್ಲಿ ರೂಪುಗೊಂಡ ಕಲ್ಪನೆಯ ಮೋಡಗಳಲ್ಲ. ಅವು ಓದಿನಿಂದ, ವಿಚಾರದಿಂದ, ಮಂಥನದಿಂದ ಚರ್ಚೆಯಿಂದ ಕೊರೆದ ಗಟ್ಟಿ ಶಿಲ್ಪಗಳು ಆದರಿಂದಲೇ ಅವರ ಕಲ್ಪನೆಯ ಕೂಸಾದ ಪಂಚಾಯತ್ ರಾಜ್ ವ್ಯವಸ್ಥೆ ದೇಶದಲ್ಲೇ ಮಾದರಿಯಾಗಿ ಕೇಂದ್ರ ಸರ್ಕಾರ ಅದನ್ನು ದೇಶಾದ್ಯಂತ ಜಾರಿಗೆ ತರಲು ಸಹಾಯವಾಯಿತು. ಅವರು ಜಾರಿಗೆ ತಂದ ಜಿಲ್ಲಾ ಪರಿಷತ್ ಮಂಡಲ ಪಂಚಾಯತ್ ವ್ಯವಸ್ಥೆ ಈಗಿನ ಜಿಲ್ಲಾ ಪಂಚಾಯತ್ ಗ್ರಾಮ ಪಂಚಾಯತ್ ಸದೃಢವಾಗಿತ್ತೆಂದು ನಮ್ಮ ಈಗಿನ ಅನುಭವದಿಂದ ಗೊತ್ತಾಗಿದೆ ನಜೀರ್ ಸಾಬ್ ಕಲ್ಪನೆಯ ಪಂಚಾಯತ್ ರಾಜ್ ವ್ಯವಸ್ಥೆಗೂ ಈಗಿನ ವ್ಯವಸ್ಥೆಗೂ ಅಜಗಜಾಂತರ ವ್ಯತ್ಯಾಸವಿರುವುದನ್ನು ಕಾಣಬಹುದಾಗಿದೆ. ಗ್ರಾಮ ಸ್ವರಾಜ್ಯ ಜಾರಿಯಲ್ಲಿರುವುದೇ ಸಂತೋಷದ ವಿಷಯವಾಗಿದೆ.[34]

1986ರಲ್ಲಿ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ ಶಿಕ್ಷಕರಿಗೆ ಶೇ. 3ರಷ್ಟು ಅನುಧಾನ ಬಿಡುಗಡೆ ಮಾಡುವಂತೆ ಒತ್ತಡ ಹೇರಿದೆ ಆಗ ಹೆಗಡೆಯವರು "ಇನ್ನೂ 6 ವರ್ಷ ಇದೆಯಲ್ಲಪ್ಪ ಮಾಡೋಣವಂತೆ ಎಂದರು. ಆಗ ಅಲ್ಲಿಗೆ ಬಂದ ನಜೀರ್ ಸಾಬ್" ಸಾರ್, ಇವರು ಶಿಕ್ಷಕರ ಪ್ರತಿನಿಧಿ ಭರವಸೆ ಕೊಟ್ಟು ಆಯ್ಕೆಯಾಗಿ ಬಂದಿದ್ದಾರೆ ಸಾಮಾನ್ಯ ಜನರಿಗೆ ನಾವು ಹೇಳಿದ ಹಾಗೆ ಹೇಳಲು ಸಾಧ್ಯವಿಲ್ಲ ಆದ್ದರಿಂದ ಅದನ್ನು ಮಾಡಬೇಕಾಗುತ್ತದೆ ಎಂದು ನನ್ನ ಪರ ವಹಿಸಿದರು. ಈ ರೀತಿಯಾಗಿ ವಸ್ತು ಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಶಕ್ತಿ ಅವರಲ್ಲಿತ್ತು.

ಒಮ್ಮೆ ಅವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗ ನನ್ನನ್ನು ಕರೆದು "ಮುನ್ನಾ ಬಾ ಇಲ್ಲಿ ಹೋಗಿ ಬರೋಣ" ಎಂದು ಕರೆದುಕೊಂಡು ಹೋದರು ಎಂ.ಜಿ. ರಸ್ತೆ, ಪಕ್ಕದಲ್ಲಿನ ಒಂದು ಸಣ್ಣ ಪುಸ್ತಕದ ಅಂಗಡಿಗೆ ಹೋಗಿ ಪುಸ್ತಕಕೊಡರು. ನಾನು ಮಂತ್ರಿಯಾಗಿದ್ದೇನೆ. ಸಣ್ಣ ಹೋಟೆಲಿಗೆ ಹೋಗಬಾರದು ಎನ್ನುವ ಅಹಂ ಇರಲಿಲ್ಲ. ಮಂತ್ರಿ ಆದಾಗಲೂ ಅವರು ಜನ ಸಾಮಾನ್ಯರಂತೆ ವರ್ತಿಸುತ್ತಿದ್ದರು.

ನಜೀರ್ ಸಾಬ್ ರಂತರ ರಾಜಕಾರಣಿಗಳು ಇಂದು ಅಪರೂಪ ಅವರು ಇಷ್ಟು ಬೇಗ ನಮ್ಮನ್ನು ಅಗಲದೇ ಹೋಗಿದ್ದರೆ ಮುಂದೊಂದು ದಿನ ಈ ರಾಜ್ಯದ ಚುಕ್ಕಾಣಿ ಹಿಡಿಯುವ ಭಾಗ್ಯ ಅವರಿಗೆ ಸಿಗುತ್ತಿತ್ತು ಅವರ ಅಕಾಲ ಮರಣದಿಂದಾಗಿ ಈ ರಾಜ್ಯಕ್ಕೆ ಒಬ್ಬ ಒಳ್ಳೆಯ ಮುಖ್ಯ ಮಂತ್ರಿ ಸಿಗುವ ಭಾಗ್ಯ ತಪ್ಪಿ ಹೋಯಿತು. ಆದರೂ ಅವರ ಆದರ್ಶ, ಕಾರ್ಯ ತತ್ಪರತೆ, ತತ್ವನಿಷ್ಠೆ, ಸ್ನೇಹ ಪರತೆ ಇಂದು ಜನಮನ ತಟ್ಟುತ್ತವೆ. ನೀರ್ ಸಾಬ್‌ರನ್ನು ನೆನೆದಾಗ ಕಣ್ಣಾಲಿಗಳಲ್ಲಿ ನೀರು ತುಂಬುತ್ತವೆ. ನಮ್ಮಂತಹ ಅನೇಕರಿಗೆ ಅವರು ದ್ರೋಣಾಚಾರ್ಯರಾಗಿ ಇಂದು ಕ್ರಿಯಾಶೀಲರಾಗುವುದನ್ನು ಕಲಿಸಿಕೊಡುತ್ತಿದ್ದಾರೆ. ಜನರ ಮನದಲ್ಲಿ ಅವರು ಅಚ್ಚ ಹಸಿರಾಗಿದ್ದಾರೆ.[34]

ಹೊಸ ಪ್ರಯೋಗದ ಅಭಿಯೋಜಕ

ಆರ್. ವಿ. ದೇಶಪಾಂಡೆ

ಕಾಂಗ್ರೆಸ್

ಮುಖಂಡರು

1983 ರಲ್ಲಿ ಕರ್ನಾಟಕದಲ್ಲಿ ಹೊಸ ರಾಜಕೀಯ ಪ್ರಾರಂಭವಾದಾಗಿನ ಸಂದರ್ಭದಲ್ಲಿ ದಿವಂಗತ ರಾಮಕೃಷ್ಣ ಹೆಗಡೆಯವರ ಸಚಿವ ಸಂಪುಟದಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಾಗಿದ್ದ ದಿವಂಗತ ಅಬ್ದುಲ್ ನಜೀರ್ ಸಾಬ್‌ರವರು ಮೊದಲು ವಿಧಾನ ಪರಿಷತ್ ಸದಸ್ಯರಾಗಿ ಕೆಲಸ ಮಾಡಿದವರು.

ಶ್ರೀ ಅಬ್ದುಲ್ ನಜೀರ್ ಸಾಬ್‌ರವರು ಪ್ರಗತಿಪರ ಧೋರಣೆಯ ಮೂಲಕ ಜನಾನುರಾಗಿಯಾಗಿ ಆ ಹೊತ್ತಿಗಾಗಲೇ ಕರ್ನಾಟಕದ ಜನತೆಗೆ ಚಿರಪರಿಚಿತರಾಗಿದ್ದರು. 1983ರಲ್ಲಿ ತಂದ ಕರ್ನಾಟಕದ ಜಿಲ್ಲಾ ಪಂಚಾಯತ್ ಮತ್ತು ಮಂಡಲ ಪಂಚಾಯತ್ ಮಸೂದೆಗಳ ಮೂಲ ಪ್ರೇರಣೆಯಾಗಿದ್ದರು. ಅವರ ಆಸಕ್ತಿಯಂತೆ ಜನತೆಯ ಕೈಗೆ ಅಧಿಕಾರ ಹಸ್ತಾಂತರಿಸುವ ಪ್ರಕ್ರಿಯೆಯಲ್ಲಿ ನಜೀರ್ ಸಾಬ್ ಅವರ ಪಾತ್ರ ಅತ್ಯಮೂಲ್ಯವಾಗಿತ್ತು. ಕರ್ನಾಟಕದ ಹೊಸ ಪ್ರಯೋಗದ ಅಭಿಯೋಜಕರಾಗಿ ಪ್ರೇರಣೆ ನೀಡಿದ ಕೀರ್ತಿ ಅಬ್ದುಲ್ ನಜೀರ್ ಸಾಬ್ ಅವರಿಗೆ ಸಲ್ಲುತ್ತದೆ. ಶ್ರೀ ನಜೀರ್ ಸಾಬ್ ಅವರ ತ್ಯಾಗ ಹಾಗೂ ದಯಾಪರ ಕಾಳಜಿ ಎಲ್ಲಾ ರಾಜಕಾರಣಿಗಳಿಗೆ ಮಾರ್ಗದರ್ಶನವಾಗಿದೆ.[35]

ಅಡಿ ಟಿಪ್ಪಣಿಗಳು :

1. ಟಿ.ಎಸ್. ಛಾಯಾಪತಿ - ತತ್ವನಿಷ್ಠ - ಪುಟಸಂಖ್ಯೆ ೧೨೨
2. ಮಾಹಿತಿ ಸಂಗ್ರಹಣೆ - ಶ್ರೀ ಅನ್ವರ್ ಪಾಷ - ಖಜಾಂಚಿಗಳು
   ಶ್ರೀ ಜವಹರಣ ಶಿಕ್ಷಣ ಸಂಸ್ಥೆ, ಗುಂಡ್ಲುಪೇಟೆ
3. ಪ್ರೋ. ಮಲೆಯೂರು ಗುರುಸ್ವಾಮಿ - 'ಹೊನ್ನುಹೊಳೆ' ಪುಟ ಸಂಖ್ಯೆ 461
4. ಮಾಹಿತಿ ಸಂಗ್ರಹಣೆ 'ಜಿ.ಸಿ. ಚಿಕ್ಕಣ್ಣನವರು' ಮಾಜಿ ಪುರಸಭಾ ಅಧ್ಯಕ್ಷರು, ಗುಂಡ್ಲುಪೇಟೆ.
5. ಮಾಹಿತಿ ಸಂಗ್ರಹಣೆ - 'ಬರಗಿ ನಾಗಮಲ್ಲಪ್ಪ' - ನಜೀರ್ ಸಾಬ್ ಸ್ನೇಹಿತರು, ಗುಂಡ್ಲುಪೇಟೆ
6. ಮಾಹಿತಿ ಸಂಗ್ರಹಣೆ 'ಜಿ.ಸಿ. ಚಿಕ್ಕಣ್ಣ' ಮಾಜಿ ಪುರಸಭಾ ಅಧ್ಯಕ್ಷರು, ಗುಂಡ್ಲುಪೇಟೆ.
7. ಮಾಹಿತಿ ಸಂಗ್ರಹಣೆ - ಶಾಹುತ್ ಹಮೀಪ - ಮಾಜಿ ಪುರಸಭಾ ಅಧ್ಯಕ್ಷರು, ಗುಂಡ್ಲುಪೇಟೆ.
8. ಮನು ಬಳಿಗಾರ್ 'ಸಂಸದೀಯ ಪಟು ನಜೀರ್ ಸಾಬ್' ಪುಟ ಸಂಖ್ಯೆ 64 - 65
9. ಮನು ಬಳಿಗಾರ್ ಸಂಸದೀಯ ಪಟು ನಜೀರ್ ಸಾಬ್ ಪುಟಸಂಖ್ಯೆ 43, 45, 46, 47
10. ಮನು ಬಳಿಗಾರ್ ಸಂಸದೀಯ ಪಟು ನಜೀರ್ ಸಾಬ್ ಪುಟ ಸಂಖ್ಯೆ 33, 34, 35, 36

11. ಟಿ.ಎಸ್. ಛಾಯಾಪತಿ 'ತತ್ವ ನಿಷ್ಠ' ಪುಟಸಂಖ್ಯೆ 8, 9, 10, 11
12. ಮನು ಬಳಿಗಾರ್ 'ಸಂಸದೀಯ ಪಟು ' ನಜೀರ್‌ಸಾಬ್ , ಪುಟ ಸಂಖ್ಯೆ 64, 65
13. ಮಾಹಿತಿ ಸಂಗ್ರಹಣೆ : ಜಿ.ಸಿ. ಚಿಕ್ಕಣ್ಣ - ಮಾಜಿ ಪುರಸಭಾ ಅಧ್ಯಕ್ಷರು, ಗುಂಡ್ಲುಪೇಟೆ
14. ಟಿ.ಎಸ್. ಛಾಯಾಪತಿ 'ತತ್ವ ನಿಷ್ಠ' ಪುಟ ಸಂಖ್ಯೆ 18, 19
15. ಟಿ.ಎಸ್. ಛಾಯಾಪತಿ ತತ್ವ ನಿಷ್ಠ ಪುರಸಂಖ್ಯೆ 23, 24.
16. ಮನು ಬಳಿಗಾರ್ 'ಸಂಸದೀಯ ಪಟು - ನಜೀರ್ ಸಾಬ್-ಪುಟ ಸಂಖ್ಯೆ: 69, 78, 79, 80, 81
17. ಟಿ.ಎಸ್. ಛಾಯಾಪತಿ 'ತತ್ವ ನಿಷ್ಠಾ' ಪುಟಸಂಖ್ಯೆ 25, 26, 27, 28
18. ಟಿ.ಎಸ್. ಛಾಯಾಪತಿ 'ತತ್ವನಿಷ್ಠಾ' ಪುಟ ಸಂಖ್ಯೆ 29
19. ಮನು ಬಳಿಗಾರ್ ಸಂಸದೀಯ ಪಟು - ನಜೀರ್ ಸಾಬ್ - ಪುಟಸಂಖ್ಯೆ 83
20. ಟಿ.ಎಸ್. ಛಾಯಾಪತಿ -ತತ್ವ ನಿಷ್ಠ - ಪುಟಸಂಖ್ಯೆ 32, 33
21. ಮನು ಬಳಿಗಾರ್ ಸಂಸದೀಯ ಪಟು ನಜೀರ್ ಸಾಬ್ - ಪುಟ ಸಂಖ್ಯೆ 186, 187, 215, 216, 240, 241.
22. ಟಿ.ಎಸ್. ಛಾಯಾಪತಿ - ತತ್ವ ನಿಷ್ಠ- ಪುಟಸಂಖ್ಯೆ 35, 36
23. ಮಾಹಿತಿ ಸಂಗ್ರಹಣೆ -ಅನ್ವರ್ ಪಾಷ - ಖಜಾಂಚಿಗಳು - ಶ್ರೀ ಜವಹರ್ ಶಿಕ್ಷಣ ಸಂಸ್ಥೆ, ಗುಂಡ್ಲುಪೇಟೆ
24. ಟಿ.ಎಸ್. ಛಾಯಾಪತಿ - ತತ್ವ ನಿಷ್ಠ- ಪುಟ ಸಂಖ್ಯೆ 38, 16, 17
25. ನೀ ಗಿರೀಗೌಡ ಮತ್ತು ಜಿ.ಜಿ. ಮಂಜುನಾಥನ್ 'ಸ್ಕಂದಗಿರಿ' ಪುಟ ಸಂಖ್ಯೆ 117, 118
26. ಮನು ಬಳಿಗಾರ - ಸಂಸದೀಯ ಪಟು - ನಜೀರ್ ಸಾಬ್ - ಪುಟಸಂಖ್ಯೆ 29
27. ಟಿ.ಎಸ್. ಛಾಯಾಪತಿ ತತ್ವ ನಿಷ್ಠಾ - ಪುಟ ಸಂಖ್ಯೆ - 39, 40
28. ಮನು ಬಳಿಗಾರ್ ಸಂಸದೀಯ ಪಟು - ನಜೀರ್ ಸಾಬ್ ಪುಟ ಸಂಖ್ಯೆ 30
29. ಟಿ.ಎಸ್. ಛಾಯಾಪತಿ -ತತ್ವ ನಿಷ್ಠ - ಪುಟ ಸಂಖ್ಯೆ 41
30. ಡಾ. ಪಳನಿ ಸ್ವಾಮಿ - ಗುಂಡ್ಲುಪೇಟೆ ತಾ. ಒಂದು ಸಾಂಸ್ಕೃತಿಕ - ಅಧ್ಯಯನ- ಪುಟ ಸಂಖ್ಯೆ 321
31. ಮಾಹಿತಿ ಸಂಗ್ರಹಣೆ, ಜಿ.ಸಿ. ಚಿಕ್ಕಣ್ಣನವರು ಮಾಜಿ ಪುರಸಭಾ ಅಧ್ಯಕ್ಷರು, ಗುಂಡ್ಲುಪೇಟೆ,
32. ಮಾಹಿತಿ ಸಂಗ್ರಹಣೆ, ಶ್ರೀ ಅನ್ವರ್ ಪಾಷರವರು, ಖಜಾಂಚಿಗಳು ಶ್ರೀ ಜವಹರ ಶಿಕ್ಷಣ ಸಂಸ್ಥೆ ರಿ. ಗುಂಡ್ಲುಪೇಟೆ
33. ಮನು ಬಳಿಗಾರ್ ಸಂಸದೀಯ ಪಟು - ನಜೀರ್ ಸಾಬ್ ಪುಟ ಸಂಖ್ಯೆ
34. ಮನು ಬಳಿಗಾರ್ ಸಂಸದೀಯ ಪಟು - ನಜೀರ್ ಸಾಬ್ ಪುಟ ಸಂಖ್ಯೆ
35 ಮನು ಬಳಿಗಾರ್ ಸಂಸದೀಯ ಪಟು - ನಜೀರ್ ಸಾಬ್ ಪುಟ ಸಂಖ್ಯೆ

ಅಧ್ಯಾಯ - ೫

ಉಪಸಂಹಾರ

ಅಧ್ಯಾಯ -5

ಉಪ ಸಂಹಾರ

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಹಲವಾರು ಮಹಾನ್ ನಾಯಕರುಗಳು ಕರ್ನಾಟಕದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಅವರುಗಳಲ್ಲಿ ಸರಳತೆ, ಸಜ್ಜನಿಕತೆ ವಿಶ್ವಾಸರ್ಹತೆ, ಪ್ರಾಮಾಣಿಕತೆ ಹಾಗೂ ತತ್ವ ನಿಷ್ಠತೆಯನ್ನು ಮೈಗೂಡಿಸಿ ಕೊಂಡಿದ್ದ ಶ್ರೀ ಅಬ್ದುಲ್ ನಜೀರ್‌ಸಾಬ್ ಪ್ರಮುಖರಾಗಿದ್ದಾರೆ. ಸಮಾಜದಲ್ಲಿ ಇಂದು ಮುಖವಾಡ ಧರಿಸುವ ವ್ಯಕ್ತಿಗಳೇ ಜಾಸ್ತಿ, ಇದರಿಂದ ಅವರ ನಿಜವಾದ ಮುಖ ಕಾಣಿಸುವುದೇ ಇಲ್ಲ. ಅವರು ಸ್ವಾರ್ಥಕ್ಕೆ ಸಮಯ ಸ್ಫೂರ್ತಿಯಿಂದ ಘೋಷಣೆಗಳನ್ನು ಕೂಗುತ್ತಾರೆ. ಅವರಿಗೆ ಜನತೆಯ ಅಭ್ಯುದಯವಾಗಲೀ, ಹಿತಾಸಕ್ತಿಯಾಗಲೀ ಇರಲು ಸಾಧ್ಯವೇ ಇಲ್ಲ. ಆದರೆ ನಜೀರ್ ಸಾಹೇಬರು ಜನತೆಯ ಕಲ್ಯಾಣಕ್ಕೋಸ್ಕರ ತಮ್ಮ ತನು ಮನವನ್ನೇ ಧಾರೆ ಎರೆದರು. ಕರ್ನಾಟಕದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಅಸ್ತಿತ್ವದಲ್ಲಿರುವುದು ಇದಕ್ಕೆ ನಿದರ್ಶನ. ಕರ್ನಾಟಕದಲ್ಲಿ ಜಾರಿಗೆ ಬಂದ ವ್ಯವಸ್ಥೆ ದೇಶಕ್ಕೆ ಮಾದರಿಯಾಗಿದೆ.

ಕರ್ನಾಟಕದಲ್ಲಿ ಅಧಿಕಾರ ವಿಕೇಂದ್ರಿಕರಣದ ರೂವಾರಿಯಾದ ಅಬ್ದುಲ್ ನಜೀರ್ ಸಾಬ್ ರಾಮಕೃಷ್ಣ ಹೆಗಡೆಯವರ ಸಹಾಯದಿಂದ 1987 ರಲ್ಲಿ ಪಂಚಾಯತ್ ರಾಜ್ ವಿಧೇಯಕವನ್ನು ಪಾಸು ಮಾಡಿದರು. ವಾಸ್ತವವಾಗಿ ಕರ್ನಾಟಕದ ಪಂಚಾಯತ್ ರಾಜ್ ವಿಧೇಯಕ ಇಡೀ ರಾಷ್ಟ್ರಕ್ಕೆ ಮಾದರಿ ವಿಧೇಯಕವಾಗಿ ರೂಪುಗೊಂಡಿತು. ಹಾಲಿ ಪಂಚಾಯತ್ ರಾಜ್ ವಿಧೇಯಕವನ್ನು ಆಧಾರವಾಗಿಟ್ಟುಕೊಂಡು ರಾಜೀವ್ ಗಾಂಧಿಯವರ ಆಡಳಿತಾವಧಿಯಲ್ಲಿ ಇಡೀ ದೇಶಕ್ಕೆ ಮಾದರಿಯಾಗುವ ಪಂಚಾಯತ್ ರಾಜ್ ಪದ್ಧತಿಯನ್ನು ಜಾರಿಗೆ ತರಲಾಯಿತು.

ಅಬ್ದುಲ್ ನಜೀರ್ ಸಾಬ್‌ರವರು ವಿರಳ ಸಾಧಕರಲ್ಲಿ ಒಬ್ಬರಾಗಿದ್ದರು. ಅಧಿಕಾರದ ಗದ್ದುಗೆಯ ಮೇಲೆ ಕುಳಿತು. ಹಿಡಿದ ಕೆಲಸವನ್ನು ಸಾಧಿಸಲೇಬೇಕು ಎಂಬ ಛಲದಿಂದ ಅದನ್ನು ಸಾಧಿಸಿ ಗುರಿ ಮುಟ್ಟಿದವರ ಸಂಖ್ಯೆ ಬಹಳ ವಿರಳ. ಗಾಂಧೀಜಿಯವರ ಕನಸಿನ ಕೂಸಾಗಿದ್ದ ಗ್ರಾಮಸ್ವರಾಜ್ಯ ಅಥವಾ ಅಧಿಕಾರ ವಿಕೇಂದ್ರಿಕರಣದ ಕಲ್ಪನೆಯನ್ನು ನನಸಾಗಿಸಿದಂತಹ ದಿಟ್ಟ ವೀರ ಶ್ರೀ ಅಬ್ದುಲ್ ನಜೀರ್ ಸಾಬ್.

ಯಾವುದೇ ವ್ಯಕ್ತಿಗೆ ಅಧಿಕಾರ ಮುಖ್ಯವಾಗಿರುತ್ತದೆ. ಆದರೆ ಅದು ಶಾಶ್ವತವಲ್ಲ ಎಂದು ತೋರಿಸಿಕೊಟ್ಟವರು ನಜೀರ್‌ಸಾಬ್. ಅವರ ಅಧಿಕಾರದಲ್ಲಿದ್ದಾಗ ಎಂದು ದರ್ಪಿಷ್ಟರಾಗಿ ನಡೆದುಕೊಂಡವರಲ್ಲ ಗ್ರಾಮೀಣಾಭಿವೃದ್ಧಿ ಸಚಿವರಾಗಿ ಅವರು ಇಂದು ಕರ್ನಾಟಕದ ಇತಿಹಾಸದಲ್ಲಿ ಜನತೆ ಎಂದೆಂದೂ ನೆನೆಸುವಂಥ ಕಾರ್ಯವನ್ನು ಮಾಡಿದ್ದಾರೆ. ಜನತೆಯ ಮೂಲಭೂತ ಅವಶ್ಯಕತೆಯಾದ ಶುದ್ಧ ಕುಡಿಯುವ ನೀರನ್ನು ಇಂದು ಕರ್ನಾಟಕದ ಹಳ್ಳಿ ಹಳ್ಳಿಗೆ ಪೂರೈಸಿ 'ನೀರ್ ಸಾಬ್' ಎಂದು ಕರ್ನಾಟಕದ ಮೂಲೆ ಮೂಲೆಗಳಲ್ಲಿ ಜನ ಜನಿತರಾಗಿದ್ದಾರೆ ಅಲ್ಲದೆ ಅಧಿಕಾರ ನಡೆಸುವ ಹಕ್ಕನ್ನು ಜನತೆಯ ಮನೆ ಮುಂದೆಯೆ ಕಲ್ಪಿಸಿದ್ದಾರೆ.


ಆದರ್ಶ, ಕಾರ್ಯತತ್ಪರತೆ, ತತ್ವನಿಷ್ಠೆ, ಸ್ನೇಹ ಪರತೆ, ಜನಪರ ಕಾಳಜಿ, ನಜೀರ್ ಸಾಬ್‌ರ ಉಸಿರಾಗಿದ್ದವು. ಶ್ರೇಷ್ಠ ಮಾನವತಾ ವಾದಿಯಾಗಿದ್ದ ಅವರು ಜಾತಿಯನ್ನೇ ಮೀರಿದ ವ್ಯಕ್ತಿಗಳಾಗಿದ್ದರು. ಜಾತಿ ಧರ್ಮಗಳ ಮೇಲಾಟದ ಪರಿಸರದಲ್ಲಿ ಇದೂ ಸಹ ಕೆಲವೊಮ್ಮೆ ಪರಿಗಣಿತವಾಗುತ್ತದೆ ಎನ್ನುವುದಕ್ಕೆ ನಜೀರ್ ಸಾಬ್‌ರವರ ರಾಜಕೀಯ ಏಳು ಬೀಳುಗಳಲ್ಲಿಯೇ ಪುರಾವೆ ಸಿಕ್ಕುತ್ತವೆ.

ಶ್ರೀ ಅಬ್ದುಲ್ ನಜೀರ್ ಸಾಬ್‌ಅವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗ ಜಾರಿಗೆ ತಂದ ಶುದ್ಧ ಕುಡಿಯುವ ನೀರಿನ ಪೂರೈಕೆ, ನಿರ್ಗತಿಕರಿಗೆ ವಸತಿಗಳ ನಿರ್ಮಾಣ, ಒಣ ಭೂಮಿ ಅಭಿವೃದ್ಧಿ, ಕರ್ನಾಟಕ ಪಂಚಾಯತ್ ರಾಜ್ ವಿಧೇಯಕ, ಅಂತ್ಯೋದಯ ಕಾರ್ಯಕ್ರಮ ಕೊಳವೆ ಬಾವಿಗಳ ನಿರ್ಮಾಣ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ ಮುಂತಾದವುಗಳು ನಜೀರ್ ಸಾಬ್‌ರಿಗೆ ಹೆಸರನ್ನು ತಂದು ಕೊಟ್ಟವು. ಗ್ರಾಮೀಣಾಭಿವೃದ್ಧಿಗೆ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿದ ನಜೀರ್ ಸಾಬ್ ಅವರ ನೆನಪಿಗಾಗಿ ಮೈಸೂರಿನ ಗ್ರಾಮೀಣಾಭಿವೃದ್ಧಿ ಸಂಸ್ಥೆಗೆ ಅಬ್ದುಲ್ ನಜೀರ್ ಸಾಬ್ ಹೆಸರನ್ನಿಟ್ಟಿರುವುದು ಅರ್ಥ ಪೂರ್ಣವಾಗಿದೆ ಹೀಗೆ ಅಬ್ದುಲ್ ನಜೀರ್ ಸಾಬ್ ಕೋಟಿ ಕೋಟಿ ಕನ್ನಡಿಗರ ಹೃದಯದಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ.[35]

ಗ್ರಂಥ ಋಣ


1. "ಹೊನ್ನುಹೊಳೆ "- ಪ್ರೊ. ಮಲೆಯೂರು ಗುರುಸ್ವಾಮಿ, ರಾಜೇಂದ್ರ ಪ್ರಿಂಟರ್ಸ್, ಮೈಸೂರು 2007
2. "ಗುಂಡ್ಲುಪೇಟೆ ಒಂದು ಸಾಂಸ್ಕೃತಿಕ ಅಧ್ಯಯನ" ಡಾ. ಪಳನಿಸ್ವಾಮಿ, ರಾಜೇಂದ್ರ ಪ್ರಿಂಟರ್ಸ್, - ಮೈಸೂರು 2011
3. "ತತ್ವ ನಿಷ್ಠ" ಟಿ.ಎಸ್. ಛಾಯಾಪತಿ, ಪ್ರತಿ ಪ್ರಕಾಶನ, ಮೈಸೂರು 1989
4. ಸಂಸದೀಯ ಪಟು "ಅಬ್ದುಲ್ ನಜೀರ್ ಸಾಬ್" ಮನು ಬಳಿಗಾರ್, ಗ್ರಂಥಾಲಯ ಸಮಿತಿ, - ವಿಧಾನ ಮಂಡಲ, ಬೆಂಗಳೂರು 2005
5. "ಸ್ಕಂದಗಿರಿ" ನೀ. ಗಿರಿಗೌಡ ಮತ್ತು ಜಿ.ಜಿ. ಮಂಜುನಾಥ್‌ನ್- ಪ್ರಕಾಶನ, ಸ್ವಾಗತ ಸಮಿತಿ, ಗುಂಡ್ಲುಪೇಟೆ
6. A Review of working karnataka Legislative assembly
7. Karnataka State Legislative Council debets.
8. A Karnataka State Legislative Assembly debets
9. ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಲೇಖನಗಳು
    1. ಪ್ರಜಾವಾಣಿ - 25-12-2011
    2. ವಿಜಯಕರ್ನಾಟಕ - 28-05-2012
10. ಮಾಹಿತಿ ಸಂಗ್ರಹಣೆ
    * ಶ್ರೀ ಅನ್ವರ್ ಪಾಷರವರು - ನಜೀರ್ ಸಾಬ್‌ರ ಸಹೋದರ ಮತ್ತು ಖಜಾಂಚಿಗಳು
    * ಶ್ರೀ ಜವಹರ್ ಶಿಕ್ಷಣ ಸಂಸ್ಥೆ (ರಿ.) ಗುಂಡ್ಲುಪೇಟೆ
11. ಶ್ರೀ ಜಿ.ಸಿ. ಚಿಕ್ಕಣ್ಣನವರು - ಮಾಜಿ ಪುರಸಭಾ ಅಧ್ಯಕ್ಷರು ಮತ್ತು ನಜೀರ್ ಸಾಬ್ ಮಿತ್ರರು, ಗುಂಡ್ಲುಪೇಟೆ
12. ಶ್ರೀ ಬರಗಿ ನಾಗಮಲ್ಲಪ್ಪನವರು- ನಜಾರ್ ಸಾಬ್‌ರ ಹಿತೈಷಿಗಳು ಮತ್ತು ಸಮಕಾಲೀನರು.

ಛಾಯಾ ಚಿತ್ರಗಳು



ಶ್ರೀ ಅಬ್ದುಲ್ ನಜೀರ್ ಸಾಬ್‌ರವರು





ಅಮ್ಮ ಮಗನಂತಿದ್ದ ಶ್ರೀಮತಿ ಕೆ.ಎಸ್. ನಾಗರತ್ನಮ್ಮ ಮತ್ತು ಶ್ರೀ ಅಬ್ದುಲ್ ನಜೀರ್ ಸಾಬ್‌ರವರು



ಶ್ರೀ ಅಬ್ದುಲ್ ನಜೀರ್ ಸಾಬ್‌ರವರ ಮನೆ, ಗುಂಡ್ಲುಪೇಟೆ



ಶ್ರೀ ಅಬ್ದುಲ್ ನಜೀರ್ ಸಾಬ್‌ರವರು ಅಧ್ಯಕ್ಷರಾಗಿದ್ದ
ಗುಂಡ್ಲುಪೇಟೆ ಪುರಸಭೆ




ಕಲ್ಲುಕಟ್ಟೆ ಹಳ್ಳ, ಕೋಡಹಳ್ಳಿ, ಗುಂಡ್ಲುಪೇಟೆ ತಾ.



ನಲ್ಲೂರ ಅಮಾನಿ ಕೆರೆ, ಗುಂಡ್ಲುಪೇಟೆ ತಾ.




ಶ್ರೀ ಅಬ್ದುಲ್ ನಜೀರ್ ಸಾಬ್ ಸ್ಥಾಪಿಸಿದ
ಶ್ರೀ ಜವಹರ್ ಶಿಕ್ಷಣ ಸಂಸ್ಥೆ (ರಿ.) ಗುಂಡ್ಲುಪೇಟೆ



ಸಾರ್ವಜನಿಕ ಆಸ್ಪತ್ರೆ, ಗುಂಡ್ಲುಪೇಟೆ



ಮೈಸೂರು ಜಿಲ್ಲಾ ಪಂಚಾಯತ್ ಮುಂಭಾಗದಲ್ಲಿರುವ
ಅಬ್ದುಲ್ ನಜೀರ್ ಸಾಬರ ಶಿಲಾ ಪ್ರತಿಮೆ.



ಮೈಸೂರು ಜಿಲ್ಲಾ ಪಂಚಾಯತ್ ಕಾರ್ಯಾಲಯದಲ್ಲಿರುವ
ಅಬ್ದುಲ್ ನಜೀರ್ ಸಾಬ್ ಸಭಾಂಗಣ



ಮೈಸೂರಿನಲ್ಲಿರುವ ಅಬ್ದುಲ್ ನಜೀರ್ ಸಾಬ್
ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ